ಬೆಂಗಳೂರು
ಶುಕ್ರವಾರ, 13 ಮಾರ್ಚ್ 2026
ಸಂಪುಟ 33, ಸಂಚಿಕೆ 132, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
# ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಸಾಧಕ ಮಹಿಳಾ ರೈತರಿಗೆ ಪ್ರಚಾರ ಅಗತ್ಯ | ೦೫
ಸಿಇಸಿ ಪದಚ್ಯುತಿಗೆ 200 ಸಂಸದರ ಸಹಿ | ೦೫
ಜೀವಮಾನದ ಗೋಡೆಗೆ ಬಿಸಿಸಿಐ ಗರಿ | ೧೨

## ಹಾರ್ಮುಜ್ ಮೂಲಕ ಭಾರತೀಯ ಹಡಗುಗಳು ಸಂಚರಿಸಲು ಇರಾನ್ ಅನುಮತಿ
# ಭಾರತಕ್ಕೆ ತೈಲ, ಅನಿಲ ಸರಾಗ

• **ಹೊಸದಿಲ್ಲಿ:** ಇಸ್ರೇಲ್-ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಭಾರತದ ತೈಲ ಟ್ಯಾಂಕರ್‌ಗಳು ಹಾಗೂ ಕಂಟೈನರ್ ಹಡಗುಗಳು ಹಾರ್ಮುಜ್ ಜಲಸಂಧಿಯ ಮೂಲಕ ಸಂಚರಿಸಲು ಇರಾನ್ ಅನುಮತಿ ನೀಡಿದ್ದು, ಇದು ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಸಿಕ್ಕ ಮಹತ್ವದ ಗೆಲುವು ಎಂದು ಬಣ್ಣಿಸಲಾಗಿದೆ.




ಈ ಮಹತ್ವದ ಬೆಳವಣಿಗೆಯು ಭಾರತಕ್ಕೆ ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ಪೂರೈಕೆಯನ್ನು ಸರಾಗಗೊಳಿಸಲಿದೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಹಾಗೂ ಇರಾನ್‌ನ ತನ್ನ ಸಹವರ್ತಿ ಸಯ್ಯದ್ ಅಬ್ಬಾಸ್ ಅರಾಗ್ಚಿ ಅವರ ನಡುವೆ 3 ಬಾರಿ ದೂರವಾಣಿ ಮಾತುಕತೆಯ ಬಳಿಕ ಈ ಅನುಮತಿ ಲಭ್ಯವಾಗಿದೆ ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಹಡಗುಗಳು ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟುತ್ತಿರುವುದಾಗಿ ಮಾಹಿತಿ ಸಿಕ್ಕಿದೆ. ಇದರ ಮಧ್ಯೆ, ಹಾರ್ಮುಜ್ ಜಲಸಂಧಿಯ ಮೂಲಕ ಕಚ್ಚಾ ತೈಲವನ್ನು ಹೊತ್ತುಕೊಂಡು ಬಂದ ಒಂದು ಹಡಗು ಮುಂಬೈ ಬಂದರಿಗೆ ತಲುಪಿದೆ. ಸೌದಿ ಅರೇಬಿಯಾದಿಂದ ಹೊರಟ ಲೈಬೀರಿಯಾ ಧ್ವಜದ ಟ್ಯಾಂಕರ್ ಬುಧವಾರ ಮುಂಬೈ ಬಂದರಿಗೆ ಬಂದಿದ್ದು, ಯುದ್ಧ ಆರಂಭವಾದ ಬಳಿಕ ಈ ಮಾರ್ಗದ ಮೂಲಕ ಭಾರತಕ್ಕೆ ತಲುಪಿದ ಮೊದಲ ತೈಲ ಹಡಗು ಇದಾಗಿದೆ. ➡ಪುಟ 5

### ದೇಶದಲ್ಲಿ ಇಂಧನ ಕೊರತೆ ಇಲ್ಲ

ಇದರ ನಡುವೆ, ಇಂಧನ ಸಚಿವ ಹರದೀಪ್ ಸಿಂಗ್ ಪುರಿ ಗುರುವಾರ ಸಂಸತ್ತಿನಲ್ಲಿ ಮಾತನಾಡಿ ದೇಶದಲ್ಲಿ ಇಂಧನ ಕೊರತೆ ಇಲ್ಲ ಎಂದು ಹೇಳಿದರು. ಆಧುನಿಕ ಇಂಧನ ಇತಿಹಾಸದಲ್ಲಿ ಇಂತಹ ಕ್ಷಣವನ್ನು ಜಗತ್ತು ಎದುರಿಸಿಲ್ಲ. ಭಾರತದ ಕಚ್ಚಾ ತೈಲ ಸರಬರಾಜು ಸುರಕ್ಷಿತವಾಗಿದೆ. ಹಾರ್ಮುಜ್ ಮೂಲಕ ಬರಬೇಕಿದ್ದ ಪ್ರಮಾಣಕ್ಕಿಂತಲೂ ಹೆಚ್ಚು ತೈಲವನ್ನು ಭಾರತ ಈಗಾಗಲೇ ಖಚಿತಪಡಿಸಿಕೊಂಡಿದೆ ಎಂದು ಹೇಳಿದರು.



ಭಾರತಕ್ಕೆ ತೈಲ ತಂದ ಟ್ಯಾಂಕರ್‌ನ ರಹಸ್ಯ ಪ್ರಯಾಣ

### ಯುದ್ಧದ ನೆರಳಲ್ಲಿ 'ಕತ್ತಲ ದಾರಿ' ಪಯಣ!

• **ಮುಂಬೈ:** ಮಧ್ಯಪ್ರಾಚ್ಯದಲ್ಲಿ ಅಮೆರಿಕ- ಇರಾನ್ ಸಂಘರ್ಷ ತೀವ್ರವಾಗಿರುವ ಸಂದರ್ಭದಲ್ಲಿ, ತೈಲ ಹೊತ್ತುಕೊಂಡು ಬಂದ ಒಂದು ದೊಡ್ಡ ಕಚ್ಚಾತೈಲ ಟ್ಯಾಂಕರ್ "ಕತ್ತಲ ದಾರಿ" ಬಳಸಿಕೊಂಡು ಅಪಾಯಕರ ಹಾರ್ಮುಜ್ ಜಲಸಂಧಿಯನ್ನು ದಾಟಿ ಎಲ್ಲರಿಗೂ ಅಚ್ಚರಿ ಮೂಡಿಸಿದೆ. ಸೌದಿ ಅರೇಬಿಯಾದಿಂದ ಹೊರಟ ಈ ಲಿಬೇರಿಯಾ ಧ್ವಜದ "ಶೆನ್‌ಲಾಂಗ್ ಸ್ಯೂಯೆಜ್‌ಮ್ಯಾಕ್ಸ್" ಟ್ಯಾಂಕರ್ ಸುಮಾರು 1.35 ಲಕ್ಷ ಮೆಟ್ರಿಕ್ ಟನ್ ಕಚ್ಚಾ ತೈಲ ಹೊತ್ತು ಮುಂಬೈ ಬಂದರಿಗೆ ಸುರಕ್ಷಿತವಾಗಿ ತಲುಪಿದೆ. ಅಮೆರಿಕ-ಇರಾನ್ ಯುದ್ಧ ಆರಂಭವಾದ ಬಳಿಕ ಹಾರ್ಮುಜ್ ಮೂಲಕ ಭಾರತ ತಲುಪಿದ ಮೊದಲ ಟ್ಯಾಂಕರ್ ಇದಾಗಿದೆ.

**'ಡಾರ್ಕ್ ಮೋಡ್' ಎಂದರೇನು?:** ಸಾಮಾನ್ಯವಾಗಿ ಸಮುದ್ರದಲ್ಲಿ ಸಾಗುವ ಪ್ರತಿಯೊಂದು ಹಡಗು ಆಟೋಮ್ಯಾಟಿಕ್ ಐಡೆಂಟಿಫಿಕೇಶನ್ ಸಿಸ್ಟಮ್ (ಎಐಎಸ್) ಮೂಲಕ ತನ್ನ ಗುರುತು, ಸ್ಥಳ ಮತ್ತು ದಿಕ್ಕನ್ನು ಪ್ರಸಾರ ಮಾಡುತ್ತದೆ. ➡ಪುಟ 5

### ಅಪಾಯದ ನಡುವೆ ಸಾಹಸ

ಈ ಹಡಗಿನ ಪ್ರಯಾಣ ಮಾರ್ಚ್ 1ರಂದು ಸೌದಿ ಅರೇಬಿಯಾದ ರಾಸ್ ತನೂರಾ ಬಂದರಿನಿಂದ ಆರಂಭವಾಯಿತು. ಕೆಲ ದಿನಗಳ ಬಳಿಕ ಅದು ಯುದ್ಧದಿಂದ ಉದ್ವಿಗ್ನವಾಗಿರುವ ಹಾರ್ಮುಜ್ ಜಲಸಂಧಿಗೆ ಪ್ರವೇಶಿಸಿತು. ಇತ್ತೀಚಿನ ಸಂಘರ್ಷಗಳಿಂದಾಗಿ ಈ ಮಾರ್ಗದಲ್ಲಿ ಹಲವಾರು ಹಡಗುಗಳ ಮೇಲೆ ದಾಳಿ ನಡೆದಿರುವುದರಿಂದ ಬಹುತೇಕ ವ್ಯಾಪಾರಿ ಹಡಗುಗಳು ಸಂಚಾರವೇ ನಿಲ್ಲಿಸಿವೆ. ಆದರೆ ಈ ಟ್ಯಾಂಕರ್ ಮಾತ್ರ ಅಪಾಯವನ್ನು ಲೆಕ್ಕಿಸದೆ "ಡಾರ್ಕ್ ಟ್ರಾನ್ಸಿಟ್" ತಂತ್ರದಿಂದ ಮಾರ್ಗ ದಾಟಿ ಮುಂಬೈ ಬಂದರಿಗೆ ಸುರಕ್ಷಿತವಾಗಿ ತಲುಪಿದೆ.

### ಅನುಮತಿ ಪಡೆಯದ ಹಡಗುಗಳಿಗೆ ಎಚ್ಚರಿಕೆ

ಭಾರತೀಯ ಹಡಗುಗಳಿಗೆ ಅನುಮತಿ ನೀಡಿದ್ದರೂ, ಹಾರ್ಮುಜ್ ಜಲಸಂಧಿಯನ್ನು ದಾಟಲು ಬಯಸುವ ಎಲ್ಲಾ ಹಡಗುಗಳು ಇರಾನ್‌ನಿಂದ ಪೂರ್ವಾನುಮತಿ ಪಡೆಯಬೇಕು ಎಂದು ಇರಾನ್ ಎಚ್ಚರಿಸಿದೆ. ಅನುಮತಿ ಪಡೆಯದೇ ಸಾಗಿದರೆ ಹಡಗುಗಳನ್ನು ಗುರಿಯಾಗಿಸಲಾಗುವುದು ಎಂದು ತಿಳಿಸಲಾಗಿದೆ. ➡ಪುಟ 5

### ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ 28 ಭಾರತೀಯ ಹಡಗುಗಳು

ಭಾರತದ ನೌಕಾ ಸಾಗಣೆ ಸಚಿವಾಲಯದ ಪ್ರಕಾರ, ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಈಗ 28 ಭಾರತೀಯ ಧ್ವಜ ಹೊಂದಿರುವ ಹಡಗುಗಳು ಕಾರ್ಯನಿರ್ವಹಿಸುತ್ತಿವೆ. ಹಾರ್ಮುಜ್ ಜಲಸಂಧಿಯ ಪಶ್ಚಿಮ ಭಾಗದಲ್ಲಿ 24 ಹಡಗುಗಳು, 677 ಭಾರತೀಯ ನೌಕರರು ಮತ್ತು ಜಲಸಂಧಿಯ ಪೂರ್ವ ಭಾಗದಲ್ಲಿ 4 ಹಡಗುಗಳು, 101 ಭಾರತೀಯ ನೌಕರರು ಇದ್ದಾರೆ. ಅಧಿಕಾರಿಗಳು ಪರಿಸ್ಥಿತಿಯನ್ನು ಸಮೀಪದಿಂದಲೇ ಗಮನಿಸುತ್ತಿದ್ದಾರೆ ಮತ್ತು ಭಾರತೀಯ ಹಡಗುಗಳು ಹಾಗೂ ನೌಕರರ ಸುರಕ್ಷತೆಗಾಗಿ ನಿರಂತರವಾಗಿ ಸಂಪರ್ಕದಲ್ಲಿದ್ದಾರೆ.



### ಯುದ್ಧ ಕೊನೆಗೊಳಿಸಲು ಷರತ್ತು ವಿಧಿಸಿದ ಇರಾನ್

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷವು ಭಾರೀ ತಿರುವು ಪಡೆದುಕೊಂಡಿದ್ದು, ಈ ಯುದ್ಧವನ್ನು ಕೊನೆಗೊಳಿಸಲು ಅಮೆರಿಕ ಮತ್ತು ಇಸ್ರೇಲ್ ಮುಂದೆ ಇರಾನ್ ಮೂರು ಷರತ್ತುಗಳನ್ನು ಮಂಡಿಸಿದೆ. ಒಂದು ಯುದ್ಧಕ್ಕೆ ಸಂಬಂಧಿಸಿದ ಯಾವುದೇ ನಿರ್ಣಯವು ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ಗುರುತಿಸಬೇಕು, ಎರಡು ದೇಶವು ಭವಿಷ್ಯದ ದಾಳಿಗಳನ್ನು ಎದುರಿಸುವುದಿಲ್ಲ ಎಂದು ಖಾತರಿಪಡಿಸಬೇಕು, ಮೂರು ಯುದ್ಧದ ಸಮಯದಲ್ಲಿ ಉಂಟಾದ ಹಾನಿಗಾಗಿ ಇರಾನ್‌ಗೆ ಪರಿಹಾರ ನೀಡಬೇಕು ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಹೇಳಿದ್ದಾರೆ.

### ಇಂಧನ ಕೊರತೆ ವದಂತಿ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾ ಸಂಕಷ್ಟದ ಹಿನ್ನೆಲೆ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಎಲ್‌ಪಿಜಿ ಕೊರತೆ ಉಂಟಾಗಿದೆ ಎಂಬ ವದಂತಿಗಳ ಹಿನ್ನೆಲೆ ಜನರು ಪೆಟ್ರೋಲ್ ಬಂಕ್‌ಗಳು ಮತ್ತು ಗ್ಯಾಸ್ ಏಜೆನ್ಸಿಗಳ ಮುಂದೆ ನಿಂತಿರುವ ದೃಶ್ಯಗಳು ಗುರುವಾರವೂ ಸಾಮಾನ್ಯವಾಗಿತ್ತು. ಆದರೆ, ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಸ್ಪಷ್ಟಪಡಿಸಿದ್ದು, ದೇಶದಲ್ಲಿ ಇಂಧನ ಕೊರತೆ ಇಲ್ಲ ಎಂದು ಹಾಗೂ ವದಂತಿಗಳಿಗೆ ಅವಕಾಶ ಕೊಡಬಾರದು ಎಂದು ಹೇಳಿದೆ. ಆದಾಗ್ಯೂ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯಿಂದಾಗಿ ಹಲವೆಡೆ ಹೋಟೆಲ್‌ಗಳು ತಮ್ಮ ಕಾರ್ಯಾಚರಣೆಯನ್ನು ಕಡಿಮೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ. ಚೆನ್ನೈ, ನೋಯ್ಡಾ ಸೇರಿದಂತೆ ಕೆಲವು ನಗರಗಳಲ್ಲಿ ಹೋಟೆಲ್‌ಗಳು ದೋಸೆ, ಫ್ರೈಡ್ ರೈಸ್ ಮುಂತಾದ ಹೆಚ್ಚಿನ ಇಂಧನ ಬೇಕಾಗುವ ಆಹಾರಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದಾಗಿ ವರದಿಯಾಗಿದೆ. ಗ್ಯಾಸ್ ಬುಕ್ಕಿಂಗ್‌ಗಾಗಿ ಜನರು ಹೆಚ್ಚಾಗಿ ಮನವಿ ಸಲ್ಲಿಸುತ್ತಿರುವುದರಿಂದ ತೈಲ ಕಂಪನಿಗಳ ಆನ್‌ಲೈನ್ ವ್ಯವಸ್ಥೆಯೂ ಒತ್ತಡಕ್ಕೆ ಒಳಗಾಗಿದೆ. ಆದರೆ, ಎರಡ್ಮೂರು ದಿನಗಳಲ್ಲಿ ಸಾಮಾನ್ಯ ಸ್ಥಿತಿಗೆ ಮರಳಲಿದೆ ಎಂದು ಹೇಳಲಾಗಿದೆ.

## ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ:ದಶಮಿ, ನಕ್ಷತ್ರ: ಪೂರ್ವಾಷಾಢ

## ದಿನದ ಮಾತು

ಬುದ್ಧಿವಂತನಾದವನು ತಾನು ಅಜರಾಮರನೆಂದೇ ತಿಳಿದುಕೊಂಡು ವಿದ್ಯೆ ಮತ್ತು ಸಂಪತ್ತನ್ನು ಗಳಿಸುತ್ತಿರಬೇಕು.

▲ ಸುಭಾಷಿತ

**ಯುದ್ಧಕಾಲದಲ್ಲೊಂದು ಅಕಾಲಿಕ ಚಿಂತೆ!**

ಉಫ್ ವೀರಭೂಮಿಗೆ

• ಸಂತೋಷ್ ತಮ್ಮಯ್ಯ

• ಪುಟ 6

## ಕಿರುಸುದ್ದಿ

**ದಶಕಗಳಿಂದ ಉಗ್ರವಾದ ಪೋಷಿಸುತ್ತಿರುವ ಪಾಕ್**
• ಪುಟ 8

**ಅನಿಲ್ ಅಂಬಾನಿ ಒಡೆತನದ 581 ಕೋಟಿ ರೂ. ಆಸ್ತಿ ಜಪ್ತಿ**
• ಪುಟ 8

**16 ದೇಶಗಳ ವಿರುದ್ಧ ಸೆಕ್ಷನ್ 301 ತನಿಖೆ**
• ಪುಟ 8

### ಸಂದರ್ಶನ ದಿನಾಂಕ ಹಿಂಪಡೆದ ಆಯೋಗ

ಕೆಎಎಸ್ ಪರೀಕ್ಷೆಯಲ್ಲಿ ಅಕ್ರಮ ಆರೋಪ

• **ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಕೆಎಎಸ್ ಪರೀಕ್ಷೆಯಲ್ಲಿ ಅಕ್ರಮ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ, ಆಯ್ಕೆಯಾಗಿದ್ದ ಅಭ್ಯರ್ಥಿಗಳಿಗೆ ನಿಗದಿಯಾಗಿದ್ದ ಸಂದರ್ಶನ ದಿನಾಂಕವನ್ನು ಕೆಪಿಎಸ್‌ಸಿ ಹಿಂಪಡೆದಿದೆ. ➡ಪುಟ 5

# ಜೀವರಕ್ಷಕ ಔಷಧಿ ಖರೀದಿ: ದಿನೇಶ್ ಗುಂಡೂರಾವ್

• **ವಿಧಾನಸಭೆ:** ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಜೀವರಕ್ಷಕ ಔಷಧಿಗಳನ್ನು ಖರೀದಿಸಿ, ರೋಗಿಗಳಿಗೆ ಉಚಿತವಾಗಿ ವಿತರಿಸಲು ಅನುವಾಗುವಂತೆ ಕೆಎಸ್‌ಎಂಎಸ್‌ಸಿಎಲ್ ವತಿಯಿಂದ ತ್ವರಿತವಾಗಿ ಖರೀದಿ ಹಾಗೂ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ದೊಡ್ಡನಗೌಡ ಹನುಮಗೌಡ ಪಾಟೀಲ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಜೀವ ರಕ್ಷಕ ಔಷಧಿಗಳನ್ನು ಖರೀದಿಸಿ, ರೋಗಿಗಳಿಗೆ ವಿತರಿಸಲು ಸರ್ಕಾರದ ವಿವಿಧ ಅನುದಾನಗಳನ್ನು ಬಳಸಿಕೊಳ್ಳಲು ಸೂಚನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಔಷಧಿ ಕೊರತೆ ಉಂಟಾಗದಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ತಾತ್ಕಾಲಿಕವಾಗಿ ಅಗತ್ಯ ಔಷಧಿಗಳನ್ನು ಕೆಎಸ್‌ಎಂಎಸ್‌ಸಿಎಲ್ ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಿ ಬಳಸಲು ಅನುಮತಿ ನೀಡಿ ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ರೋಗಿಗಳಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕುಷ್ಟಗಿ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಕೆಕೆಆರ್‌ಡಿಬಿ ಅನುದಾನದಡಿ ಸರಬರಾಜಾಗಿರುವ ಸಿ.ಟಿ. ಸ್ಕ್ಯಾನ್ ಕಾರ್ಯನಿರ್ವಹಿಸುತ್ತಿದೆ. ಬಡರೋಗಿಗಳಿಗೆ ಉಚಿತವಾಗಿ ಸೌಲಭ್ಯವನ್ನು ನೀಡಲಾಗುತ್ತಿದ್ದು, ಸಿ.ಟಿ. ಸ್ಕ್ಯಾನ್ ವಿಭಾಗದಲ್ಲಿ ಆಪರೇಟರ್ ಕೊರತೆಯಾಗದಂತೆ ತಂತ್ರಜ್ಞರಿಂದ ಸೇವೆಯನ್ನು ಒದಗಿಸಲಾಗುತ್ತಿದೆ. ಕುಷ್ಟಗಿಯಲ್ಲಿ ತಾಯಿ – ಮಕ್ಕಳ ಆಸ್ಪತ್ರೆ ಉದ್ಘಾಟನೆಯಾಗಿದ್ದು, ಆಸ್ಪತ್ರೆಗೆ ಬೇಕಾದ ಅಗತ್ಯ ಸಿಬ್ಬಂದಿ ನೇಮಕ ಹಾಗೂ ಪರಿಕರಗಳನ್ನು ಒದಗಿಸುವ ವ್ಯವಸ್ಥೆಯಾಗುತ್ತಿದೆ ಎಂದು ವಿವರಿಸಿದರು.

ರಾಮ ಬಾಣ




# ವಂಚನೆ ಪ್ರಕರಣದಲ್ಲಿ ವಿದ್ಯಾವಂತರೇ ಹೆಚ್ಚು ಸಿಲುಕಿದ್ದಾರೆ: ಪರಮೇಶ್ವರ್

• **ವಿಧಾನಪರಿಷತ್:** ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಸೈಬರ್ ವಂಚನೆಗಳ ಸಂಬಂಧ ನಮ್ಮ ಬ್ಯಾಂಕ್ ಖಾತೆ ಕೂಡ ಸುರಕ್ಷಿತವಲ್ಲ. ಇಂದಿನ ಯುಗದಲ್ಲಿ ಕಂಪನಿಯೊಂದರಲ್ಲಿ ಉನ್ನತ ಸ್ಥಾನದಲ್ಲಿದ್ದ ಪ್ರಮುಖ ಮಹಿಳೆಯೊಬ್ಬರಿಗೆ ಸೈಬರ್ ವಂಚನೆ ಮಾಡಿ 32 ಕೋಟಿ ರೂ. ವಂಚನೆ ಪ್ರಕರಣ ನಡೆದಿದೆ. ವಿದ್ಯಾವಂತರು, ಬುದ್ಧಿವಂತರು ಸಹ ಈ ಜಾಲದಲ್ಲಿ ಸಿಲುಕಿಕೊಂಡ ಪ್ರಕರಣಗಳಿವೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು.

ಗೋವಿಂದ ರಾಜು ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳಲ್ಲಿ 59,632 ಸೈಬರ್ ಅಪರಾಧ ಪ್ರಕರಣಗಳಲ್ಲಿ ಜನರು 5,473.97 ಕೋಟಿ ರೂ. ಕಳೆದುಕೊಂಡು ವಂಚನೆಗೊಳಗಾಗಿದ್ದಾರೆ ಎಂದರು. ಇದರಲ್ಲಿ ಪೊಲೀಸರು ಒಟ್ಟು 730 ಕೋಟಿ ರೂ. (ಶೇ. 12) ಮಾತ್ರ ಪಡೆಯಲು ಸಾಧ್ಯವಾಗಿದೆ. 2024 ರಲ್ಲಿ 22,483 ಸೈಬರ್ ಪ್ರಕರಣ ದಾಖಲಾಗಿದ್ದು, 2025ರಲ್ಲಿ 14,899 ಪ್ರಕರಣ ದಾಖಲಾಗಿದೆ. 2020–21ರಲ್ಲಿ 446 ಕೋಟಿ ವಂಚನೆಯಾದರೆ ಈ ಪೈಕಿ 97 ಕೋಟಿ ರೂ. ವಾಪಸ್ ಪಡೆಯಲಾಗಿದೆ. 2024ರಲ್ಲಿ 2,399 ಕೋಟಿ ಪೈಕಿ 390 ಕೋಟಿ ರೂ. ವಾಪಸ್ ಪಡೆಯಲಾಗಿದೆ. ಅದೇ ರೀತಿ 2025ರಲ್ಲಿ 2,200 ಕೋಟಿಯಲ್ಲಿ 231 ಕೋಟಿ ರೂ. ವಾಪಸ್ ಪಡೆಯಲಾಗಿದೆ ಎಂದು ಸಚಿವರು ತಿಳಿಸಿದರು.

ಡಿಜಿಟಲ್ ಅರೆಸ್ಟ್ ಪ್ರಕರಣಗಳು ಕಡಿಮೆಯಾಗಿದ್ದು, ಕಳೆದ ವರ್ಷ 345 ಪ್ರಕರಣಗಳಲ್ಲಿ 215 ಕೋಟಿ ರೂ. ವಂಚನೆಯಾಗಿದೆ. ಅಮಾಯಕರ ಬ್ಯಾಂಕ್ ಖಾತೆಗಳನ್ನು ಬಳಸಿ ರಾಜ್ಯದಲ್ಲಿ ಸೈಬರ್ ಅಪರಾಧಗಳಿಗೆ ಬಳಸಲಾಗುತ್ತಿದ್ದ ಸುಮಾರು 42 ಸಾವಿರ ಮ್ಯೂಲ್ ಬ್ಯಾಂಕ್ ಖಾತೆಗಳನ್ನು ಪತ್ತೆ ಹಚ್ಚಿದೆ. ಇದುವರೆಗೂ 500ಕ್ಕೂ ಅಧಿಕ ಮಂದಿಯನ್ನು ಬಂಧಿಸಲಾಗಿದೆ ಎಂದು ಹೇಳಿದರು. ಭಾರತದಲ್ಲೇ ಪ್ರಪ್ರಥಮವಾಗಿ ಬೆಂಗಳೂರು ನಗರದಲ್ಲಿ ವಿಶೇಷ 43 ಸೈಬರ್ ಪೊಲೀಸ್ ಠಾಣೆಯನ್ನು ಸ್ಥಾಪಿಸುವ ಮೂಲಕ ರಾಜ್ಯದ ಪೊಲೀಸ್ ಇಲಾಖೆ ಮುಂಚೂಣಿಯಲ್ಲಿದೆ. ಪ್ರತಿದಿನ ದಾಖಲಾಗುವ ಪ್ರಕರಣಗಳನ್ನು ಶೀಘ್ರವಾಗಿ ವಿಚಾರಣೆ ನಡೆಸಲು ರಾಜ್ಯದಲ್ಲಿ ಡಿಜಿಪಿ ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ ಎಂದು ಹೇಳಿದರು.

## ಕಿಡಿ ನುಡಿ

• ವಾಸುದೇವರಾವ್ ಕಕ್ಕೇರಿ

ಸಿದ್ದರಾಮಯ್ಯ ಮಂಡಿಸಿದ ಬಜೆಟ್ ನಲ್ಲಿ ಅಂಕಿ ಅಂಶ ದೊಡ್ಡದಾಗಿದೆ, ಒಳಗೆ ತಿರುಳಿಲ್ಲ.
– ಆರ್.ಅಶೋಕ್
– ಪರ್ಸ್ ದೊಡ್ಡದು, ಒಳಗೆ ಪೈಸೆಯೂ ಇಲ್ಲ ಎಂಬಂತೆ!

## ದಿನ ಭವಿಷ್ಯ

**ಮೇಷ** ಉದ್ಯೋಗ ಬದಲಾವಣೆಗೆ ಈಗ ಕಾಲ ಅಪಕ್ವ. ಆಪ್ತರ ಕುರಿತಂತೆ ಭಾವುಕ ಪ್ರಸಂಗ ಎದುರಿಸುವಿರಿ. ಹಣದ ಬಿಕ್ಕಟ್ಟು ಪರಿಹಾರ.

**ವೃಷಭ** ವೃತ್ತಿ ಒತ್ತಡ ಕಡಿಮೆ. ಆದರೆ ಖಾಸಗಿ ಬದುಕಲ್ಲಿ ಹೊಸ ಸವಾಲು ಉದ್ಭವ. ದಾಂಪತ್ಯಕ್ಕೆ ಸಂತೋಷ ತರುವ ಬೆಳವಣಿಗೆ. ಆಪ್ತ ಸಂಗದಿಂದ ನೆಮ್ಮದಿ.

**ಮಿಥುನ** ಖಾಸಗಿ ಮತ್ತು ವೃತ್ತಿ ಬದುಕಲ್ಲಿ ಪೂರಕ ದಿನ. ಸಂಕೀರ್ಣ ಕಾರ್ಯವನ್ನು ಸುಲಭದಲ್ಲಿ ಮುಗಿಸುವಿರಿ. ವಿವಾಹಿತರ ಪಾಲಿಗೆ ಶುಭ ಬೆಳವಣಿಗೆ ಸಂಭವ.

**ಕಟಕ** ಇಂದು ಸಕಾಲದಲ್ಲಿ ಕಾರ್ಯ ಮುಗಿಯದು. ಕೆಲ ವಿದ್ಯಮಾನಗಳಿಗೆ ಭಾವಾವೇಶ ತೋರುವಿರಿ. ಶಾಂತಚಿತ್ತರಾಗಿ ಪ್ರತಿಕ್ರಿಯೆ ತೋರುವುದು ಅವಶ್ಯ.

**ಸಿಂಹ** ಎಲ್ಲ ಇದ್ದೂ ಅಸಂತೃಪ್ತಿಯ ಭಾವ. ಕೆಲ ವಿಷಯ ಅಗತ್ಯಕ್ಕಿಂತ ಗಂಭೀರ ತೆಗೆದುಕೊಳ್ಳುವಿರಿ. ನೆಮ್ಮದಿ ಕೆಡಿಸಲು ಅವಕಾಶ ಕೊಡದಿರಿ.

**ಕನ್ಯಾ** ಏರಿಳಿತಗಳ ದಿನ. ವೃತ್ತಿಯಲ್ಲಿ ಹೊಣೆ ಹೆಚ್ಚು. ಹೊಸ ಉದ್ಯೋಗ ಅವಕಾಶ. ಪ್ರೀತಿಯಲ್ಲಿ ಅವಸರ ಎಚ್ಚರಿಕೆ. ವಿವೇಕದಿಂದ ವ್ಯವಹರಿಸಿ.

**ತುಲಾ** ಸಂಬಂಧದಲ್ಲಿ ಉಂಟಾಗಿದ್ದ ಸಮಸ್ಯೆ ನಿವಾರಣೆ. ಹಣದ ವಿಚಾರದಲ್ಲಿ ಎಚ್ಚರವಿರಲಿ. ಸಾಲ ನೀಡಿದರೆ ಮರಳಿ ಬಾರದ ಪರಿಸ್ಥಿತಿ.

**ವೃಶ್ಚಿಕ** ಇನ್ನಷ್ಟು ವಿಳಂಬ ಬೇಡ. ಪ್ರಮುಖ ನಿರ್ಧಾರ ಇಂದೇ ತಾಳಿ. ಅದರಿಂದ ಉತ್ತಮ ಫಲಿತಾಂಶ. ಹಿರಿಯರಿಗೆ ದೈಹಿಕ ನೋವು.

**ಧನು** ವೃತ್ತಿಯ ಒತ್ತಡ ನಿಮ್ಮ ಆರೋಗ್ಯದ ಮೇಲೂ ಪರಿಣಾಮ ಬೀರಬಹುದು. ವೃತ್ತಿ ಮಾತ್ಸರ್ಯ ನೆಮ್ಮದಿ ಕೆಡಿಸಬಹುದು.

**ಮಕರ** ವೃತ್ತಿಯ ಹೆಚ್ಚುವರಿ ಹೊಣೆಯನ್ನು ಸರಿಯಾಗಿ ನಿಭಾಯಿಸುವಿರಿ. ಕೌಟುಂಬಿಕ ವ್ಯವಹಾರ ಬಾಧೆ ತರಲಿದೆ. ಮನೆಯ ಕಾರ್ಯ ಸುಗಮವಾಗಿ ಸಾಗಲಿದೆ.

**ಕುಂಭ** ಪ್ರತಿಯೊಬ್ಬರ ವಿಷಯವನ್ನೂ ನೀವೇ ನಿರ್ಧರಿಸುವವರು ಎಂಬಂತೆ ವರ್ತಿಸದಿರಿ. ನಿಮ್ಮ ನಡೆಗೆ ಕೆಲವರ ವಿರೋಧ ಸಂಭವ.

**ಮೀನ** ಪ್ರೀತಿಯಲ್ಲಿ ಗುಣಾತ್ಮಕ ಬೆಳವಣಿಗೆ. ಆತ್ಮೀಯರ ಬೆಂಬಲ. ಮನದ ಒತ್ತಡ ನಿವಾರಣೆ. ವೃತ್ತಿಯಲ್ಲಿ ಇತರರ ಸಹಕಾರ ಪಡೆಯುವಿರಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 3,5,9,2

56,432 ಹುದ್ದೆಗಳ ನೇಮಕಾತಿಯಲ್ಲಿ ತಕ್ಷಣವೇ ಜಾರಿಯಾಗಲಿ

# ಒಳ ಮೀಸಲಿಗೆ ಮಾದಿಗರ ಆಗ್ರಹ

• **ಬೆಂಗಳೂರು:** ರಾಜ್ಯದಲ್ಲಿ ಬಾಕಿ ಇರುವ 56,432 ಹುದ್ದೆಗಳ ನೇಮಕಾತಿಯಲ್ಲಿ ತಕ್ಷಣವೇ ಒಳ ಮೀಸಲಾತಿ ಜಾರಿಗೊಳಿಸಬೇಕು ಹಾಗೂ ಈ ಬಗ್ಗೆ ಶುಕ್ರವಾರ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಬೇಕೆಂದು ಆಗ್ರಹಿಸಿ ಸಾವಿರಾರು ದಲಿತ ಹೋರಾಟಗಾರರು ಬೃಹತ್ ಪ್ರತಿಭಟನೆ ನಡೆಸಿದರು.

ಒಳಮೀಸಲಾತಿ ಹೋರಾಟ ಸಮಿತಿ ನೇತೃತ್ವದಲ್ಲಿ ಗುರುವಾರ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಜಮಾವಣೆಗೊಂಡ ಸಾವಿರಾರು ಜನರು, ರಾಜ್ಯ ಸರಕಾರದ ವಿರುದ್ಧ ಅಸಮಾಧಾನ ಹೊರಹಾಕಿದರು. ಒಳ ಮೀಸಲಾತಿ ಜಾರಿಯಾಗುವವರೆಗೆ ಯಾವುದೇ ನೇಮಕಾತಿ ಪ್ರಕ್ರಿಯೆ ನಡೆಸಬಾರದು ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದಿದ್ದರು.

ಒಳಮೀಸಲಾತಿಯನ್ನು ತಪ್ಪಿಸಲು ರಾಜ್ಯ ಸರ್ಕಾರವು ವ್ಯವಸ್ಥಿತ ಸಂಚು ರೂಪಿಸುತ್ತಿದೆ. ತರಾತುರಿಯಲ್ಲಿ ಹೊರಡಿಸಿರುವ ನೇಮಕಾತಿ ಆದೇಶಗಳನ್ನು ಹಿಂಪಡೆಯಬೇಕು. ಬಡ್ತಿ, ಬ್ಯಾಕ್ ಲಾಗ್ ಹುದ್ದೆ ಹಾಗೂ ಅನುದಾನಿತ ಸಂಸ್ಥೆಗಳಲ್ಲೂ ಒಳ ಮೀಸಲಾತಿ ಅನ್ವಯಿಸಬೇಕು, ಎಂದು ಹೋರಾಟಗಾರರು ಒತ್ತಾಯಿಸಿದರು. ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯಂತೆ ಎಸ್ಸಿ ಮೀಸಲಾತಿಯನ್ನು ಶೇ.17ಕ್ಕೆ ಹೆಚ್ಚಿಸಿರುವುದನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡಬೇಕೆಂದು ಆಗ್ರಹಿಸಿದರು.

ತೆಲಂಗಾಣದಲ್ಲಿ ಒಳಮೀಸಲಾತಿ ಅನುಷ್ಠಾನದ ನೇತಾರ, ಮಂದಕೃಷ್ಣ ಮಾದಿಗ ಮಾತನಾಡಿ, ಕಾಂಗ್ರೆಸ್ ಹೈಕಮಾಂಡ್ ಅನ್ನು ನಿಯಂತ್ರಿಸುತ್ತಿರುವ ಮಲ್ಲಿಕಾರ್ಜುನ ಖರ್ಗೆ ಅವರು ಒಳ ಮೀಸಲಾತಿ ಜಾರಿಗೆ ಅಡ್ಡಿಯಾಗಿದ್ದಾರೆ. ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿ ಜಾರಿಯಾದರೂ ಕರ್ನಾಟಕದಲ್ಲಿ ಯಾಕೆ ಸಾಧ್ಯವಾಗುತ್ತಿಲ್ಲ? ಎಂದು ಪ್ರಶ್ನಿಸಿದರು.

ಮಾದರ ಚೆನ್ನಯ್ಯ ಸ್ವಾಮೀಜಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕೂಡಲೇ ನಿರ್ಧಾರ ಕೈಗೊಳ್ಳಬೇಕು. ಇಲ್ಲವಿದ್ದರೆ ಹೋರಾಟವು ಫ್ರೀಡಂ ಪಾರ್ಕ್‌ನಿಂದ ವಿಧಾನಸೌಧಕ್ಕೆ ಸ್ಥಳಾಂತರಗೊಳ್ಳಲಿದೆ, ಎಂದು ಎಚ್ಚರಿಕೆ ನೀಡಿದರು.



**ಸಚಿವರ ಭರವಸೆ** ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಚಿವರಾದ ಕೆ.ಎಚ್. ಮುನಿಯಪ್ಪ, ಸತೀಶ್ ಜಾರಕಿಹೊಳಿ, ಈಶ್ವರ್ ಖಂಡ್ರೆ, ದಿನೇಶ್ ಗುಂಡೂರಾವ್ ಹಾಗೂ ಮಾಜಿ ಸಚಿವ ಎಚ್. ಆಂಜನೇಯ ಅವರು ಪ್ರತಿಭಟನಾಕಾರರ ಅಹವಾಲು ಸ್ವೀಕರಿಸಿದರು. ಮಾ.27 ರಂದು ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಸಮಗ್ರವಾಗಿ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. ಒಳ ಮೀಸಲಾತಿ ಜಾರಿಯಾಗುವವರೆಗೂ ಯಾವುದೇ ಹೊಸ ನೇಮಕಾತಿ ಪ್ರಕ್ರಿಯೆ ನಡೆಸುವುದಿಲ್ಲ, ಎಂಬ ಭರವಸೆಯನ್ನು ಸಚಿವರು ನೀಡಿದರು.

**ಪ್ರತಿಭಟನೆಯ ಧಗಧಗ:** ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ಸಾವಿರಾರು ಜನರು ಆನಂದ್ ರಾವ್ ವೃತ್ತದಿಂದ ಕೆ.ಆರ್. ವೃತ್ತದವರೆಗೆ ಜಮಾಯಿಸಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು. ಬಿಸಿಲಿನ ಝಳ ಲೆಕ್ಕಿಸದೆ ಸಮುದಾಯದವರು ಮೈಮೇಲೆ ಚಾವಟಿಯಿಂದ ಹೊಡೆದುಕೊಂಡು ನ್ಯಾಯಕ್ಕಾಗಿ ಆಗ್ರಹಿಸಿದ ದೃಶ್ಯ ಮನಕಲಕುವಂತಿತ್ತು. ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಅವರನ್ನು ತಕ್ಷಣವೇ ಬದಲಾಯಿಸಬೇಕೆಂದು ಘೋಷಣೆ ಕೂಗಿದರು. ಪ್ರತಿಭಟನೆಯಲ್ಲಿ ಮಾದರ ಚೆನ್ನಯ್ಯ ಸ್ವಾಮೀಜಿ, ಮಂದಕೃಷ್ಣ ಮಾದಿಗ, ಮಾರಸಂದ್ರ ಮುನಿಯಪ್ಪ, ಹನುಮೇಗೌಡ ಬೀರನಹಳ್ಳಿ, ಎಸ್.ಮಾರೆಪ್ಪ, ಬಸವರಾಜ್ ಕೌತಾಳ್, ಅಂಬಣ್ಣ ಅರೋಲಿಕರ್, ನರಸಪ್ಪ ದಂಡೋರ, ಬಿ.ಆರ್. ಭಾಸ್ಕರ್‌ಪ್ರಸಾದ್, ಹಂಪರಾಮ್, ಡಾ. ಸಿ.ಮೂರ್ತಿ ಇದ್ದರು.

# ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಒಪ್ಪಿಗೆ

• **ಬೆಂಗಳೂರು:** ಆನೇಕಲ್ ತಾಲೂಕಿನ ಸೂರ್ಯ ನಗರದಲ್ಲಿ 813 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಒಪ್ಪಿಗೆ ನೀಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತ ಪ್ರಕರಣದಿಂದ ಕ್ರೀಡಾಂಗಣವನ್ನು ನಗರದಿಂದ ದೂರದಲ್ಲಿ ಹೊಸ ಕ್ರೀಡಾಂಗಣ ನಿರ್ಮಿಸಬೇಕೆನ್ನುವ ಸಲಹೆಗೆ ಸರ್ಕಾರ ಮಣೆ ಹಾಕಿದ್ದು, ಸೂರ್ಯನಗರದಲ್ಲಿ 75 ಎಕರೆ ಜಮೀನಿನಲ್ಲಿ ನೂತನ ಕ್ರೀಡಾಂಗಣ ನಿರ್ಮಾಣವಾಗಲಿದೆ.

ಕ್ರೀಡಾಂಗಣದ ಸುತ್ತ ವಾಣಿಜ್ಯ ಮಳಿಗೆ ಮತ್ತು ಇತರೆ ಕಟ್ಟಡ ಕಾಮಗಾರಿಗಳ ಪರಿಷ್ಕೃತ ವೆಚ್ಚದ ಮಾಹಿತಿ ನೀಡಲು ಸಂಪುಟ ಸಭೆಯು ಸಂಬಂಧಿಸಿದ ಇಲಾಖೆಗೆ ಸೂಚನೆ ನೀಡಿದೆ. ಸೂರ್ಯನಗರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ಮತ್ತು ಕ್ರೀಡಾ ಸಂಕೀರ್ಣ ನಿರ್ಮಿಸಲು ಕರ್ನಾಟಕ ಗೃಹ ಮಂಡಳಿ ಮುಂದಾಗಿದೆ. ಎಲ್ಲವೂ ಅಂದುಕೊಂಡಂತೆ ಆದರೆ 3 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ.

ಮಂಡ್ಯ ವಿಧಾನಸಭಾ ಕ್ಷೇತ್ರದ 4 ಕಾವೇರಿ ನಾಲೆಗಳಿಗೆ ವಿತರಣಾ ನಾಲೆ ಹಾಗೂ ಏತ ನಾಲೆಗಳ ಆಧುನೀಕರಣಕ್ಕೆ 100 ಕೋಟಿ ಅನುದಾನ ನೀಡಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಕಾವೇರಿ ಶಾಖಾ ನಾಲೆ, ಕೆರೆಗೋಡು ಶಾಖಾ ನಾಲೆ, ಶಿಂಷಾ ಶಾಖಾ ನಾಲೆಗಳ ಆಧುನೀಕರಣಗೊಳ್ಳಲಿದೆ. ಮೈ ಶುಗರ್ ಸಕ್ಕರೆ ಕಾರ್ಖಾನೆ ದುರಸ್ತಿಗೆ ಸಂಪುಟ ಸಭೆಯಲ್ಲಿ ಒಪ್ಪಿಗೆ ಸಿಕ್ಕಿದ್ದು, 5 ಸಾವಿರ ಟಿಸಿಡಿ ಕಬ್ಬು ನುರಿಯುವ ಹೊಸ ಯಂತ್ರೋಪಕರಣ ಅಳವಡಿಕೆಗೆ ಸಂಪುಟ ಅನುಮೋದನೆ ನೀಡಿದೆ.

**ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಣ:** 683 ಕೋಟಿ ವೆಚ್ಚದಲ್ಲಿ ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಿಸಲು ಸಂಪುಟ ಒಪ್ಪಿಗೆ ನೀಡಿದ್ದು, 76 ಮೌಲಾನಾ ಆಜಾದ್ ಆಂಗ್ಲ ಮಾಧ್ಯಮ ಶಾಲೆಗಳು ಮತ್ತು 41 ಉರ್ದು ಮಾಧ್ಯಮ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಣಕ್ಕೆ ಸಂಪುಟದಲ್ಲಿ ನಿರ್ಧರಿಸಲಾಗಿದೆ.

## ನೂತನ ಜಾಹಿರಾತು ನೀತಿ

ಸರ್ಕಾರಕ್ಕೆ ಆದಾಯ ತರುವ ನಿಟ್ಟಿನಲ್ಲಿ ನೂತನ ಜಾಹಿರಾತು ನೀತಿಗೆ ಸಚಿವ ಸಂಪುಟ ಸಭೆ ಅಸ್ತು ಎಂದಿದ್ದು, ಜಾಹಿರಾತು ನೀತಿ-2026ಕ್ಕೆ ಒಪ್ಪಿಗೆ ಸಿಕ್ಕಿದೆ.

# ಭಾರತಕ್ಕೆ ತೈಲ, ಅನಿಲ ಸರಾಗ

ಪುಟ 1ರಿಂದ ಶೆನ್ ಲಾಂಗ್ ಎಂಬ ಸೂಯೆಜ್‌ಮ್ಯಾಕ್ಸ್ ವರ್ಗದ ಈ ಹಡಗು ಮಾ.1ರಂದು ಸೌದಿ ಅರೇಬಿಯಾದ ರಾಸ್ ತನುರಾ ಬಂದರಿನಿಂದ ಕಚ್ಚಾತೈಲವನ್ನು ಹೊತ್ತು ಭಾರತತ್ತ ಪ್ರಯಾಣ ಆರಂಭಿಸಿತ್ತು. ಇದೇ ಸಮಯದಲ್ಲಿ ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ಹಿನ್ನೆಲೆಯಲ್ಲಿ ಇರಾನ್ ಹಾರ್ಮುಜ್ ಜಲಸಂಧಿಯನ್ನು ತಾತ್ಕಾಲಿಕವಾಗಿ ಬಂದ್ ಮಾಡಿತ್ತು. ಇದರಿಂದಾಗಿ ಹಡಗು ಕೆಲ ದಿನಗಳು ಸಮುದ್ರದಲ್ಲೇ ನಿಂತಿತ್ತು. ಯುದ್ಧ ಆರಂಭವಾದ ನಂತರವೂ ಹಾರ್ಮುಜ್ ಜಲಮಾರ್ಗದಲ್ಲಿ ಇನ್ನೂ 28 ಭಾರತೀಯ ಧ್ವಜ ಹೊಂದಿರುವ ಹಡಗುಗಳು ಸಿಲುಕಿಕೊಂಡಿವೆ ಎಂದು ಭಾರತದ ಹಡಗು ನಿರ್ದೇಶನಾಲಯದ ಮಹಾನಿರ್ದೇಶಕರು ಮಾಹಿತಿ ನೀಡಿದ್ದಾರೆ.

## ಅನುಮತಿ ಪಡೆಯದ ಹಡಗುಗಳಿಗೆ ಎಚ್ಚರಿಕೆ

ಪುಟ 1ರಿಂದ ಅಮೆರಿಕ ಮತ್ತು ಇಸ್ರೇಲ್ ಜತೆ ಉದ್ವಿಗ್ನತೆ ಹೆಚ್ಚಾದ ನಂತರ, ಇರಾನ್ ಹಾರ್ಮುಜ್ ಜಲಸಂಧಿಯಲ್ಲಿ ಸಾಗುವ ಸಮುದ್ರ ಸಂಚಾರದ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಹೇರಿದೆ. ವಾಷಿಂಗ್ಟನ್ ಅಥವಾ ಟೆಲ್ ಅವೀವ್ ಹಿತಾಸಕ್ತಿಗೆ ಸೇರದ ಸಲ್ಲಿಸದ ಹಡಗುಗಳು ಸುರಕ್ಷಿತವಾಗಿ ಜಲಸಂಧಿಯನ್ನು ದಾಟಬಹುದು ಎಂದು ಇರಾನ್ ಅಧಿಕಾರಿಗಳು ಸೂಚಿಸಿದ್ದಾರೆ.



ಭಾರತದ ಕಚ್ಚಾತೈಲ ಪೂರೈಕೆ ಸ್ಥಿತಿ ಸುರಕ್ಷಿತವಾಗಿದೆ. ದೇಶಕ್ಕೆ ಅಗತ್ಯ ಶೇ.70 ಕಚ್ಚಾತೈಲ ಸಹಿತ ಆಮದುಗಳನ್ನು ಹಾರ್ಮುಜ್ ಜಲಸಂಧಿ ಬಿಟ್ಟು ಬೇರೆ ದಾರಿಯಿಂದ ತರಿಸಿಕೊಳ್ಳಲು ಭಾರತ ಸೂಕ್ತ ವ್ಯವಸ್ಥೆ ಮಾಡಿದೆ.
■ ಹರ್ದೀಪ್ ಸಿಂಗ್ ಪುರಿ, ಕೇಂದ್ರ ಇಂಧನ ಸಚಿವ

## ಯುದ್ಧದ ನೆರಳಲ್ಲಿ 'ಕತ್ತಲ ದಾರಿ' ಪಯಣ!

ಪುಟ 1ರಿಂದ ಆದರೆ ಅಪಾಯಕರ ಪ್ರದೇಶಗಳಲ್ಲಿ ಕೆಲವೊಮ್ಮೆ ಹಡಗುಗಳು ಈ ವ್ಯವಸ್ಥೆಯನ್ನು ಆಫ್ ಮಾಡಿ 'ಡಾರ್ಕ್' ಆಗುತ್ತವೆ. ಅಂದರೆ ರಾಡಾರ್ ಟ್ರ್ಯಾಕಿಂಗ್‌ನಲ್ಲಿ ಕಾಣಿಸಿಕೊಳ್ಳುವುದಿಲ್ಲ. ಈ ಟ್ಯಾಂಕರ್ ಕೂಡ ಹಾರ್ಮುಜ್ ಜಲಸಂಧಿಯಲ್ಲಿ ಪ್ರವೇಶಿಸಿದ ಬಳಿಕ ಎಐಎಸ್ ಸಿಗ್ನಲ್ ನಿಲ್ಲಿಸಿ ಕೆಲವು ಸಮಯ 'ಕತ್ತಲೆಯಾಯಿತು'. ನಂತರ ಸುರಕ್ಷಿತವಾಗಿ ಮಾರ್ಗ ದಾಟಿದ ಬಳಿಕ ಮತ್ತೆ ಟ್ರ್ಯಾಕಿಂಗ್ ವ್ಯವಸ್ಥೆ ಚಾಲನೆ ಮಾಡಿತು.

# ಸಂದರ್ಶನ ದಿನಾಂಕ ಹಿಂಪಡೆದ ಆಯೋಗ

ಪುಟ 1ರಿಂದ 2024ರಲ್ಲಿ 384 ಹುದ್ದೆಗಳಿಗೆ ಪರೀಕ್ಷೆ ನಡೆಸಿದ್ದ ಕೆಪಿಎಸ್‌ಸಿ ಕಳೆದ ವಾರವಷ್ಟೇ ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸಂದರ್ಶನಕ್ಕೆ 1:3 ಅನುಪಾತದಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ಪ್ರಕಟಿಸಿತ್ತು. ಅಲ್ಲದೇ, ಮಾ.23ರಿಂದ ಮೇ 4ರವರೆಗೆ ವ್ಯಕ್ತಿತ್ವ ಪರೀಕ್ಷೆ ಹಾಗೂ ದಾಖಲೆ ಪರಿಶೀಲನೆ ನಡೆಸಲು ಮುಂದಾಗಿತ್ತು. ಆದರೆ, ಈ ಮುಖ್ಯ ಪರೀಕ್ಷೆಯಲ್ಲಿ ಒಂದೇ ಕೊಠಡಿಯಲ್ಲಿ 11ಕ್ಕೂ ಹೆಚ್ಚು ಅಭ್ಯರ್ಥಿಗಳು ಪಾಸ್ ಆಗಿದ್ದರು. ಈ ವಿಚಾರ ಸಾಕಷ್ಟು ಅನುಮಾನಗಳಿಗೆ ಎಡೆಮಾಡಿಕೊಟ್ಟಿತ್ತು. ಅಲ್ಲದೇ ಕೆಲವು ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದ್ದರು. ಅಲ್ಲದೇ ಸಂದರ್ಶನದ ಆಯ್ಕೆ ಪಟ್ಟಿ ವಾಪಸ್ ಪಡೆಯುವಂತೆ ಹಾಗೂ ಇನ್ನೊಮ್ಮೆ ಮುಖ್ಯ ಪರೀಕ್ಷೆ ನಡೆಸುವಂತೆ ಹಾಗೂ ಈ ಬಗ್ಗೆ ತನಿಖೆ ನಡೆಸುವಂತೆ ಆಗ್ರಹಿಸಿದ್ದರು. ಅಲ್ಲದೇ, ಈ ವಿಚಾರ ವಿಧಾನಮಂಡಲ ಅಧಿವೇಶನದಲ್ಲಿಯೂ ಪ್ರತಿಧ್ವನಿಸಿತ್ತು. ಅಕ್ರಮದ ಬಗ್ಗೆ ತನಿಖೆಗೆ ವಿಪಕ್ಷಗಳು ಒತ್ತಾಯಿಸಿದ್ದವು. ಈಗ ಕರ್ನಾಟಕ ಲೋಕಸೇವಾ ಆಯೋಗ ಸಂದರ್ಶನ ದಿನಾಂಕ ಹಾಗೂ ದಾಖಲೆ ಪರಿಶೀಲನೆ ವಾಪಸ್ ಪಡೆದಿದ್ದು, ನೂತನ ದಿನಾಂಕವನ್ನು ಮುಂದೆ ತಿಳಿಸಲಾಗುತ್ತೆ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಪ್ರಕಟಣೆ ತಿಳಿಸಿದ್ದಾರೆ.

## ಗೊಂದಲ ಬಗೆಹರಿಸಲು ಸರ್ಕಾರಕ್ಕೆ ಒತ್ತಾಯ

• **ವಿಧಾನಸಭೆ:** ಇತ್ತೀಚೆಗೆ ನಡೆದ ಕೆಪಿಎಸ್‌ಸಿ ಪರೀಕ್ಷೆ ಗೊಂದಲಗಳ ಬಗ್ಗೆ ವಿಪಕ್ಷದಿಂದ ಸದನದಲ್ಲಿ ಪ್ರಸ್ತಾಪಿಸಲಾಯಿತು. ಕೆಪಿಎಸ್‌ಸಿ ಪರೀಕ್ಷೆ ಗೊಂದಲ ಕುರಿತು ನಿಯಮ 69ರ ಮೇಲೆ ವಿಷಯ ಪ್ರಸ್ತಾಪಿಸಿ ಮಾತನಾಡಿದ ಶಾಸಕ ಸುನೀಲ್ ಕುಮಾರ್ ಅವರು,



ಒಂದೇ ಕೊಠಡಿಯಲ್ಲಿ 11 ಅಭ್ಯರ್ಥಿಗಳು ಆಯ್ಕೆಯಾಗಿರುವ ಬಗ್ಗೆ ಅನುಮಾನ, ಗೊಂದಲಗಳಿದ್ದು, ಇದನ್ನು ಸರ್ಕಾರ ಬಗೆಹರಿಸಬೇಕೆಂದು ಒತ್ತಾಯಿಸಿದ್ದರು. ಕೆಪಿಎಸ್‌ಸಿ ಗೊಂದಲಗಳಿಗೆ ಕಾರ್ಯದರ್ಶಿ, ಅಧ್ಯಕ್ಷರ ಹೊಣೆಗಾರರು ಎಂದು ಗೃಹ ಸಚಿವರು ಹೇಳಿದ್ದು, ಈ ಹೊಣೆಗಾರಿಕೆಗೆ ಸರ್ಕಾರ ಬದ್ಧವಾಗಬೇಕು. ಈ ಕುರಿತು ತನಿಖೆ ಆಗಬೇಕು. ಎಂದು ಪರೀಕ್ಷೆ ಮುಗಿಯುವವರೆಗೆ ಒಬ್ಬ ಕಾರ್ಯದರ್ಶಿ ಇರಬೇಕು, ಕೆಪಿಎಸ್‌ಸಿ ಸುಧಾರಣೆಗೆ ಮುಖ್ಯಮಂತ್ರಿಗಳು ಮಧ್ಯ ಪ್ರವೇಶಿಸಬೇಕು, ಮಾ.23 ರಂದು ನಡೆಯುವ ಸಂದರ್ಶನಕ್ಕೆ ತಡೆಹಿಡಿಯಬೇಕು ಎಂದು ಮನವಿ ಮಾಡಿದ್ದರು. ಶಾಸಕ ಸುರೇಶ್‌ಕುಮಾರ್ ಮಾತನಾಡಿ, ಕೆಪಿಎಸ್‌ಸಿ ಬಗ್ಗೆ ಎಲ್ಲಾ ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು. ಕೆಪಿಎಸ್‌ಸಿಯಲ್ಲಿ ರಾಜಕೀಯ ಕುಟುಂಬಸ್ಥರು, ಪ್ರಭಾವಿಗಳ ಸಂಬಂಧಿಕರು ಇದ್ದಾರೆ. ಈ ಸಂಸ್ಥೆ ಶುದ್ಧೀಕರಣ ಆಗಬೇಕು. ಉದ್ಯೋಗಸೌಧ ಈಗ ನಿರುದ್ಯೋಗಸೌಧ ಆಗಿದೆ. ಯುವಕರು ಹತಾಶರಾಗಿದ್ದಾರೆ ಎಂದು ಟೀಕಿಸಿದ್ದರು.

# ಹಿರಿಯ ಸಿನಿ ಪತ್ರಕರ್ತ ಕೆ.ಜಿ. ಕುಮಾರ್ ಅಂತ್ಯಕ್ರಿಯೆ

• **ಮೈಸೂರು:** ತೀವ್ರ ಹೃದಯಾಘಾತದಿಂದ ಬುಧವಾರ ಸಂಜೆ ನಿಧನರಾದ ಹಿರಿಯ ಸಿನಿ ಪತ್ರಕರ್ತ ಕೆ.ಜಿ. ಕುಮಾರ್ (74) ಅವರು ಅಂತ್ಯಕ್ರಿಯೆ ಗುರುವಾರ ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ವಿಧಿವಿಧಾನದಂತೆ ನಡೆಯಿತು. ಇಂದು ಬೆಳಗ್ಗೆ ಮೃತರ ಪಾರ್ಥಿವ ಶರೀರವನ್ನು ಯಾದವಗಿರಿಯ ಎ.ರಾಮಣ್ಣ ವೃತ್ತದಲ್ಲಿರುವ ಅವರ ನಿವಾಸಕ್ಕೆ ತಂದು ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಹಿರಿಯ ಚಿತ್ರನಟಿ ಭಾರತಿ ವಿಷ್ಣುವರ್ಧನ್, ಅನಿರುದ್ಧ, ಚಿತ್ರ ನಟಿ ಕೋಮಲ್ ಸೇರಿದಂತೆ ಅನೇಕ ಚಿತ್ರರಂಗದ ಗಣ್ಯರು ಆಗಮಿಸಿ ಕೆ.ಜಿ. ಕುಮಾರ್ ಅವರ ಅಂತಿಮ ದರ್ಶನ ಪಡೆದರು. ರಾಜಕಾರಣಿಗಳು, ಜನಪ್ರತಿನಿಧಿಗಳು ಸೇರಿದಂತೆ ವಿವಿಧ ಪ್ರಮುಖರು ಆಗಮಿಸಿ ಅಂತಿಮ ದರ್ಶನ ಪಡೆದರು. ಬಳಿಕ ಸಂಜೆ ಪಾರ್ಥಿವ ಶರೀರವನ್ನು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ಗೆ ತೆಗೆದುಕೊಂಡು ಹೋಗಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಯಿತು.

# 30 ಕೈದಿಗಳ ಬಿಡುಗಡೆಗೆ ಒಪ್ಪಿಗೆ

• **ಬೆಂಗಳೂರು:** ರಾಜ್ಯದ ವಿವಿಧ ಕೇಂದ್ರ ಕಾರಾಗೃಹಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದ 30 ಜೀವಾವಧಿ ಬಂಧಿಗಳನ್ನು ಸನ್ನಡತೆಯ ಆಧಾರದ ಮೇಲೆ ಬಿಡುಗಡೆಗೊಳಿಸಿ ರಾಜ್ಯ ಸರ್ಕಾರ ಗುರುವಾರ ಅಧಿಕೃತ ಆದೇಶ ಹೊರಡಿಸಿದೆ. ಭಾರತ ಸಂವಿಧಾನದ ಅನುಚ್ಛೇದ 161ರ ಅಡಿಯಲ್ಲಿ ರಾಜ್ಯಪಾಲರು ನೀಡಿದ ಅನುಮೋದನೆಯ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಬಂದಿಗಳ ಹಾಗೂ ಅವರ ಕುಟುಂಬದ ಪುನರ್ವಸತಿಗೆ ಅವಕಾಶ ಕಲ್ಪಿಸುವ ಸರ್ಕಾರದ ನೀತಿಯಂತೆ, ಒಟ್ಟು 54 ಪ್ರಕರಣಗಳನ್ನು ಎಲ್‌ಸಿಆರ್ ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿತ್ತು.

# ಬಜೆಟ್ ಸಮಾಧಾನ ತಂದಿಲ್ಲ: ಇಕ್ಬಾಲ್

• **ರಾಮನಗರ:** ರಾಜ್ಯ ಬಜೆಟ್ ನನಗೆ ಸಮಾಧಾನ ತಂದಿಲ್ಲ ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ತಿಳಿಸಿದರು.

ತಾಲೂಕಿನ ಕೊಟ್ಟಗಳು ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಜೆಟ್ ನನಗೆ ಸಮಾಧಾನ ತಂದಿಲ್ಲ, ನನ್ನ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸಿಎಂಗೆ ಮನವಿ ಮಾಡಿದ್ದೆ. ಭಕ್ಷಿಕೆರೆ ಒಡೆದು ಪ್ರವಾಹದಿಂದ ಉಂಟಾದ ಸಮಸ್ಯೆ ಬಗ್ಗೆ ಫೋಟೋ ತೋರಿಸಿ ಮಾಹಿತಿ ಕೊಟ್ಟಿದ್ದೆ. ಹಿಂದೆ ಇದ್ದವರು ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಮಾಡಿಲ್ಲ ಎಂದು ತಿಳಿಸಿದರು.ಚನ್ನ ಚಿರಂಜಿ ಹಾಗೂ ನೀರಾವರಿ ಬಗ್ಗೆ ನಾಲ್ಕೈದು ಬಾರಿ ಮನವಿ ಮಾಡಿದ್ದೆ. ವಿಶೇಷ ಅನುದಾನ ನೀಡುವಂತೆ ಮನವಿ ಮಾಡಿದ್ದೆ, ಆದರೆ ಸಿಎಂ ಏನೂ ಮಾಡಿಲ್ಲ, ನನಗೆ ನೋವಾಗಿದೆ. ಪಾರದರ್ಶಕವಾಗಿ ಅನುದಾನ ಕೊಡುತ್ತಾರೆ ಎನ್ನುವ ನಂಬಿಕೆ ಇತ್ತು. ಈಗ ಆ ನಂಬಿಕೆ ಹುಸಿಯಾಗಿದೆ ಎಂದು ತಿಳಿಸಿದರು. ಈಗ ನಾವು ಡಿಸಿಎಂ ಹಿಂದೆಯೇ ಹೋಗಬೇಕು.

ನಮ್ಮ ಕಷ್ಟ-ಸುಖವನ್ನು ಅವರ ಮೇಲೆಯೇ ಹಾಕಬೇಕು. ಹಿಂದೆ ಅವರಿಂದಲೇ ಅಭಿವೃದ್ಧಿ ಕೆಲಸ ಮಾಡಿಕೊಂಡಿದ್ದೆ. ಇದು ಅವರ ಜಿಲ್ಲೆ, ಮುಂದೆಯೂ ಅವರ ಮೇಲೆಯೇ ಭಾರ ಹಾಕಬೇಕಾಗುತ್ತೆ. ಕ್ಷೇತ್ರದ ಜವಾಬ್ದಾರಿ ಡಿಸಿಎಂ ಅವರ ಮೇಲೂ ಇದೆ ಎಂದರು. ಡಿ.ಕೆ. ಶಿವಕುಮಾರ್ ಸಿಎಂ ಆಗುವ ವಿಚಾರವಾಗಿ ಮಾತನಾಡಿದ ಅವರು, ನಮ್ಮ ಗುರುಗಳು ಜಪದಿಂದ ಇನ್ನೂ ಎದ್ದಿಲ್ಲ ಎಂದರು.

ಮೇ ವೇಳೆಗೆ ಎಲ್ಲಾ ಗೇಟ್ ಬದಲಾವಣೆ ಕಾರ್ಯ ಪೂರ್ಣ: ಡಿಕೆಶಿ

# ತುಂಗಭದ್ರಾ ಡ್ಯಾಂಗೆ ಹೊಸ ಕ್ರಸ್ಟ್‌ಗೇಟ್ ಶೀಘ್ರ

• **ವಿಧಾನ ಪರಿಷತ್:** ತುಂಗಭದ್ರಾ ಅಣೆಕಟ್ಟೆಯ ಎಲ್ಲ ಕ್ರಸ್ಟ್‌ಗೇಟ್‌ಗಳ ಬದಲಾವಣೆ ಕಾರ್ಯವನ್ನು ರಾಜ್ಯ ಸರ್ಕಾರ ಆದ್ಯತೆ ಮೇರೆಗೆ ಕೈಗೆತ್ತಿಕೊಂಡಿದ್ದು, ಬರುವ ಮೇ ವೇಳೆಗೆ ಪೂರ್ಣಗೊಳಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.



ಮೇಲ್ಮನೆಯಲ್ಲಿ ಶೂನ್ಯ ವೇಳೆಯಲ್ಲಿ ಜೆಡಿಎಸ್‌ನ ಟಿ.ಎ.ಶರವಣ, ತುಂಗಭದ್ರಾ ಅಣೆಕಟ್ಟು ಕ್ರಸ್ಟ್ ಗೇಟ್ ಅಳವಡಿಕೆ ವಿಚಾರ ಪ್ರಸ್ತಾಪಿಸಿದರು. ತುಂಗಭದ್ರಾ ಅಣೆಕಟ್ಟೆಯ 33 ಗೇಟ್‌ಗಳ ದುರಸ್ತಿ ಕಾರ್ಯವನ್ನು ಹಂತ-ಹಂತವಾಗಿ ಕೈಗೊಳ್ಳಬೇಕು ಬೇಡಿಕೊಂಡರೂ ಸರ್ಕಾರ ಕೇವಲ ಎಲ್ಲ ಗೇಟ್‌ಗಳನ್ನು ಕಿತ್ತುಹಾಕಿದೆ. ಈವರೆಗೆ 14 ಗೇಟ್‌ಗಳ ಅಳವಡಿಕೆ ಕಾರ್ಯ ಮುಗಿದಿದೆ. ಇನ್ನುಳಿದ ಕ್ರಸ್ಟ್‌ಗೇಟ್‌ಗಳ ತೆರವು ಕಾರ್ಯವೂ ಬಾಕಿ ಇದೆ. ಎಲ್ಲ ಗೇಟ್ ಅಳವಡಿಕೆಗೆ ಸುಮಾರು 133 ಮಾನವ ದಿನಗಳ ಬೇಕು ಎಂದು ಸಮಸ್ಯೆ ಬಿಚ್ಚಿಟ್ಟರು.

ಸಚಿವ ಡಿ.ಕೆ.ಶಿವಕುಮಾರ್ ಅವರು, ಕ್ರಸ್ಟ್‌ಗೇಟ್‌ಗಳನ್ನು ತುಂಡರಿಸಿದಾಗ, ಅಣೆಕಟ್ಟು ಸಂಪೂರ್ಣ ಅಲ್ಲಾಡಿದಂತೆ ಭಾಸವಾಗಿತ್ತು. ನಾವು ಕೇವಲ 7 ದಿನಗಳಲ್ಲಿ ಸರಿಪಡಿಸಿದ್ದೇವೆ ಎಂದು ತಿಳಿಸಿದರು. ಅಣೆಕಟ್ಟಿನ ಎಲ್ಲಾ ಗೇಟ್‌ಗಳ ಬದಲಿಸುವ ತೀರ್ಮಾನ ಮಾಡಲಾಗಿದ್ದು, 19ನೇ ಸ್ಟಾಪ್‌ಲಾಗ್ ಗೇಟ್ ತೆರವುಗೊಳಿಸಿ ಸ್ಪಿಲ್ ಗೇಟ್ ಅಳವಡಿಕೆಗೆ 2025ರ ಮೇ.24ರಂದು ಅಹಮದಾಬಾದ್‌ನ ಹಾರ್ಡ್‌ವೇರ್ ಟೂಲ್ ಅಂಡ್ ಮಿಷನರಿ ಪ್ರಾಜೆಕ್ಟ್ ಸಂಸ್ಥೆ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. 34.48 ಕೋಟಿ ರೂ. ವೆಚ್ಚದಲ್ಲಿ ಉಳಿದ 32 ಸ್ಪಿಲ್ ವೇ ಗೇಟ್ ಅಳವಡಿಕೆಯನ್ನು 15 ತಿಂಗಳ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಇದೇ ಸಂಸ್ಥೆಯೊಂದಿಗೆ 2025ರ ಜೂ.10 ರಲ್ಲಿ ಒಪ್ಪಂದ ಮಾಡಿಕೊಂಡಿದ್ದೇವೆ ಎಂದರು.

## 14 ಗೇಟ್ ಅಳವಡಿಕೆ ಕಾರ್ಯ ಪೂರ್ಣ

ಈಗಾಗಲೇ 25 ಗೇಟ್‌ಗಳ ಫ್ಯಾಬ್ರಿಕೇಶನ್ ಕೆಲಸ ಮುಗಿದಿದ್ದು, 2 ಗೇಟ್‌ಗಳ ಕೆಲಸ ನಡೆಯುತ್ತಿದೆ. 26 ಗೇಟ್‌ಗಳನ್ನು ತೆಗೆಯಲಾಗಿದ್ದು, 2 ಗೇಟ್‌ಗಳ ತೆರವು ಕಾರ್ಯ ನಡೆಯುತ್ತಿದೆ. ಇದರಲ್ಲಿ 14 ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, 3 ಗೇಟ್‌ಗಳ ಕಾರ್ಯ ಪ್ರಕ್ರಿಯೆಯಲ್ಲಿದೆ. ಮೇ ತಿಂಗಳ ಒಳಗಾಗಿ ಎಲ್ಲಾ ಗೇಟ್ ಬದಲಾವಣೆ ಮುಗಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಡಿ.ಕೆ. ಶಿವಕುಮಾರ್ ವಿವರಿಸಿದರು.

# ಸಂತ್ರಸ್ತರಿಗೆ ಪರಿಹಾರ ಪ್ಯಾಕೇಜ್

• **ವಿಧಾನ ಪರಿಷತ್:** ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಭೂಮಿ ಖರೀದಿಸುವಾಗ ಅನಗತ್ಯ ವಿವಾದ ಬರಬಾರದು ಎಂಬ ದೂರದೃಷ್ಟಿಯಿಂದ ಯುಕೆಪಿ-3ನೇ ಹಂತದ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ 20 ಗ್ರಾಮ ಗಳಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸುವ ಬದಲಾಗಿ ಪರಿಹಾರ ಪ್ಯಾಕೇಜ್ ನೀಡಲು ಚಿಂತಿಸಲಾಗಿದೆ. ಈ ಸಂಬಂಧ ಅಲ್ಲಿನ ಶಾಸಕರು, ಜನಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಿಯಮ 330ರ ಅನ್ವಯ ವಿಷಯ ಪ್ರಸ್ತಾಪಿಸಿದ ಬಿಜೆಪಿ ಸದಸ್ಯ ಹಣಮಂತ ನಿರಾಣಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಳಪಡುವ ಸಂತ್ರಸ್ತ ರೈತ ಕುಟುಂಬಗಳಿಗೆ ಪುನರ್ ವಸತಿ, ಮೂಲಸೌಕರ್ಯವನ್ನು ಒದಗಿಸಲು ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಪ್ರಶ್ನಿಸಿದರು. ಈ ವಿಷಯಕ್ಕೆ ಲಿಖಿತವಾಗಿ ಉತ್ತರಿಸಿದ ಅವರು, ಕೃಷ್ಣಾ ಒಪ್ಪಂದದ ತೀರ್ಪು ರಚಿಸಲು ವಿಶೇಷವಾದ ದರ ನಿಗದಿಗೆ ಆದೇಶಿಸಲಾಗಿದೆ. ಹೊಸ ಭೂ-ಸ್ವಾಧೀನ ನಿಯಮಾವಳಿಯಂತೆ 8 ಪುನರ್ವಸತಿ ಕೇಂದ್ರಗಳಲ್ಲಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು ಕುಂದರಗಿ, ಬಾದಾಮಿತ್ತಿಗಳಿಗಾಗಿ ಅವಶ್ಯವಿರುವ ಜಮೀನುಗಳ ತೀರ್ಪು ನ್ಯಾಯಾಲಯದಲ್ಲಿ ಅಂತಿಮಗೊಂಡಿದೆ. ಇನ್ನು ಬಾಕಿ ಉಳಿದ 13 ಪುನರ್ವಸತಿ ಕೇಂದ್ರಗಳಿಗೆ ಜಮೀನು ಭೂ-ಸ್ವಾಧೀನ ಪ್ರಕ್ರಿಯೆ ವಿವಿಧ ಹಂತಗಳಲ್ಲಿದೆ. ಗಣ್ಣಾಕೇರಿ ಗ್ರಾಮದ ಭೂ-ಸ್ವಾಧೀನ ಪ್ರಕ್ರಿಯೆ ತಾಂತ್ರಿಕವಾಗಿ ಪರಿಶೀಲಿಸಿ ತೀರ್ಮಾನಿಸಬೇಕಿದೆ ಎಂದರು.

# ಪೊಲೀಸರ ವರ್ಗಾವಣೆ: ಸಚಿವ




• **ವಿಧಾನಪರಿಷತ್:** ಕಳೆದ ಮೂರು ವರ್ಷಗಳಲ್ಲಿ ಒಟ್ಟು 1,189 ಅರ್ಹ ಪೊಲೀಸ್ ಕಾನ್‌ಸ್ಟೆಬಲ್‌ಗಳನ್ನು ಅಂತರಜಿಲ್ಲಾ ವರ್ಗಾವಣೆ ಮಾಡಲಾಗಿದೆ. ಸೇವಾ ಹಿರಿತನ ಹಾಗೂ ಪತಿ-ಪತ್ನಿ ಪ್ರಕರಣಗಳಿಗೆ ವರ್ಗಾವಣೆಗೆ ಮೊದಲ ಆದ್ಯತೆ ನೀಡುತ್ತಿದ್ದು, ಈ ಪ್ರಮಾಣ ಶೇ.15 ರಷ್ಟು ಮೀರದಂತೆ ಎಚ್ಚರ ವಹಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು.

ಸದಸ್ಯ ಕಿಶೋರ್ ಕುಮಾರ್ ಪುತ್ತೂರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸರ್ಕಾರ 56 ಸಾವಿರಕ್ಕಿಂತ ಹೆಚ್ಚು ಹುದ್ದೆಗಳನ್ನು ತುಂಬಲು ತೀರ್ಮಾನಿಸಲಾಗಿದೆ. ಈ ಪೈಕಿ ಪೊಲೀಸ್ ಇಲಾಖೆಯಲ್ಲಿ ಖಾಲಿಯಿರುವ 8 ಸಾವಿರ ಹುದ್ದೆಗಳನ್ನು ತುಂಬಲು ಸರ್ಕಾರ ಅನುಮತಿ ನೀಡಿದೆ. ಈ ಹಿಂದಿನ 545 ಪಿಎಸ್ಐ ಅಭ್ಯರ್ಥಿಗಳು ತರಬೇತಿ ಮುಗಿದು ಇನ್ನೊಂದು ವಾರದಲ್ಲಿ ಕರ್ತವ್ಯಕ್ಕೆ ನಿಯೋಜನೆಯಾಗಲಿದ್ದಾರೆ. ಜತೆಗೆ 402 ಪೊಲೀಸ್ ಪಿಎಸ್ಐ ಸಹ ಇನ್ನೆರಡು ತಿಂಗಳಲ್ಲಿ ತರಬೇತಿ ಮುಗಿಯಲಿದೆ ಎಂದು ತಿಳಿಸಿದರು. ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) ನಿಯಮ ಅಡಿಯಲ್ಲಿ ಕೇಂದ್ರ ಸ್ಥಾನದಿಂದ ಪೊಲೀಸ್ ವರ್ಗಾವಣೆ ಪ್ರಮಾಣ ಶೇ.15 ಕ್ಕಿಂತ ಹೆಚ್ಚಿರಬಾರದು. ಇದಕ್ಕೆ ವಿಶೇಷ ನಿಯಮಗಳನ್ನು ಜಾರಿಗೆ ತರಲಾಗಿದೆ ಎಂದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರ ಸಂಖ್ಯೆ ಬಹಳ ಕಡಿಮೆ ಇದೆ. ಆದ್ದರಿಂದ ಉತ್ತರ ಕರ್ನಾಟಕದ ಸಿಬ್ಬಂದಿಯನ್ನು ಆ ಜಿಲ್ಲೆಯಲ್ಲಿ ನಿಯೋಜಿಸಲಾಗಿದೆ. ಅವರು ಇಲ್ಲಿ ನಿಯೋಜನೆ ನಂತರ ತುಳು ಭಾಷೆ ಕಲಿಯುವಷ್ಟರಲ್ಲಿ ವರ್ಗಾವಣೆ ಸಿದ್ಧವಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಈ ಮೊದಲು ಕಿಶೋರ್ ಕುಮಾರ್ ಪುತ್ತೂರ್ ಅವರು, ಮಂಗಳೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈಗಾಗಲೇ ಪೊಲೀಸ್ ಸಿಬ್ಬಂದಿ ಕೊರತೆ ಇದೆ. 63 ಸಿಬ್ಬಂದಿ ವರ್ಗಾವಣೆಗೂ ಡಿಜಿಪಿ ಆದೇಶ ನೀಡಿದ್ದಾರೆ. ಇದರಿಂದ ಶೇ. 22 ರಷ್ಟು ಸಿಬ್ಬಂದಿ ಕೊರತೆ ಇದೆ. ಸರ್ಕಾರ ಕೂಡಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಒತ್ತಾಯಿಸಿದರು.




ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್‌ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 15.00 ಕೋಟಿ ರೂ.ಗಳ ಚೆಕ್ ಅನ್ನು ಗಣಿ ಮತ್ತು ಭೂ ವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿದರು. ಶಾಸಕ ಜಿ.ಎಸ್.ಪಾಟೀಲ್, ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಇದ್ದರು.

# ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ಬಿಜೆಪಿ ನಾಯಕರು ಧ್ವನಿ ಎತ್ತುತ್ತಿಲ್ಲ: ಡಿಕೆಶಿ



• **ವಿಧಾನಪರಿಷತ್:** ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮಾಡಬಾರದು, ಪರಿಹಾರ ನೀಡಬಾರದು ಎಂದು ಆಂಧ್ರಪ್ರದೇಶ ಕೇಂದ್ರ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಿದೆ. ಆದರೂ ಬಿಜೆಪಿ ನಾಯಕರು ಈ ಬಗ್ಗೆ ಧ್ವನಿ ಎತ್ತುತ್ತಿಲ್ಲ. ನಾನು, ಸಚಿವರಾದ ಹೆಚ್.ಕೆ ಪಾಟೀಲ್ ಹಾಗೂ ಎಂ.ಬಿ. ಪಾಟೀಲ್ ಅವರು ಮಂಗಳವಾರ ದೆಹಲಿಗೆ ಹೋಗುತ್ತಿದ್ದು, ಎಲ್ಲಾ ಸಂಸದರನ್ನು ಭೇಟಿ ಮಾಡಿ ನಮ್ಮ ರಾಜ್ಯದ ವಿಚಾರಗಳನ್ನು ಪ್ರಸ್ತಾಪಿಸುತ್ತೇವೆ ಎಂದು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿ ನಿಯಮ 330 ಅಡಿಯಲ್ಲಿ ನಡೆದ ಚರ್ಚೆ ವೇಳೆ ಹನುಮಂತ ನಿರಾಣಿ ಅವರು ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾಗುವ 20 ಗ್ರಾಮಗಳ ಪುನರ್ ವಸತಿ ವಿಚಾರವಾಗಿ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಶಿವಕುಮಾರ್ ಅವರು, ಈ ಯೋಜನೆ ಭೂ ಸಂತ್ರಸ್ತ ರೈತರಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರ ಈಗಾಗಲೇ ತೀರ್ಮಾನ ಮಾಡಿದ್ದು, ಪುನರ್ವಸತಿ ಕಾರ್ಯವನ್ನು ಬಾಕಿ ಉಳಿಸಿದ್ದೇವೆ. ಈ ಯೋಜನೆಗೆ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಲಿ, ನ್ಯಾಯಬದ್ಧವಾಗಿ ಸಂತ್ರಸ್ತರಿಗೆ ಪರಿಹಾರ ನೀಡಲಾಗುವುದು ಎಂದು ಉತ್ತರಿಸಿದರು. ಆಂಧ್ರಪ್ರದೇಶದವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಭೂಸ್ವಾಧೀನ ಪ್ರಕ್ರಿಯೆ ಮಾಡಬಾರದು, ಪರಿಹಾರ ನೀಡಬಾರದು ಎಂದು ಆಕ್ಷೇಪಣೆ ಹಾಕಿದ್ದಾರೆ. ನಿಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ವಿಚಾರವಾಗಿ ಪರಿಹಾರ ಕಂಡುಕೊಳ್ಳಲಾಗುವುದು ಎಂದು ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯರಾದ ತಿಪ್ಪಣ್ಣ ಕಮಕನೂರು ಅವರು ನ್ಯಾಯಾಲಯದ ತೀರ್ಪಿನಿಂದ ಸರ್ಕಾರಕ್ಕೆ ಸುಮಾರು 10 ಸಾವಿರ ಕೋಟಿ ರೂ. ಉಳಿತಾಯವಾಗಿದ್ದು, ಇದನ್ನು ಎತ್ತಿನಹೊಳೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿನಿಯೋಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂದು ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ನಾನು ನೀರಾವರಿ ಸಚಿವನಾದ ಬಳಿಕ ರಾಜ್ಯದ ಹಿತದೃಷ್ಟಿಯಿಂದ ನ್ಯಾಯಾಲಯದಲ್ಲಿ ಎರಡು ಪ್ರಮುಖ ತೀರ್ಪುಗಳು ಸಿಕ್ಕಿವೆ ಎಂದು ತಿಳಿಸಿದರು.

## ಕಿರುಸುದ್ದಿ

### ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶ



• **ವಿಧಾನಪರಿಷತ್:** ಬೆಳಗಾವಿಯನ್ನು ರಾಜ್ಯದ ಪ್ರಮುಖ ತಂತ್ರಜ್ಞಾನ ಮತ್ತು ನಾವೀನ್ಯತೆ ಕೇಂದ್ರವನ್ನಾಗಿ ರೂಪಿಸಲು ಹಾಗೂ ಉತ್ತರ ಕರ್ನಾಟಕದ ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರವು ಹಲವಾರು ಮಹತ್ವದ ಯೋಜನೆಗಳನ್ನು ಜಾರಿಗೆ ತರುತ್ತಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ನಿಯಮ 72 ರ ಅಡಿ ಸದಸ್ಯ ಎಂ. ನಾಗರಾಜ್ ಅವರ ಗಮನ ಸೆಳೆಯುವ ಸೂಚನೆ ಮೇರೆಗೆ ಉತ್ತರಿಸಿದ ಅವರು, ಬೆಳಗಾವಿಯಲ್ಲಿ ತಕ್ಷಣದ ಬೇಡಿಕೆ ಪೂರೈಸಲು ಕಲಾ ಮಂದಿರದಂತಹ ಸ್ಥಳಗಳಲ್ಲಿ ಐಟಿ ಪ್ಲಗ್-ಆ್ಯಂಡ್-ಪ್ಲೇ ಕೇಂದ್ರಗಳನ್ನು ಸ್ಥಾಪಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕೆಎಲ್ಇ ಟೆಕ್ನಾಲಜಿಕಲ್ ಯೂನಿವರ್ಸಿಟಿ ಮತ್ತು ಮರಾಠ ಮಂಡಲ್ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮೂರು ಟೆಕ್ನಾಲಜಿ ಬಿಸಿನೆಸ್ ಇನ್‌ಕ್ಯುಬೇಟರ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಬೆಳೆಸಲು ಕೆಎಲ್ಇ ಫಾರ್ಮಸಿ ಕಾಲೇಜು ಮತ್ತು ಎಸ್‌ಜಿ ಬಾಳೆಕುಂದ್ರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳಲ್ಲಿ ನ್ಯೂ ಏಜ್ ಇನ್ನೋವೇಶನ್ ನೆಟ್‌ವರ್ಕ್ ಕೇಂದ್ರಗಳನ್ನು ಆರಂಭಿಸಲಾಗಿದೆ. ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಇದೇ ಮೊದಲ ಬಾರಿಗೆ ಬೃಹತ್ ತಂತ್ರಜ್ಞಾನ ಶೃಂಗಸಭೆ ಟೆಕ್ಸಲರೇಷನ್-2025 ಅನ್ನು ಆಗಸ್ಟ್‌ನಲ್ಲಿ ಆಯೋಜಿಸಲಾಗಿದೆ. ಈ ಶೃಂಗಸಭೆಯಲ್ಲಿ 100ಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು ವಿದೇಶಿ ನಿಯೋಗಗಳು ಭಾಗವಹಿಸಿದ್ದವು ಎಂದು ಮಾಹಿತಿ ನೀಡಿದರು.

### ಬಿಯರ್ ಮಾರಾಟದಲ್ಲಿ ಕುಸಿತ

• **ವಿಧಾನಪರಿಷತ್:** ಆಂಧ್ರ ಪ್ರದೇಶದ ನೂತನ ಅಬಕಾರಿ ನೀತಿಯಿಂದಾಗಿ ಆಂಧ್ರ ಪ್ರದೇಶದ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೊರ ರಾಜ್ಯದ ಗ್ರಾಹಕರು ನಮ್ಮ ರಾಜ್ಯದ ಮದ್ಯವನ್ನು ಖರೀದಿಸಲು ಬರುವುದು ಕಡಿಮೆಯಾಗಿದೆ. ಇದರಿಂದ ಬಿಯರ್ ಮಾರಾಟ ಕುಸಿತವಾಗಿದೆ ಎಂದು ಸರ್ಕಾರ ಹೇಳಿದೆ. ಸದಸ್ಯ ಎಂ. ನಾಗರಾಜ್ ಯಾದವ್ ಅವರ ಪ್ರಶ್ನೆಗೆ ಅಬಕಾರಿ ಸಚಿವರ ಪರವಾಗಿ ಸಭಾನಾಯಕ ಭೋಸರಾಜು ಪ್ರತಿಕ್ರಿಯಿಸಿದರು. ಕಳೆದ ವರ್ಷಕ್ಕೆ ಹೋಲಿಸಿದ್ದಲ್ಲಿ, 2025-26ರ ಜನವರಿ ಅಂತ್ಯಕ್ಕೆ ಬಿಯರ್ ಮಾರಾಟ ಶೇ. 14.59 ಕಡಿಮೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದಾಗಿ ಮತ್ತು ಹವಾಮಾನ ಬದಲಾವಣೆಯಿಂದಾಗಿ ಅತಿ ಹೆಚ್ಚು ಶೀತದ ವಾತಾವರಣ ಇದ್ದುದ್ದರಿಂದ ಬಿಯರ್ ಮಾರಾಟದಲ್ಲಿ ಕುಸಿತ ಉಂಟಾಗಿದೆ ಎಂದು ಸಚಿವರು ತಿಳಿಸಿದರು. ಗೋವಾ ರಾಜ್ಯದಿಂದ ಅಕ್ರಮವಾಗಿ ರಾಜ್ಯಕ್ಕೆ ಮದ್ಯ ತರುವುದನ್ನು ನಿರ್ಬಂಧಿಸಲು ಕ್ರಮ ಕೈಗೊಳ್ಳಲಾಗಿದೆ. ಅಬಕಾರಿ ಇಲಾಖೆಯಿಂದ ಗಡಿಭಾಗದಲ್ಲಿ 3 ಖಾಯಂ ಅಬಕಾರಿ ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದ್ದು, ತನಿಖಾ ಠಾಣೆಗಳಲ್ಲಿರುವ ಸಿಬ್ಬಂದಿಯನ್ನು 15 ದಿನಗಳಿಗೊಮ್ಮೆ ಸರದಿ ಆಧಾರದಲ್ಲಿ ಬದಲಾಯಿಸಲಾಗುತ್ತದೆ ಎಂದು ತಿಳಿಸಿದರು. ರಾಜ್ಯದಲ್ಲಿ ನಿಷೇಧವಿರುವ ಈ ವಸ್ತು ಯಾವ ರೀತಿಯಿಂದಲೂ ನಮ್ಮ ರಾಜ್ಯಕ್ಕೆ ಪೂರೈಕೆಯಾಗದಂತೆ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದ್ದು, 2 ವರ್ಷಗಳ ಅವಧಿಯಲ್ಲಿ ಸಿ.ಎಚ್. ಪೌಡರ್ ಸಾಗಾಟಕ್ಕೆ ಸಂಬಂಧಿಸಿದಂತೆ 1,117 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದ್ದು, 771 ಆರೋಪಿಗಳನ್ನು ಬಂಧಿಸಲಾಗಿದೆ.

## ಬಜೆಟ್‌ನಲ್ಲಿ ಜನರ ನಿರೀಕ್ಷೆಗಳು ಹುಸಿ: ಬಿ.ವೈ.ವಿಜಯೇಂದ್ರ

# ಆರ್ಥಿಕ ದಿವಾಳಿ ಪ್ರದರ್ಶನ

• **ವಿಧಾನಸಭೆ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 2026-27ನೇ ಸಾಲಿನ ಬಜೆಟ್‌ನಲ್ಲಿ ಜನರ ನಿರೀಕ್ಷೆಗಳನ್ನು ಹುಸಿಗೊಳಿಸಿದ್ದಾರೆ. ಈ ಆಯವ್ಯಯದಲ್ಲಿ ಆರ್ಥಿಕ- ಬೌದ್ಧಿಕ ದಿವಾಳಿತನವನ್ನು ಕೂಡ ಪ್ರದರ್ಶನಗೊಂಡಿದೆ ಎಂದು ಬಿಜೆಪಿ ಶಾಸಕ ಬಿ.ವೈ.ವಿಜಯೇಂದ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಬಜೆಟ್ ಗಮನಿಸಿದರೆ ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿಗಳು ತಮ್ಮ ರಾಜಕೀಯ ಸಂಧ್ಯಾಕಾಲದಲ್ಲಿರುವ ಈ ಸಂದರ್ಭದಲ್ಲಿ, 17ನೇ ಬಜೆಟ್ ಮಂಡಿಸಿದ್ದಾರೆ. ಅವರಿಗೆ ಒಂದು ಸುವರ್ಣಾವಕಾಶ ಇತ್ತು. ತಮ್ಮ ರಾಜಕೀಯ ಜೀವನದ ಸುದೀರ್ಘ ಅನುಭವದ ಆಧಾರದ ಮೇಲೆ ರಾಜ್ಯದ ಸಂಕಷ್ಟಗಳಿಗೆ ನಾಡಿನ ಜನರ ಅಪೇಕ್ಷೆಗೆ ತಕ್ಕಂತೆ ಉತ್ತರ ಕಂಡುಕೊಳ್ಳುವ ಅವಕಾಶ ಇತ್ತು. ಆದರೆ, ಈ ಬಜೆಟ್ ನೋಡಿದಾಗ ಅಸಹಾಯಕರಾಗಿ ಕೈಚೆಲ್ಲಿದ್ದಾರೆಂಬ ಭಾವನೆ ರಾಜ್ಯದ ಜನರಲ್ಲಿ ಮೂಡಿದೆ ಎಂದು ವಿಶ್ಲೇಷಿಸಿದರು.

ಒಟ್ಟಾರೆಯಾಗಿ ಈ ಮುಂಗಡ ಪತ್ರದಲ್ಲಿ ಸಿಎಂ ಅವರು, ತಮ್ಮ ವೈಫಲ್ಯಗಳನ್ನು ಮುಚ್ಚಿ ಹಾಕಿಕೊಳ್ಳಲು ಕೇಂದ್ರದ ಮೇಲೆ ಆರೋಪ ಮಾಡಿ ಕೈ ತೊಳೆದುಕೊಳ್ಳುವ ಕುತಂತ್ರಕ್ಕೆ ಸೀಮಿತ ಮಾಡಿದ್ದಾರೆ ಎನ್ನುವುದು ಮೇಲ್ನೋಟಕ್ಕೇ ಗೊತ್ತಾಗುತ್ತದೆ. ಆದಾಯ ಸಂಗ್ರಹದಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಅತಿ ಹೆಚ್ಚು ಸಾಲ ಮಾಡುವ ಮೂಲಕ ಈ ನಾಡಿನ ಜನರನ್ನು ಸಾಲದ ಸುಳಿಗೆ ಸಿಲುಕಿ ಹಾಕಿಸಿರುವುದು ಸುಳ್ಳಲ್ಲ ಎಂದರು.

> **ಒಂದು ರೀತಿ ಕಟ್ಟುಕಥೆ**
>
> 
>
> ವಸತಿರಹಿತರಿಗೆ ಮನೆಗಳು, ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗಗಳನ್ನು ಕಲ್ಪಿಸಿಕೊಡಲು ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದೇವೆ ಎಂದು ಇನ್ನೊಂದು ಸುಳ್ಳು ಹೇಳುತ್ತಾರೆ. ಬಜೆಟ್ಟನ್ನು ಸಂಪೂರ್ಣವಾಗಿ ನೋಡುತ್ತ ಹೋದರೆ ಒಂದು ರೀತಿ ಕಟ್ಟುಕಥೆ, ಸುಳ್ಳಿನ ಅಂಶಗಳಿಂದ ಇದು ಕೂಡಿದೆ ಎಂದು ಗಮನ ಸೆಳೆದರು. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಅತಿ ಹೆಚ್ಚು ಆದಾಯ ನೀಡುವ ರಾಜ್ಯಗಳಾಗಿದ್ದರೂ ಇಲ್ಲಿ ಬರುವ ಆದಾಯವನ್ನು ಕೇಂದ್ರ ಸರಕಾರದ ಮೂಲಕ ಇತರ ರಾಜ್ಯಗಳು ಅತಿ ಹೆಚ್ಚು ಜನಸಂಖ್ಯೆ ಇರುವ- ಅತಿ ಹೆಚ್ಚು ಹಿಂದುಳಿದ ರಾಜ್ಯಗಳಿಗೆ ಅದರ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಭಾರತ ಮುಂಚೂಣಿಯಲ್ಲಿ ಬರಲು ಎಲ್ಲ ರಾಜ್ಯಗಳು ಕೂಡ ಅಭಿವೃದ್ಧಿಯ ಪಥದಲ್ಲಿ ಮುಂದೆ ಸಾಗಬೇಕಿದೆ ಎಂದು ವಿಜಯೇಂದ್ರ ಹೇಳಿದರು.

**ಪದೇಪದೇ ಬೆಲೆ ಏರಿಕೆಯ ಬ್ರಹ್ಮಾಸ್ತ್ರ:** ಸಾಲದ ಭಾರದಿಂದ ಕುಸಿದುಹೋಗಿರುವ ರಾಜ್ಯಕ್ಕೆ ದೊಡ್ಡ ಹೊರೆಯಾಗಿದೆ. ವಿತ್ತೀಯ ಕೊರತೆ ಹೆಚ್ಚಾಗಿ ರಾಜ್ಯದ ಜನರ ಮೇಲೆ ಪದೇಪದೇ ಬೆಲೆ ಏರಿಕೆಯ ಬ್ರಹ್ಮಾಸ್ತ್ರವನ್ನು ರಾಜ್ಯ ಸರಕಾರ ಪ್ರಯೋಗ ಮಾಡುತ್ತಿರುವುದು ಈ ನಾಡಿನ ದುರಂತ ಎಂದರು. ಸಿಎಂ ಅವರು ಬಜೆಟ್ಟನ್ನು ಸುದೀರ್ಘವಾಗಿ ಓದುತ್ತಿರುವಾಗ ಆಡಳಿತ ಪಕ್ಷದ ಸದಸ್ಯರನ್ನು ಗಮನಿಸುತ್ತಿದ್ದೆ. ಆಡಳಿತ ಪಕ್ಷದ ಸದಸ್ಯರಿಗೂ ಈ ಬಜೆಟ್ ಬಗ್ಗೆ ಆಸಕ್ತಿ ಇರಲಿಲ್ಲ; ಅವರು ಅಸಹಾಯಕರಾಗಿ ಸದನದಿಂದ ಹೊರಹೋದ ಘಟನೆಯನ್ನೂ ನಾನು ಗಮನಿಸಿದ್ದೇನೆ ಎಂದು ತಿಳಿಸಿದರು.

**ಈ ಬಜೆಟ್ ಹಸಿ ಸುಳ್ಳಿನಿಂದ ಕೂಡಿದೆ:** ಬಜೆಟ್ ಮಂಡಿಸಿದ ಈ ಆಯವ್ಯಯವು ನಾಡಿನ ರೈತರು, ದಮನಿತರು, ಮಹಿಳೆಯರು, ಅಶಕ್ತರು, ಅಲ್ಪಸಂಖ್ಯಾತರು, ವಿದ್ಯಾರ್ಥಿ ಯುವಜನರು, ವ್ಯಾಪಾರ ಮತ್ತು ಕೈಗಾರಿಕೋದ್ಯಮದಲ್ಲಿ ತೊಡಗಿಕೊಂಡವರ ಕನಸನ್ನು ಮತ್ತು ಆಶೋತ್ತರಗಳನ್ನು ಪ್ರತಿನಿಧಿಸುವ ಜೀವಂತ ದಾಖಲೆ ಆಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ, ಈ ಬಜೆಟ್ ಹಸಿ ಸುಳ್ಳಿನಿಂದ ಕೂಡಿದೆ. ಸರಕಾರಿ ಹುದ್ದೆಗಳನ್ನು ಭರ್ತಿ ಮಾಡುವುದರ ಜೊತೆಯಲ್ಲಿ ರಾಜ್ಯದ ರಸ್ತೆ, ಸೇತುವೆ, ಕಟ್ಟಡ ನಿರ್ಮಾಣಕ್ಕೂ ನಮ್ಮ ಸರಕಾರ ಆದ್ಯತೆ ನೀಡಿದೆ ಎಂದಿದ್ದಾರೆ. ಹಾಗಿದ್ದರೆ, ಕಳೆದ 3 ವರ್ಷದಲ್ಲಿ ಈ ಸರಕಾರ ಎಷ್ಟು ರಸ್ತೆಗಳನ್ನು ಮಾಡಿದೆ? ಎಷ್ಟು ಸೇತುವೆಗಳನ್ನು ಕಟ್ಟಿದೆ? ಎಷ್ಟು ಸರಕಾರಿ ಹುದ್ದೆಗಳನ್ನು ನೇಮಕ ಮಾಡಿದ್ದಾರೆ ಎಂದು ಪ್ರಶ್ನಿಸಿದರು.

# ಗೃಹ ಬಳಕೆ ಸಿಲಿಂಡರ್ ಅಭಾವವಿಲ್ಲ: ಮುನಿಯಪ್ಪ



• **ವಿಧಾನಪರಿಷತ್:** ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧ ಪರಿಸ್ಥಿತಿಯಿಂದಾಗಿ ಕರ್ನಾಟಕ ಮಾತ್ರವಲ್ಲದೇ ದೇಶಾದ್ಯಂತ ಅಡುಗೆ ಅನಿಲ ಅಭಾವ ಉಂಟಾಗಿದೆ. ಆದರೆ, ಗೃಹ ಬಳಕೆ ಸಿಲಿಂಡರ್‌ಗಳಿಗೆ ರಾಜ್ಯದಲ್ಲಿ ಕೊರತೆಯಿಲ್ಲ, 10- 12 ದಿನಗಳಲ್ಲಿ ವಾಣಿಜ್ಯ ಸಿಲಿಂಡರ್‌ಗಳೂ ಪೂರೈಕೆಯಾಗಲಿವೆ. ರಾಜ್ಯದ ಜನತೆ ಆತಂಕ ಪಡುವ ಅಗತ್ಯವಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ಅವರು ಹೇಳಿದರು.

ವಿಧಾನ ಪರಿಷತ್‌ನಲ್ಲಿ ನಿಯಮ 330ರ ಅಡಿಯಲ್ಲಿ ಸದಸ್ಯರಾದ ರಮೇಶ್ ಬಾಬು, ಐವನ್ ಡಿಸೋಜಾ, ಶಿವಕುಮಾರ್ ಕೆ. ಪ್ರಸ್ತಾಪಿಸಿದ ಸಿಲಿಂಡರ್ ಸಮಸ್ಯೆ ಕುರಿತು ಪ್ರಶ್ನೆಗೆ ಉತ್ತರಿಸಿದ ಸಚಿವರು, ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿ.(ಐಓಸಿಎಲ್) ಮಾಹಿತಿ ಪ್ರಕಾರ ದೇಶದ ಒಟ್ಟಾರೆ ಬೇಡಿಕೆಯಲ್ಲಿ ಶೇ.70 ರಷ್ಟು ವಿದೇಶದಿಂದ ಆಮದು ಮಾಡಿಕೊಳ್ಳಲಾಗುತ್ತಿದ್ದು, ಶೇ.30 ರಷ್ಟು ಭಾರತದಲ್ಲೇ ಗ್ಯಾಸ್ ಉತ್ಪಾದಿಸಲಾಗುತ್ತದೆ. ದೇಶದಲ್ಲಿ ಉತ್ಪಾದನೆಯಾಗುವ ಎಲ್‌ಪಿಜಿಯನ್ನು ಗೃಹ ಬಳಕೆಗೆ ಪೂರೈಸಲು ಯಾವುದೇ ಸಮಸ್ಯೆಯಿಲ್ಲ ಎಂದರು.

ಸದ್ಯ ವಾಣಿಜ್ಯ ಉದ್ದೇಶಗಳಿಗೆ ಬಳಕೆಯಾಗುವ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಆದರೆ, ವಿದೇಶಾಂಗ ಸಚಿವಾಲಯದ ಮಾಹಿತಿ ಪ್ರಕಾರ ಹಾರ್ಮುಜ್ ಕಣಿವೆಯಲ್ಲಿ ಸಿಲುಕಿದ್ದ ಹಡಗುಗಳ ಪೈಕಿ ಭಾರತಕ್ಕೆ ಅನಿಲ ಪೂರೈಸುವ ಎರಡು ಹಡಗುಗಳಿಗೆ ಇರಾನ್ ಅವಕಾಶ ಕಲ್ಪಿಸಿದೆ ಎಂದು ಹೇಳಿದರು.

> **ಕೇಂದ್ರ ಸರ್ಕಾರದ ವೈಫಲ್ಯ: ಆರೋಪ**
>
> ಬಳಿಕ ಮಾತನಾಡಿದ ಕಾಂಗ್ರೆಸ್ ಸದಸ್ಯರು ದೇಶದಲ್ಲಿ ಅಡುಗೆ ಅನಿಲ ಕೊರತೆಯಾಗಿರುವುದು ಕೇಂದ್ರ ಸರ್ಕಾರದ ವೈಫಲ್ಯ ಎಂದು ಟೀಕಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಭಾರತಿ ಶೆಟ್ಟಿ, ಬೋಜೇಗೌಡ ಅವರು ಮೋದಿ ಹೈ ತೋ ಸುಮ್ಕಿನ್ ಹೈ ಎಂದು ತಿರುಗೇಟು ನೀಡಿದರು. ಈ ವೇಳೆ ಸದನದಲ್ಲಿ ಗದ್ದಲ ಉಂಟಾಗಿದ್ದರಿಂದ ಸಭಾಪತಿಗಳು 15 ನಿಮಿಷ ಕಲಾಪವನ್ನು ಮುಂದೂಡಿದರು.

## ಆದ್ಯತಾ ಕುಟುಂಬಗಳಿಗಿರುವ ಮಿತಿ ಮತ್ತೊಮ್ಮೆ ಸರ್ಕಾರ ಪರಿಶೀಲನೆ

# ವಾರ್ಷಿಕ ಆದಾಯ ಮಿತಿ 3 ಲಕ್ಷಕ್ಕೆ ಹೆಚ್ಚಳ?



• **ವಿಧಾನಸಭೆ:** ರಾಜ್ಯದಲ್ಲಿ ಆದ್ಯತಾ ಕುಟುಂಬಗಳಿಗೆ (ಪಿಎಚ್‌ಎಚ್) ನೀಡಲಾಗುವ ಪಡಿತರ ಚೀಟಿಗಳ ವಾರ್ಷಿಕ ಆದಾಯ ಮಿತಿಯನ್ನು ಪ್ರಸ್ತುತ ಇರುವ 1.20 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಪ್ರಶ್ನೆಗೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್.ಮುನಿಯಪ್ಪ ಪರವಾಗಿ ಅವರು ಉತ್ತರಿಸಿದರು.

ಡಾ. ಅಶ್ವತ್ಥನಾರಾಯಣ ವಿಷಯ ಪ್ರಸ್ತಾಪಿಸಿ, ಪ್ರಸ್ತುತ ಜಾರಿಯಲ್ಲಿರುವ ಆದಾಯ ಮಿತಿಯು ಎಂಟು ವರ್ಷಗಳಷ್ಟು ಹಳೆಯದಾಗಿದೆ. ಕಳೆದ ಎಂಟು ವರ್ಷಗಳಲ್ಲಿ ಜನರ ಜೀವನ ವೆಚ್ಚ ಮತ್ತು ಆದಾಯದ ಪ್ರಮಾಣದಲ್ಲಿ ಗಣನೀಯ ಏರಿಕೆಯಾಗಿದೆ. ಹಳೆಯ ಮಾನದಂಡಗಳನ್ನೇ ಇಂದಿಗೂ ಮುಂದುವರಿಸುವುದು ವೈಜ್ಞಾನಿಕವಲ್ಲ, ಅಲ್ಲದೆ, ನಗರ ಮತ್ತು ಗ್ರಾಮೀಣ ಭಾಗಗಳಿಗೆ ಒಂದೇ ರೀತಿಯ ಆದಾಯ ಮಿತಿಯನ್ನು ನಿಗದಿಪಡಿಸಿರುವುದು ಸಮಂಜಸ ಕ್ರಮವಲ್ಲ ಎಂದು ಹೇಳಿದರು.

ಬಿಜೆಪಿ ಶಾಸಕ ಗೋಪಾಲಯ್ಯ ಅವರು, ಪಡಿತರ ಚೀಟಿಗಳ ರದ್ದತಿಯಿಂದಾಗುತ್ತಿರುವ ಅನ್ಯಾಯವಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 8-10 ಸಾವಿರ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲಾಗಿದೆ. ಯಾವುದೇ ಮನೆಮನೆ ಸಮೀಕ್ಷೆ ನಡೆಸದೆ ಏಕಾಏಕಿ ಕಾರ್ಡ್‌ಗಳನ್ನು ರದ್ದುಗೊಳಿಸುವುದು ಬಡವರಿಗೆ ಮಾಡುತ್ತಿರುವ ಅನ್ಯಾಯ. ತಾಂತ್ರಿಕ ಕಾರಣಗಳನ್ನು ನೀಡಿ ಬಡವರ ಅನ್ನವನ್ನು ಕಸಿದುಕೊಳ್ಳಬಾರದು ಎಂದು ಆಗ್ರಹಿಸಿದರು.

ಇದಕ್ಕೆ ಧ್ವನಿಗೂಡಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ ಬಾಬು, ಪಡಿತರ ಚೀಟಿಯು ಕೇವಲ ಅಕ್ಕಿ ಪಡೆಯಲು ಮಾತ್ರ ಸೀಮಿತವಾಗಿಲ್ಲ, ಚಾಲಕ ವೃತ್ತಿ ಮಾಡುವವರು ಅಥವಾ ಸಣ್ಣ ಪುಟ್ಟ ಕೆಲಸ ಮಾಡುವವರ ಆದಾಯ ಹೆಚ್ಚಿದ್ದರೂ ಅವರ ಕಾರ್ಡ್‌ಗಳನ್ನು ರದ್ದು ಮಾಡಲಾಗುತ್ತಿದೆ. ಬಿಪಿಎಲ್ ಕಾರ್ಡ್ ಕೇವಲ ಆಹಾರಕ್ಕಷ್ಟೇ ಅಲ್ಲದೆ, ಉಚಿತ ಆರೋಗ್ಯ ಸೇವೆಗಳು ಮತ್ತು ಮಕ್ಕಳ ಶಿಕ್ಷಣ ಸೇರಿದಂತೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಅತ್ಯಗತ್ಯವಾಗಿದೆ ಎಂದರು.

ಸಚಿವ ದಿನೇಶ್ ಗುಂಡೂರಾವ್, ಹಿರಿಯ ಸದಸ್ಯ ಆರ್.ವಿ. ದೇಶಪಾಂಡೆ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗವು ಈ ಕುರಿತು ಈಗಾಗಲೇ ವರದಿ ನೀಡಿದೆ. ಆ ವರದಿಯಲ್ಲಿ ಬಿಪಿಎಲ್ ಕಾರ್ಡ್ ಪಡೆಯಲು ಇರುವ ವಾರ್ಷಿಕ ಆದಾಯದ ಮಿತಿಯನ್ನು 3 ಲಕ್ಷ ರೂ.ಗೆ ಏರಿಸಬೇಕು ಎಂದು ಶಿಫಾರಸ್ಸು ಮಾಡಲಾಗಿದೆ. ಈ ಶಿಫಾರಸ್ಸನ್ನು ಸರ್ಕಾರವು ಸಕಾರಾತ್ಮಕವಾಗಿ ಪರಿಶೀಲಿಸುತ್ತಿದೆ ಎಂದರು.

> **ಬಡವರಿಗೆ ಸಿಗದ ಪಡಿತರ**
>
> ಕೇಂದ್ರ ಸರ್ಕಾರದ ಆಹಾರ ಭದ್ರತಾ ಕಾಯ್ದೆಯ ನಿಯಮಗಳ ಪ್ರಕಾರ, ಗ್ರಾಮೀಣ ಭಾಗದಲ್ಲಿ ಶೇ.75 ರಷ್ಟು ಮತ್ತು ನಗರ ಪ್ರದೇಶದಲ್ಲಿ ಶೇ.50 ರಷ್ಟು ಬಿಪಿಎಲ್ ಕಾರ್ಡ್‌ಗಳನ್ನು ಹೊಂದಲು ಅವಕಾಶವಿದೆ. ಆದರೆ, ಪ್ರಸ್ತುತ ನಗರ ಪ್ರದೇಶಗಳಲ್ಲಿ ಅರ್ಹ ಬಡವರಿಗೆ ಆದ್ಯತಾ ಪಡಿತರ ಚೀಟಿಗಳು ಸಿಗುತ್ತಿಲ್ಲ ಎಂಬ ಆತಂಕವನ್ನು ಡಾ. ಅಶ್ವತ್ಥನಾರಾಯಣ ವ್ಯಕ್ತಪಡಿಸಿದರು.

# ಆರೋಗ್ಯ ತುರ್ತು ಪರಿಸ್ಥಿತಿ: ಆಕ್ರೋಶ

• **ವಿಧಾನಸಭೆ:** ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ, ಔಷಧಿಗಳ ಅಭಾವ ಹಾಗೂ ಆ್ಯಂಬುಲೆನ್ಸ್ ಸೇವೆಗಳ ವೈಫಲ್ಯದಿಂದಾಗಿ ರಾಜ್ಯದಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪ್ರತಿಪಕ್ಷದ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ಕಲಾಪದಲ್ಲಿ ಪ್ರಶ್ನೋತ್ತರ ಅವಧಿ ಮುಗಿಯುತ್ತಿದ್ದಂತೆಯೇ ಪ್ರತಿಪಕ್ಷ ನಾಯಕ ಆರ್. ಅಶೋಕ, ರಾಜ್ಯದ ಆರೋಗ್ಯ ಇಲಾಖೆಯು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೆ ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚೆಗೆ ಅವಕಾಶ ನೀಡಬೇಕು ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ಮನವಿ ಮಾಡಿದರು.

ಸಾರ್ವಜನಿಕವಾಗಿ ಅತ್ಯಂತ ಮಹತ್ವದ ಮತ್ತು ತುರ್ತು ಚರ್ಚೆಯ ಅಗತ್ಯವಿರುವ ವಿಷಯಗಳನ್ನು ನಿಲುವಳಿ ಸೂಚನೆಯ ಅಡಿಯಲ್ಲೇ ಚರ್ಚಿಸಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಇಂತಹ ಗಂಭೀರ ವಿಷಯಗಳನ್ನು ಏಕಾಏಕಿ ಸಾರ್ವಜನಿಕ ಮಹತ್ವದ ವಿಚಾರವನ್ನಾಗಿ (ನಿಯಮ 69ರ ಅಡಿ) ಪರಿವರ್ತಿಸಲಾಗುತ್ತಿದೆ. ಹೀಗೆ ಮಾಡುವುದರಿಂದ ವಿಷಯದ ತೀವ್ರತೆ ಮತ್ತು ಗಂಭೀರತೆ ಕಡಿಮೆಯಾಗುತ್ತದೆ. ಮುಖ್ಯಮಂತ್ರಿಯವರು ಅಥವಾ ಸಂಬಂಧಪಟ್ಟ ಸಚಿವರು ಯಥಾರೀತಿ ಉತ್ತರ ನೀಡಿ ಹೋಗುತ್ತಾರೆ. ಇದರಿಂದ ಬಡವರಿಗೆ ಯಾವುದೇ ನ್ಯಾಯ ಸಿಗುವುದಿಲ್ಲ ಎಂದವರು ಅಸಮಾಧಾನ ವ್ಯಕ್ತಪಡಿಸಿದರು.

ರಾಜಕೀಯ ಪ್ರೇರಿತ ಅಥವಾ ಒತ್ತಡದ ವಿಚಾರಗಳಿದ್ದರೆ ಬೇಕಿದ್ದರೆ ಅಂತಹವುಗಳನ್ನು ಪರಿವರ್ತನೆ ಮಾಡಿ. ಆದರೆ, ಬಡವರ ಪ್ರಾಣಕ್ಕೆ ಸಂಬಂಧಿಸಿದ, ಆರೋಗ್ಯ ಇಲಾಖೆಯ ಹದಗೆಟ್ಟ ಸ್ಥಿತಿಯಂತಹ ಜನರ ನೇರ ಸಮಸ್ಯೆಗಳಿದ್ದಾಗ ಅದನ್ನು ಪ್ರಾಥಮಿಕ ವಿಷಯ ಮಂಡನೆಗೆ ಅವಕಾಶ ಮಾಡಿಕೊಡಿ, ಎಂದು ಕೋರಿದರು. ಇಂದು ರಾಜ್ಯದ ಯಾವುದೇ ಸರ್ಕಾರಿ ಆಸ್ಪತ್ರೆಗೆ ಹೋದರೂ ಅಲ್ಲಿ ಅಗತ್ಯ ಔಷಧಿಗಳು ಸಿಗುತ್ತಿಲ್ಲ, ವೈದ್ಯರ ಕೊರತೆ ಎದ್ದುಕಾಣುತ್ತಿದೆ. ಕೇವಲ ಪ್ರತಿಪಕ್ಷದವರು ಮಾತ್ರವಲ್ಲ, ಸ್ವತಃ ವೈದ್ಯಕೀಯ ಸಂಘದ ಪದಾಧಿಕಾರಿಗಳೇ ಔಷಧಿಗಳ ಕೊರತೆ ಇರುವುದನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಆಸ್ಪತ್ರೆಗಳಲ್ಲಿ ಪ್ಯಾರಾಸಿಟಮಾಲ್‌ನಂತಹ ಪ್ರಾಥಮಿಕ ಮಾತ್ರೆಗಳಿಗೂ ರೋಗಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

> **ಸಕಾಲಕ್ಕಿಲ್ಲ ಆ್ಯಂಬುಲೆನ್ಸ್ ಸೇವೆ**
>
> ಬಿಜೆಪಿಯ ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ರಾಜ್ಯದಲ್ಲಿ ಪ್ರಸ್ತುತ ಆರೋಗ್ಯ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ.
>
> 
>
> ಆ್ಯಂಬುಲೆನ್ಸ್ ಸೇವೆಗಳು ಸಕಾಲಕ್ಕೆ ಸಿಗುತ್ತಿಲ್ಲ, ಡಯಾಲಿಸಿಸ್ ಕೇಂದ್ರಗಳಲ್ಲಿ ಸಮಸ್ಯೆಗಳಿವೆ ಮತ್ತು ಆಸ್ಪತ್ರೆಗಳ ನಿರ್ವಹಣೆಗೆ ಅನುದಾನದ ಕೊರತೆಯಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಸಾವು-ನೋವುಗಳ ಸಂಖ್ಯೆ ಹೆಚ್ಚಾಗಲಿದೆ, ಎಂದು ಆತಂಕ ವ್ಯಕ್ತಪಡಿಸಿದರು. ಪ್ರತಿಪಕ್ಷಗಳ ವಾಗ್ದಾಳಿಗೆ ಉತ್ತರಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸರ್ಕಾರವು ಈ ವಿಷಯದ ಬಗ್ಗೆ ಚರ್ಚೆ ನಡೆಸಲು ಯಾವುದೇ ಸಮಯದಲ್ಲೂ ಸಿದ್ಧವಿದೆ. ಇಲಾಖೆಯಲ್ಲಿ ಆಗಿರುವ ಸುಧಾರಣೆಗಳು ಮತ್ತು ಎದುರಿಸುತ್ತಿರುವ ಸವಾಲುಗಳ ಬಗ್ಗೆ ನಾವು ಮುಕ್ತವಾಗಿ ಮಾತನಾಡುತ್ತೇವೆ. ಈ ವಿಷಯದ ಗಂಭೀರತೆಯನ್ನು ಗಮನಿಸಿ ಪ್ರಶ್ನೆಗಳಾಗಿ ಸುದೀರ್ಘ ಚರ್ಚೆಗೆ ಸಮಯ ನಿಗದಿಪಡಿಸುವಂತೆ ಸಭಾಧ್ಯಕ್ಷರಲ್ಲಿ ಮನವಿ ಮಾಡಿದರು.

## ಹಾಸನದಲ್ಲಿ ಗರಿಷ್ಠ 788 ಮಾದರಿಗಳಲ್ಲಿ ಪತ್ತೆ

# ಕೆಲವು ಡೇರಿಗಳಲ್ಲಿ ಹಾಲು ಕಲಬೆರಕೆ



• **ವಿಧಾನಪರಿಷತ್:** ಒಂದು ವರ್ಷದಲ್ಲಿ ಡೇರಿಗಳಿಗೆ ಪೂರೈಕೆಯಾದ ಹಾಲಿನ ಘಟಕಗಳ 15,15,575 ಮಾದರಿಗಳನ್ನು ಪರೀಕ್ಷಿಸಲಾಗಿದೆ. ಅದರಲ್ಲಿ 3,049 ಮಾದರಿಗಳಲ್ಲಿ ಮಾತ್ರ ಕಲಬೆರಕೆ ಕಂಡು ಬಂದಿದೆ ಎಂದು ಸಭಾನಾಯಕ ಭೋಸರಾಜು ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಮಧು ಜಿ. ಮಾದೇಗೌಡ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಉತ್ತರಿಸಿದ ಅವರು, ಹಾಸನದಲ್ಲಿ ರಾಜ್ಯದಲ್ಲೇ ಗರಿಷ್ಠ 788 ಮಾದರಿಗಳಲ್ಲಿ ಕಲಬೆರಕೆ ಪತ್ತೆಯಾಗಿದೆ. ಉಳಿದಂತೆ ಬಳ್ಳಾರಿಯಲ್ಲಿ - 588, ಶಿವಮೊಗ್ಗ- 434, ಮಂಡ್ಯ -418 ಮತ್ತು ಕಲಬುರಗಿ -315 ರಲ್ಲಿ ಹೆಚ್ಚು ಕಲಬೆರಕೆ ಪತ್ತೆಯಾಗಿದೆ. ಇನ್ನು ಹಾಲಿನಲ್ಲಿ ಕಲಬೆರಕೆ ಅಂಶ ಪತ್ತೆ ಹಚ್ಚಲು ಎಲ್ಲ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಅಡಲ್ಟರೇಷನ್ ಟೆಸ್ಟ್ ಕಿಟ್ (ಸಕ್ಕರೆ, ಉಪ್ಪು, ನ್ಯೂಟ್ರಲೈಸರ್, ಯೂರಿಯಾ ಇತ್ಯಾದಿ) ಅನ್ನು ಒದಗಿಸಲಾಗಿದ್ದು, ಕಲಬೆರಕೆ ಅಂಶವನ್ನು ಪರೀಕ್ಷಿಸಲಾಗುತ್ತಿದೆ ಹಾಗೂ ಸಂಘಗಳಲ್ಲಿ ಸ್ವೀಕರಿಸಿದ ಹಾಲನ್ನು ಡೇರಿ ಹಂತದಲ್ಲಿಯೂ ಸಹ ಎಲ್ಲ ರೀತಿಯ ಪರೀಕ್ಷೆಗೊಳಪಡಿಸಿ ಸ್ವೀಕರಿಸಲಾಗುತ್ತಿದೆ. ಇದರೊಂದಿಗೆ ಡೋಡ್ಲಾ ಕಂಪನಿಯ ಹಾಲಿನಲ್ಲೂ ಕಲಬೆರಕೆ ಅಂಶ ಪತ್ತೆಯಾಗಿದೆ ಎಂದು ಸದನಕ್ಕೆ ಮಾಹಿತಿ ನೀಡಿದರು. ಇದೇ ವೇಳೆ ಕೋಲಾರ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ನಂದಿನಿ ಪೈಟೆಕ್ ಪ್ಯಾಕ್ ಪ್ಲಾಂಟ್ ಚನ್ನರಾಯಪಟ್ಟಣ, ನಂದಿನಿ ಪೈಟೆಕ್ ಮೆಗಾ ಪೌಡರ್ ಪ್ಲಾಂಟ್, ರಾಮನಗರ ಮತ್ತು ಮದರ್ ಡೇರಿಯಲ್ಲಿ ಕಲಬೆರಕೆಯ ಒಂದೇ ಒಂದು ಪ್ರಕರಣ ಪತ್ತೆಯಾಗಿಲ್ಲ ಎಂದು ತಿಳಿಸಿದರು.

> **ಉತ್ಪಾದಕರಿಗೆ ಅರಿವು ಮೂಡಿಸಿ**
>
> ಜಿಲ್ಲಾ ಹಾಲು ಒಕ್ಕೂಟಗಳ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಪೂರೈಸುವ ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬಂದರೆ ಆ ಹಾಲನ್ನು ತಿರಸ್ಕರಿಸಿ, ಉತ್ಪಾದಕರಿಗೆ ಅರಿವು ಮೂಡಿಸಿ, ಸಂಘದ ಕಾರ್ಯಕಾರಿ ಮಂಡಳಿ ಹಾಗೂ ಸಿಬ್ಬಂದಿಗೆ ಕಲಬೆರಕೆ ಮತ್ತೆ ಈ ರೀತಿಯಾಗದಂತೆ ಎಚ್ಚರಿಕೆ ನೀಡಲಾಗಿದೆ ಎಂದು ಭರವಸೆ ನೀಡಿದ್ದಾರೆ.

## ಜನರ ಅಮೂಲ್ಯ ಜೀವ ರಕ್ಷಣೆ ನಿಟ್ಟಿನಲ್ಲಿ ಕ್ರಮ: ಸಚಿವ ಈಶ್ವರ ಖಂಡ್ರೆ

# ಕಾಡು ಪ್ರಾಣಿಗಳ ಸಂಘರ್ಷ ತಡೆಗೆ ಸಫಾರಿ ಸ್ಥಗಿತ

• **ವಿಧಾನಸಭೆ:** ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 314 ಕಿ.ಮೀ. ಗಡಿ ಇದೆ. ಅದರಲ್ಲಿ 100 ಕಿ.ಮೀ ಗಡಿ ಹೆಚ್ಚಿನ ಸಂಘರ್ಷ ಪ್ರದೇಶವಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರು, ಸಫಾರಿ ಸ್ಥಗಿತಗೊಳಿಸಿದ್ದರಿಂದ 4 ಸಾವಿರಕ್ಕೂ ಹೆಚ್ಚು ಜನರು ಉದ್ಯೋಗ ಕಳೆದುಕೊಂಡಿದ್ದರು. ಸಫಾರಿ ದೇಶಾದ್ಯಂತ ಹಲವು ವರ್ಷದಿಂದ ನಡೆಯುತ್ತಿದೆ. ಒಂದು ಸಮೀಕ್ಷೆಯನ್ನೂ ನಡೆಸದೆ ಏಕಾಏಕಿ ಸಫಾರಿ ನಿಲ್ಲಿಸಿದ್ದು ಮತ್ತು ಪುನರ್ ಆರಂಭಿಸದ್ದು ಸರಿಯಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸಫಾರಿಯನ್ನು ಏಕಾಏಕಿ ನಿಲ್ಲಿಸಿಲ್ಲ, ಕಳೆದ ನವೆಂಬರ್ ತಿಂಗಳಲ್ಲಿ 15 ದಿನಗಳ ಅಂತರದಲ್ಲಿ ಮೂರು ಜೀವಹಾನಿಯಾಗಿತ್ತು. ಒಬ್ಬರು ಶಾಶ್ವತವಾಗಿ ಅಂಗವಿಕಲರಾದರು. ಹುಲಿಗಳು ಕಾಡಿನಿಂದ ಹೊರಗೆ ಬಂದು ದಾಳಿ ಮಾಡುತ್ತಿದ್ದವು. ಜನರ ಅಮೂಲ್ಯ ಜೀವ ರಕ್ಷಣೆ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಯಿತು ಎಂದು ಸ್ಪಷ್ಟಪಡಿಸಿದರು. ನವೆಂಬರ್‌ನಲ್ಲಿ ಹಾವು, ಚಾಮರಾಜನಗರ ದಲ್ಲಿ ಈ ಸಂಬಂಧ ಸಭೆ ನಡೆಸಿದಾಗ ಹಲವು ರೈತ ಸಂಘಟನೆಗಳು ಸಫಾರಿ ರಾತ್ರಿಯವರೆಗೂ ನಡೆಯುತ್ತಿದೆ. ಹೆಚ್ಚಿನ ವಾಹನಗಳ ಸಂಚಾರ ಇದೆ. ಹೆಚ್ಚು ಪ್ರವಾಸಿಗರು ಆಗಮಿಸುತ್ತಿದ್ದಾರೆ ಎಂದರು.

> **ಕುಮಾರ ಪರ್ವತ ಚಾರಣಕ್ಕೆ ಆನ್‌ಲೈನ್ ಟಿಕೆಟ್**
>
> 
>
> • **ವಿಧಾನಸಭೆ:** ಕುಕ್ಕೆ ಸುಬ್ರಹ್ಮಣ್ಯ ಬಳಿಯ ಕುಮಾರ ಪರ್ವತ ಚಾರಣಕ್ಕೆ ಆಗಮಿಸುವವರು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಮಾತ್ರ ಟಿಕೆಟ್ ಖರೀದಿಸಬೇಕಾಗುತ್ತದೆಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಭಾಗೀರಥಿ ಮುರುಳ್ಯ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಒಂದೇ ದಿನ 2-3 ಸಾವಿರ ಜನರು ಒಂದೇ ಕಡೆ ಸೇರಿದರೆ ಸಮಸ್ಯೆ ಆಗುತ್ತದೆ. ಆದ್ದರಿಂದ ನಿಯಂತ್ರಣ ಕ್ರಮ ಕೈಗೊಂಡು ಪ್ರತಿನಿತ್ಯ 150 ಜನರಿಗೆ ಮಾತ್ರ ಚಾರಣಕ್ಕೆ ಅವಕಾಶ ನೀಡಲಾಗುತ್ತಿದೆ. ಮಳೆಗಾಲದಲ್ಲಿ ಜಾರುವ ಹಾಗೂ ಬೇಸಗೆಯಲ್ಲಿ ಕಾಡ್ಗಿಚ್ಚಿನ ಭೀತಿ ಎದುರಾಗುವ ಕಾರಣ ಚಾರಣ ಇರುವುದಿಲ್ಲ ಎಂದು ವಿವರಿಸಿದರು. ಸುಬ್ರಹ್ಮಣ್ಯದಿಂದ ಕುಮಾರ ಪರ್ವತಕ್ಕೆ 24 ಕಿ.ಮೀ. ಚಾರಣ ಪಥವಿದ್ದು, ಅಲ್ಲಿ ಹೋಗಿ, ಮರಳಿ ಬರಲು 2 ದಿನ ಆಗುತ್ತಿತ್ತು. ರಾತ್ರಿ ಅಲ್ಲೇ ಉಳಿಯಬೇಕಿತ್ತು ಎಂದು ಹೇಳಿದರು.

> **ಬಂಡೀಪುರದಲ್ಲಿವೆ 175 ಹುಲಿಗಳು**
>
> 1972ರಲ್ಲಿ ಬಂಡೀಪುರದಲ್ಲಿ ಕೇವಲ 12 ಹುಲಿಗಳಿದ್ದವು. ಕಳೆದ 3 ವರ್ಷದ ಹಿಂದೆ ಗಣತಿ ನಡೆದಾಗ ಅಲ್ಲಿ 150 ಹುಲಿ ಇದ್ದವು. ಈಗ ಹುಲಿಗಳ ಸಂಖ್ಯೆ 175 ಹುಲಿ ಇವೆ. ಕಾಡಿನ ಧಾರಣಾ ಸಾಮರ್ಥ್ಯ ತಿಳಿಯಲು ತಜ್ಞರ ಸಮಿತಿಯಿಂದ ವರದಿ ಪಡೆದುಕೊಳ್ಳುತ್ತಿದ್ದೇವೆ. ಕಾಡು ಹೆಚ್ಚುತ್ತಿಲ್ಲ, ಬದಲಾಗಿ ಕ್ಷೀಣಿಸುತ್ತಿದೆ. ಸಫಾರಿ ಮತ್ತೆ ಆರಂಭಿಸಿದ ನಂತರ ಪ್ರತಿಷ್ಠಾನಕ್ಕೆ ಸಫಾರಿಯಿಂದ ಬರುವ ಆದಾಯದಲ್ಲಿ ಶೇ.35 ರಷ್ಟನ್ನು ಕಾಡಿನಂಚಿನ ಗ್ರಾಮದಲ್ಲಿ ಜನಸಂಪರ್ಕ ಸಭೆ ಮಾಡಲು, ಶಿಕ್ಷಣ, ಮೂಲ ಸೌಕರ್ಯ ಹೆಚ್ಚಳಕ್ಕೆ, ಉದ್ಯೋಗ ಸೃಷ್ಟಿಗೆ ಬಳಸಲು ಸೂಚಿಸಲಾಗಿದೆ ಎಂದರು.

**IN THE COURT OF THE SENIOR CIVIL JUDGE AND J.M.F.C. AT SHIDLAGATTA**
**Cvl Misc. No. 2/2026**

Petitioner: 1. Smt. Puttamma W/o Late Muniyappa M, Aged about 70 years, 2. Sri Chandra Shekar M S/o Late Muniyappa M Aged about 60 years, 3. Sri. Shankar Narayana M S/o Late Muniyappa M Aged about 46 years, 4. Sri. Mahesh M S/o Late Muniyappa M Aged about 42 years, R/at: Ward No 13, K E B opposite Kurubarapete, Sidlaghatta town and taluk, Chickballapur District -V/S-

Respondent: The Commissioner Births & Deaths, Shidlagatta Town and Taluk, Chickballapur District.

**DRAFT PAPER PUBLICATION**

The petitioners has filed this petition for grant of death certificate of their Grand father by name Munishamappa S/o Late Doddo Anneppa Died on 21/07/1985 at Ward No 13, K E B opposite Kurubarapete Shidlagatta Town and taluk and Chickballapur District. The respondent has given non availability certificate in respect of the death of Munishamappa S/o Late Doddo Anneppa. If any persons have any objections regarding the issue of death certificate, they can appear before the Hon'ble Court in person or duly instructed by his advocate on 09.04.2026 at 11 O'clock If they failed to appear, the Hon'ble Court has proceed and decide the matter according to law. Given under my hand and seal of the court, this 9th Day of March 2026

By order of the Court
Sheristhedar, Sr Civil Judge & JMFC Sidlaghatta
Advocate for petitioner : Sri Ananth B.S Advocate, Chickballapur 562101.

---

**IN THE COURT OF THE PRINCIPAL CIVIL JUDGE AND JMFC AT ANEKAL**
**C.Mis. No. 296/2026**

BETWEEN : Smt. Jyothamma, D/o. Late Annappa, Aged about 50 years, R/at: Ramanayakanahalli Village, Sarjapura Hobli, Anekal Taluk, Bangalore. ...PETITIONER

AND : The Tahasildhaar Anekal Taluk, Anekal. ...RESPONDENT

**PAPER PUBLICATION**

WHEREAS, the petitioner filed the above petition for the death certificate of Father of petitioner namely late Sri. Annappa died on 28.01.2016 at his residence at Ramanayakanahalli Village, Sarjapura Hobli, Anekal Taluk, Bangalore District, due to age related ailments. You are hereby inform to appear before this Hon'ble Court in person or any legal heirs are by a pleader duly instructed on 15.04.2026 at 11.00 AM in forenoon to show cause against the claim, Failing which the matter will be heard and determined ex-party.

Given under my hand seal of the court on this 07th day of March 2026.

By Order of the Court, Sheristedar, Civil Judge (Jr.Dv.) and JMFC Court, Anekal
Advocate for Petitioner : S K Nagaraja
No. 4, 1st Floor, Near Court, Anekal Town and Taluk, Bangalore-562106.

---

**IN THE COURT OF THE III ADDL. CIVIL JUDGE & JMFC AT ANEKAL**
**C. MISC. No. 39 OF 2026**

BETWEEN : SUBRAMANI .P S/o. Puttachari @ Junjachari, Aged about 58 years, Residing at # 24, Near Thimmarayaswamy Temple, Chikkanahalli Village, Attibele Hobli, Anekal Taluk, Bangalore Urban District. ...PETITIONER

AND : Tahasildar, Anekal Taluk, Anekal ...RESPONDENT

**PUBLIC NOTICE**

Whereas the Petitioner has filed above petition directing the Respondent to make necessary entry with regarding the death of the father of the Petitioner namely Puttachari @ Junjachari S/o Late Doddas Basavachari who died on 08.06.1968 (Eight Day of June Nineteen Sixty Eight) at #24, Near Thimmarayaswamy Temple, Chikkanahalli Village, Attibele Hobli, Anekal Taluk, Bangalore Urban District, the Petitioner has filed C.Mis No. 39 of 2026 before the Hon'ble III Additional Civil Judge and JMFC at Anekal, any body having any objections they may appear before the Hon'ble court in person or be an Advocate duly instructed on 02.06.2026 at 11:00 AM take a Note that default of appearance on the day above mentioned the matter will be heard and decided in your absence as per law.

Given under my hand and seal of the Court on this date 12.03.2026.

By Order of the Court, Sheristedar, Prl. Civil Judge (Sr. Division) and JMFC Court, Anekal
Advocate for Petitioners :
B.R. Murali Gowda, Advocate
No.1, STB Complex, Opp. Court Complex, Anekal Town, Anekal Taluk, Bengaluru Urban District.

---

**IN THE COURT OF THE VII ADDL. DISTRICT JUDGE AND M.A.C.T. AT TUMKUR**
**M.V.C.No. 1090/2025**

CLAIMANTS: Annapurna.N. and others -V/s-
RESPONDENTS: Pradeep.H.R. and others

**NOTICE TO RESPONDENT NO.2 IN THE ABOVE CASE**

RESPONDENT No.2: Mr. NANDEESHA. G, R/o No. 119, Ullala Main road Billaba, Magadi Main road, Byadarahalli, Bangalore-560 091. (Policy Holder of the vehicle Bajaj Pulsar 220 DTS-i Motorbike bearing Reg. No.KA-02-KX-5258)

WHEREAS, the above Claimant have instituted the above claim petition against the Respondent No.2 and others for compensation due to by death of Nithin.T.L. S/o Lokesh.T.M. in a motor vehicle accident which occurred within the limits of Rural Police Station, Tumkur, involving the Bajaj Pulsar 220 DTS-i: Motor bike bearing Reg. No. KA-02-KX-5258 on 19.04.2025.

Take Notice that you have been made Respondent No.2 in the above claim petition and the same is posted for your appearance on 08/04/2026 at 11.00 AM. before the Hon'ble VII Addl. District Judge and M.A.C.T. at Tumkur, therefore, you are hereby informed to appear on the said date, failing which the case shall be heard and determined in your absence.

Given under my hand and seal of the Court on this 12/03/2026

By order of the Court, Chief Administrative Officer, District & Sessions Court, Tumkuru

Advocate for Claimant:
Sri. C.S. KUMARASWAMY
C.S.K.Arcade, Near Kote Anjaneyaswamy Temple, 1st Cross, Pandarangapura, Tumakuru City.

---

**IN THE COURT OF ADDITIONAL CIVIL JUDGE AND JMFC AT HOSKOTE**
**C.Misc. No. 93/2026**

PETITIONER : 1) Sri Papanna, S/o. Late Munishamappa, aged about 65 years, 2) Sri Muniyappa, S/o. Late Munishamappa, aged about 60 years, 3) Sri Lokesh, S/o. Late Munishamappa, aged about 42 years, 4) Smt. Yellamma, D/o. Late Munishamappa, aged about 50 years, 5) Sri Nagaraju, S/o. Late Munishamappa, aged about 38 years, 6) Sri Ambarish, S/o. Late Munishamappa, aged about 37 years, 7) Sri Manjunatha, S/o. Late Munishamappa, aged about 37 years, All are R/at. Bendahalli Village, Nandagudi Hobli, Hoskote Taluk, Bangalore Rural District.

-V/s- RESPONDENT : The Registrar of Birth and Death, the Tahasildar, Hoskote, Hoskote Taluk, Bangalore Rural District.

**DRAFT PAPER PUBLICATION**

The petitioner is filed this petition for grant of death certificate of one Munishamappa S/o. Late Papanna @ Bengaluru Papanna, was died on 10.08.1980, in the residence of petitioners at Bendahalli Village, Nandagudi Hobli, Hoskote Taluk, Bangalore Rural District.

1. Whom so ever if any person who are related or interest or dispute date of death of Munishamappa S/o. Late Papanna @ Bengaluru Papanna may hereby directed to appear in the above said court in person or through pleader duly instructed and to able to answer of material question relating to the petition on the day of 17.04.2026 at 11 AM in said court.

2. Take notice that in default of your appearance on the date before mentioned in the petition, it will be heard and determine ex-parte.

Given under my hand and seal of the court on this 25.02.2026.

By Order of the Court, Sheristedar, Civil Judge & JMFC, Hoskote
Advocate for Petitioners : Anand Associates, Ananda .M & Ravi .N, Advocates
No. 58/4 Cross, Behind Court, M Road, M V Extension of Hoskote

---

**BEFORE THE DEPUTY COMMISSIONER BENGALURU URBAN SUB DIVISION BENGALURU**
**KSC & ST (Appeal) 46 /2022**

BETWEEN: Venkatamma and others... PETITIONERS
AND: Munivenkataswamy and another... RESPONDENTS

**SUMMONS/NOTICE TO RESPONDENTS**

1) Munivenkataswamy, S/o. Munivenkatappa, R/at Rampura Village, Biddarahalli Hobli, Hoskote Taluk, Presently K.R. Puram Taluk, 2) Krishnappa, S/o. late Munishamappa, aged major, R/at Rampura Village, Biddarahalli Hobli, Hoskote Taluk, Presently K.R. Puram Taluk, Bangalore 560049.

Whereas the above named Petitioners have made a petition to this court U/S 5-A of Karnataka Schedule Caste & Schedule Tribes (Prohibition of Transfer of Certain Lands) Act 1978, challenging the order of Assistant Commissioner, Bengaluru North passed in K.SC & ST (BE) 32/2019, dated 20-06-2022.

Therefore you are hereby directed summoned to appear in this court in person or by pleader on 02-06-2026 at 03:00 PM, to answer the same, Failing which the matter will be heard and determined ex-parte.

Given under my hand and the seal of the Court on this 29-01-2026.

By order of the Court, Deputy Commissioner, Bengaluru Urban Sub Division, Bengaluru.
Advocate for Petitioners: GIRI.K.

---

**PUBLIC NOTICE**

The Public are hereby informed that, my client BANK OF BARODA, Whitefield Main Road Branch, Bangalore, represented by its Senior Manager, has lost the original Sale Deed dated 02.05.2013 bearing Document No:BNG(U)-WFT/461/2013-14 of Book I, registered in the office of the Sub-registrar, Varthur Bangalore, pertaining to the title of one Smt. Mamatha Erava and Sri. Ramana Reddy T., The Bank has lodged a Complaint with the jurisdictional Police Station on 25.02.2026. If anybody found, be sent to my following address.

B. SUBRAYA KHARVI, Advocate,
No. 231, 11th Main, 37th Cross, 4th T Block, Jayanagar, Bangalore.

---

**ಸಾರ್ವಜನಿಕ ಪ್ರಕಟಣೆ**

[illegible]

---

[illegible]

ಸಿ.ಮಿಸ್ ಸಂಖ್ಯೆ : 74/2026

[illegible]

---

**ಸಾರ್ವಜನಿಕ ಪ್ರಕಟಣೆ**

[illegible] 22/08/2003 [illegible]

ದಿನಾಂಕ: 10/03/2026

---

**ಜಾಹೀರಾತಿಗಾಗಿ ಸಂಪರ್ಕಿಸಿ : 9845438807 / 9611755391**

---

**ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ**

"ಅಪೆಕ್ಸ್" ನಂ. 8, [illegible], ಬೆಂಗಳೂರು-560018,
[illegible] ಇ-ಮೇಲ್: recoverycell@karnatakaapex.com

**ಹರಾಜು ಮಾರಾಟದ ಸೂಚನೆ**

**ಸೆಕ್ಯೂರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರ ಪ್ರಕಾರ ಹರಾಜು ಮಾರಾಟ ಪ್ರಕ್ರಿಯೆ**

[illegible]

| ಕ್ರ. ಸಂ. | [illegible] | [illegible] | [illegible] | [illegible] | [illegible] |
|---|---|---|---|---|---|
| 1. | [illegible] | [illegible] | ರೂ. 78,43,08,000/- [illegible] | ರೂ. 77,30,38,530/- [illegible] ದಿನಾಂಕ 12.03.2026 [illegible] | ದಿನಾಂಕ 07.04.2026 ಬೆಳಿಗ್ಗೆ 11.30 ಗಂಟೆಗೆ [illegible] ನಂ.8, "ಅಪೆಕ್ಸ್" [illegible] ಬೆಂಗಳೂರು-560018 |

**Particulars of Individual Villas**

| Sl No. | Villa No. PID No. | Dimension in Sq.Ft Sital Area in Sq Ft | Super Built Up Area | Boundaries(Schedules) E | W | N | S |
|---|---|---|---|---|---|---|---|
| 1. | 1 150200103200900742 | 2000 | 2581 | Road | Villa 16 | Road | Villa 2 |
| 2. | 2 150200103200900743 | 2000 | 2581 | Road | Villa 15 | Villa 01 | Villa 3 |
| 3. | 3 150200103200900745 | 2000 | 2443 | Road | Villa 14 | Villa 2 | Villa 4 |
| 4. | 4 150200103200900747 | 2000 | 2581 | Road | Villa 13 | Villa 3 | Villa 5 |
| 5. | 7 150200103200900750 | 2000 | 2581 | Road | Villa 10 | Villa 6 | Villa 8 |
| 6. | 8 150200103200900751 | 2000 | 2581 | Road | Villa 9 | Villa 7 | Road |
| 7. | 9 150200103200900752 | 1600 | 2258 | Villa 8 | Road | Villa 10 | Road |
| 8. | 10 150200103200900753 | 1600 | 2258 | Villa 7 | Road | Villa 11 | Villa 9 |
| 9. | 11 150200103200900755 | 1600 | 2258 | Villa 6 | Road | Villa 12 | Villa 10 |
| 10. | 12 150200103200900756 | 1600 | 2258 | Villa 5 | Road | Villa 13 | Villa 11 |
| 11. | 13 150200103200900757 | 1600 | 2258 | Villa 4 | Road | Villa 14 | Villa 12 |
| 12. | 14 150200103200900759 | 1600 | 2258 | Villa 3 | Road | Villa 15 | Villa 13 |
| 13. | 15 150200103200900760 | 1600 | 2200 | Villa 2 | Road | Villa 16 | Villa 14 |
| 14. | 16 150200103200900761 | 1600 | 2150 | Villa 01 | Road | Road | Villa 15 |
| 15. | 17 150200103200900762 | 1200 | 1920 | Road | Villa 36 | Road | Villa 18 |
| 16. | 18 150200103200900763 | 1200 | 1920 | Road | Villa 35 | Villa 17 | Villa 19 |
| 17. | 19 150200103200900764 | 1200 | 1920 | Road | Villa 34 | Villa 18 | Villa 20 |
| 18. | 20 150200103200900765 | 1200 | 1920 | Road | Villa 33 | Villa 19 | Villa 21 |
| 19. | 21 150200103200900766 | 1200 | 1920 | Road | Villa 32 | Villa 20 | Villa 22 |
| 20. | 22 150200103200900767 | 1200 | 1920 | Road | Villa 31 | Villa 21 | Villa 23 |
| 21. | 23 150200103200900768 | 1200 | 1920 | Road | Villa 30 | Villa 22 | Villa 24 |
| 22. | 26 150200103200900771 | 1200 | 1920 | Road | Villa 27 | Villa 25 | Road |
| 23. | 27 150200103200900772 | 1200 | 1920 | Villa 26 | Road | Villa 28 | Road |
| 24. | 30 150200103200900776 | 1200 | 1909 | Villa 23 | Road | Villa 31 | Villa 29 |
| 25. | 31 150200103200900778 | 1200 | 1909 | Villa 22 | Road | Villa 32 | Villa 30 |
| 26. | 32 150200103200900779 | 1200 | 1909 | Villa 21 | Road | Villa 33 | Villa 31 |
| 27. | 33 150200103200900780 | 1200 | 1909 | Villa 20 | Road | Villa 34 | Villa 32 |
| 28. | 34 150200103200900781 | 1200 | 1909 | Villa 19 | Road | Villa 35 | Villa 33 |
| 29. | 35 150200103200900782 | 1200 | 1909 | Villa 18 | Road | Villa 36 | Villa 34 |
| 30. | 36 150200103200900783 | 1200 | 1909 | Villa 17 | Road | Road | Villa 35 |
| 31. | 38 150200103200900785 | 1200 | 1920 | Road | Villa 53 | Villa 37 | Villa 39 |
| 32. | 39 150200103200900786 | 1200 | 1920 | Road | Villa 52 | Villa 38 | Villa 40 |
| 33. | 40 150200103200900787 | 1200 | 1920 | Road | Villa 51 | Villa 39 | Villa 41 |
| 34. | 41 150200103200900789 | 1200 | 1920 | Road | Villa 50 | Villa 40 | Villa 42 |
| 35. | 44 150200103200900792 | 1200 | 1920 | Road | Villa 47 | Villa 43 | Villa 45 |
| 36. | 45 150200103200900795 | 1600 | 2497 | Road | Villa 46 | Villa 44 | Road |
| 37. | 46 150200103200900796 | 1600 | 2257 | Villa 45 | Road | Villa 47 | Road |
| 38. | 47 150200103200900797 | 1200 | 1909 | Villa 44 | Road | Villa 48 | Villa 46 |
| 39. | 49 150200103200900799 | 1200 | 1909 | Villa 42 | Road | Villa 50 | Villa 48 |
| 40. | 50 150200103200900800 | 1200 | 1909 | Villa 41 | Road | Villa 51 | Villa 49 |
| 41. | 51 150200103200900801 | 1200 | 1909 | Villa 40 | Road | Villa 52 | Villa 50 |
| 42. | 52 150200103200900802 | 1200 | 1909 | Villa 39 | Road | Villa 53 | Villa 51 |
| 43. | 53 150200103200900803 | 1200 | 1909 | Villa 38 | Road | Villa 37 | Villa 52 |
| 44. | 54 150200103200900804 | 1200 | 1909 | Road | Villa 67 | Road | Villa 55 |
| 45. | 56 150200103200900806 | 1200 | 1950 | Road | Villa 65 | Villa 55 | Villa 57 |
| 46. | 57 150200103200900809 | 1200 | 1950 | Road | Villa 64 | Villa 56 | Villa 58 |
| 47. | 58 150200103200900810 | 1200 | 1950 | Road | Villa 63 | Villa 57 | Villa 59 |
| 48. | 59 150200103200900811 | 1200 | 1950 | Road | Villa 62 | Villa 58 | Villa 60 |
| 49. | 60 150200103200900812 | 1200 | 1950 | Road | Villa 61 | Villa 59 | Road |
| 50. | 61 150200103200900813 | 1200 | 1950 | Villa 60 | Road | Villa 62 | Road |
| 51. | 62 150200103200900814 | 1200 | 1950 | Villa 59 | Road | Villa 63 | Villa 61 |
| 52. | 63 150200103200900815 | 1200 | 1950 | Villa 58 | Road | Villa 64 | Villa 62 |
| 53. | 64 150200103200900816 | 1200 | 1950 | Villa 57 | Road | Villa 65 | Villa 63 |
| 54. | 65 150200103200900817 | 1200 | 1950 | Villa 56 | Road | Villa 66 | Villa 64 |
| 55. | 66 150200103200900819 | 1200 | 1950 | Villa 55 | Road | Villa 67 | Villa 65 |
| 56. | 67 150200103200900820 | 1200 | 1950 | Villa 54 | Road | Road | Villa 66 |
| 57. | 70 150200103200900823 | 1200 | 1950 | Road | Villa 81 | Villa 69 | Villa 71 |
| 58. | 71 150200103200900825 | 1200 | 1950 | Road | Villa 80 | Villa 70 | Villa 72 |
| 59. | 72 150200103200900826 | 1200 | 1950 | Road | Villa 79 | Villa 71 | Villa 73 |
| 60. | 73 150200103200900827 | 1200 | 1950 | Road | Villa 78 | Villa 72 | Villa 74 |
| 61. | 74 150200103200900828 | 1200 | 1950 | Road | Villa 77 | Villa 73 | Villa 75 |
| 62. | 75 150200103200900829 | 1200 | 1950 | Road | Villa 76 | Villa 74 | Road |
| 63. | 76 150200103200900830 | 1200 | 1950 | Villa 75 | Road | Villa 77 | Road |
| 64. | 77 150200103200900831 | 1200 | 1950 | Villa 74 | Road | Villa 78 | Villa 76 |
| 65. | 78 150200103200900832 | 1200 | 1950 | Villa 73 | Road | Villa 79 | Villa 77 |
| 66. | 79 150200103200900833 | 1200 | 1909 | Villa 72 | Road | Villa 80 | Villa 78 |
| 67. | 80 150200103200900834 | 1200 | 1909 | Villa 71 | Road | Villa 81 | Villa 79 |
| 68. | 85 150200103200900839 | 1200 | 1909 | Road | Villa 100 | Road | Villa 86 |
| 69. | 86 150200103200900840 | 1200 | 1909 | Road | Villa 99 | Villa 85 | Villa 87 |
| 70. | 87 150200103200900841 | 1200 | 1909 | Road | Villa 98 | Villa 86 | Villa 88 |
| 71. | 88 150200103200900842 | 1200 | 1909 | Road | Villa 97 | Villa 87 | Villa 89 |
| 72. | 89 150200103200900843 | 1200 | 1909 | Road | Villa 96 | Villa 88 | Villa 90 |
| 73. | 90 150200103200900844 | 1200 | 1909 | Road | Villa 95 | Villa 89 | Villa 91 |
| 74. | 91 150200103200900845 | 1200 | 1909 | Road | Villa 94 | Villa 90 | Villa 92 |
| 75. | 92 150200103200900846 | 1996 | 2806 | Road | Villa 93 | Villa 91 | Road |
| 76. | 93 150200103200900847 | 1996 | 2806 | Villa 92 | Road | Villa 94 | Road |
| 77. | 94 150200103200900848 | 1200 | 1909 | Villa 91 | Road | Villa 95 | Villa 93 |
| 78. | 95 150200103200900849 | 1200 | 1909 | Villa 90 | Road | Villa 96 | Villa 94 |
| 79. | 96 150200103200900850 | 1200 | 1909 | Villa 89 | Road | Villa 97 | Villa 95 |
| 80. | 97 150200103200900851 | 1084 | 1755 | Villa 88 | Road | Villa 98 | Villa 96 |
| 81. | 98 150200103200900852 | 981 | 1601 | Villa 87 | Road | Villa 99 | Villa 97 |
| 82. | 99 150200103200900853 | 931 | 1552 | Villa 86 | Road | Villa 100 | Villa 98 |
| 83. | 100 150200103200900854 | 1136 | 1841 | Villa 85 | Road | Road | Villa 99 |
| 84. | 101 150200103200900855 | 909 | 1514 | Road | Villa 104 | Road | Villa 102 |
| 85. | 102 150200103200900856 | 913 | 1600 | Road | Villa 103 | Villa 101 | Road |
| 86. | 103 150200103200900857 | 912 | 1580 | Villa 102 | Road | Villa 104 | Road |
| 87. | 104 150200103200900858 | 905 | 1616 | Villa 101 | Road | Road | Villa 103 |

[illegible] ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ನಂ.8, "ಅಪೆಕ್ಸ್", [illegible], ಬೆಂಗಳೂರು-560018, (ದೂ: 080-26983700, 26983723, 22976600) [illegible] 06.04.2026 [illegible] 5.00 ಗಂಟೆ [illegible] recoverycell@karnatakaapex.com [illegible]

ಸ್ಥಳ : ಬೆಂಗಳೂರು
ದಿನಾಂಕ : 12.03.2026

ಸಹಿ/- ಅಧಿಕೃತ ಅಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ

---

**PUBLIC NOTICE**

Notice is hereby given to the General Public that: My client Mr. Mohamed Arifulla Khan, aged about 74 years, S/o Late Abdul Hakeem Khan, R/o colony, Tumakuru-572101 and [illegible] collectively referred to as the "Purchaser"), G.R. Ravi S/o Rudraiah, aged about 42 years, R/at Near Ranganathaswamy temple, Gulurve Village, K.Polsandra Post, Guluru Hobli, Tumakuru Taluk-572118 is the absolute owner in lawful possession and enjoyment of the immovable properties more fully described in the Schedule hereunder. The Owner G.R. Ravi have acquired the Schedule Properties item No. 1 and 2 under a registered Sale Deed dated 07-06-2023, registered as Document No. TMK-1-03751-2023-24, Book No. I, in the office of the Sub Registrar at Tumakuru, and another Schedule Property under a registered Sale Deed dated 22-03-2023, registered as Document No. TMK-1-08767-2023-24, Book No. I, in the office of the Sub-Registrar at Tumakuru.

[illegible]

**SCHEDULE PROPERTY**

[illegible]

**PROPERTIES BELONG TO SAID KUMARA**

1. All that piece and parcel of the agricultural land bearing Survey No. 24/2, measuring to an extent of 10 Guntas, situated at [illegible] Village, Hobli [illegible] Hobli, Tumakuru Taluk, and bounded on: East by: Property of Inayath Ulla Khan, West by: Property of Hidayath Ulla Khan, North by: Rayagalova, South by: Property of Rudregowda

2. All that piece and parcel of the agricultural land bearing Survey No. 24/3, measuring to an extent of 11 Guntas, situated at [illegible] Village, Hobli [illegible] Hobli, Tumakuru Taluk, and bounded on: East by: Property of Hidayath Ulla Khan, West by: Sy.No.23, North by: Rayagalova, South by: Property of Rudregowda

K.V. SRINIVASA NAIDU, Advocate
Mob: 9448450046/8310069933, Date: 12-03-2026

---

**ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ**
**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**
ಜಿಲ್ಲಾ ಅಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ,ಎಸ್.ಬಿ.4, 2ನೇ ಮಹಡಿ,
ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
ದೂರವಾಣಿ ಸಂಖ್ಯೆ 08156-277053
Email:dobcmchikkaballapura.gmail.com

ಸಂಖ್ಯೆ:ಹಿಂವಕಇ/ಚಿಕ್ಕ/ಟೆಂಡರ್-53/2025-26
ದಿನಾಂಕ: 11.03.2026

**: :ಟೆಂಡರ್ ಪ್ರಕಟಣೆ: :**

2026-27ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ, ತಾಲ್ಲೂಕು ಕಛೇರಿ, ವಿದ್ಯಾರ್ಥಿನಿಲಯಗಳಲ್ಲಿ ಮತ್ತು ವಸತಿ ಶಾಲೆ/ಕಾಲೇಜುಗಳಲ್ಲಿ ಖಾಲಿ ಇರುವ ಗ್ರೂಪ್ "ಸಿ" ಮತ್ತು "ಡಿ" ಹುದ್ದೆಗಳನ್ನು ತಾತ್ಕಾಲಿಕವಾಗಿ ಹೊರಸಂಪನ್ಮೂಲದಿಂದ ಪಡೆಯಲು ನೋಂದಾಯಿತ ಅರ್ಹ ಏಜೆನ್ಸಿಗಳ ಮುಖಾಂತರ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ (E-Procurement) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

(1) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 13.04.2026 ಸಂಜೆ 5:00 ಗಂಟೆಗೆ. (2) ಪೂರ್ವಭಾವಿ ಸಭೆ (Pre Bid) ದಿನಾಂಕ: 23.03.2026 ಬೆಳಗ್ಗೆ 11:00 ಗಂಟೆಗೆ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ಜಿಲ್ಲೆ. (3) ತಾಂತ್ರಿಕ ಟೆಂಡರ್‌ನ್ನು ತೆರೆಯುವ ದಿನಾಂಕ: 15.04.2026 ಸಂಜೆ 5:30 ಗಂಟೆಗೆ. (4) ಆರ್ಥಿಕ ಟೆಂಡರ್‌ನ್ನು ತೆರೆಯುವ ದಿನಾಂಕ: 18.04.2026 ರಂದು ಬೆಳಗ್ಗೆ 10:30 ಗಂಟೆಗೆ. ಅರ್ಹ ಟೆಂಡರ್‌ದಾರರು ಟೆಂಡರ್‌ನ್ನು kpp Protal ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://kppp.karnataka.gov.in/ ನಲ್ಲಿ ನೋಡುವುದು (ದೂ.ಸಂ: +91-8046010000, +91-8068948777) ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾಡಳಿತ ಭವನ, ಎಸ್‌ಬಿ-4, 2ನೇ ಮಹಡಿ, ಶಿಡ್ಲಘಟ್ಟ ರಸ್ತೆ ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಪಡೆಯಬಹುದಾಗಿದೆ. (ಕಛೇರಿ ದೂ.ಸಂ: 08156-277053).

ಸಹಿ/-
ಜಿಲ್ಲಾ ಅಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ವಾಪ್ರಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:485/ಸಿಎಸ್‌ಎಂಸಿಎ/2025-26

---

ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,**
**ಲೋ.ಇ ವಿಭಾಗ, ಶಿವಮೊಗ್ಗ**

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಇ/ಶಿವಿಶಿ/ಎಇ-2/ಟೆಂಡರ್-61/2025-26
ದಿನಾಂಕ: 11-03-2026

**ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)**

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ 3 ಮತ್ತು 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:13-03-2026 ರಿಂದ 23-03-2026

ಪರಿಶಿಷ್ಟ ಜಾತಿ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿ

5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ರಾ.ಹೆ) 1. ಹೊಸನಗರ ತಾಲ್ಲೂಕು 1 ಕಾಮಗಾರಿ (ಇಂಡೆಂಟ್ ಸಂ:32523)5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಜಿ.ಮು.ರ) 2. ಹೊಸನಗರ ತಾಲ್ಲೂಕು 2 ಕಾಮಗಾರಿ (ಇಂಡೆಂಟ್ ಸಂ:32522, 32321)

ಪ್ರವರ್ಗ-2 ಎ

5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಜಿ.ಮು.ರ) 3. ಹೊಸನಗರ ತಾಲ್ಲೂಕು 1 ಕಾಮಗಾರಿ (ಇ.ಸಂ:34456)

ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು

5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ರಾ.ಹೆ) 4. ಹೊಸನಗರ ತಾಲ್ಲೂಕು 2 ಕಾಮಗಾರಿ (ಇಂಡೆಂಟ್ ಸಂ:28305, 34461) 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಜಿ.ಮು.ರ) 5. ಹೊಸನಗರ ತಾಲ್ಲೂಕು 4 ಕಾಮಗಾರಿ (ಇಂಡೆಂಟ್ ಸಂ: 32504, 34457, 32596, 32511) ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ) : 06 ತಿಂಗಳುಗಳು

ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-25501216/ 080-25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

[illegible]




### ರಷ್ಯಾ, ನಾರ್ವೆ, ಸೇರಿ ಇತರ ದೇಶಗಳಿಂದ ಎಲ್‌ಪಿಜಿ ಆಮದು

# ಹಾರ್ಮುಜ್ ಬದಲು ಪರ್ಯಾಯ ವ್ಯವಸ್ಥೆ

• **ಹೊಸದಿಲ್ಲಿ:** ಭಾರತದ ಕಚ್ಚಾತೈಲ ಪೂರೈಕೆ ಸ್ಥಿತಿ ಸುರಕ್ಷಿತವಾಗಿದೆ. ದೇಶಕ್ಕೆ ಅಗತ್ಯ ಶೇ.70 ಕಚ್ಚಾತೈಲ ಸಹಿತ ಆಮದುಗಳನ್ನು ಹಾರ್ಮುಜ್ ಜಲಸಂಧಿ ಬಿಟ್ಟು ಬೇರೆ ದಾರಿಯಿಂದ ತರಿಸಿಕೊಳ್ಳಲು ಭಾರತ ಸೂಕ್ತ ವ್ಯವಸ್ಥೆ ಮಾಡಿದೆ. ಎಲ್ಲಾ ಇಂಧನ ಪೂರೈಕೆ ವ್ಯವಸ್ಥೆಗಳು ಸುರಕ್ಷಿತವಾಗಿವೆ. ಹಾರ್ಮುಜ್ ಜಲಸಂಧಿ ಮೂಲಕ ಸರಬರಾಜಾಗಲಿದ್ದ ಪ್ರಮಾಣವನ್ನು ಮೀರಿದ ಪ್ರಮಾಣದ ಕಚ್ಚಾತೈಲವನ್ನು ಸರಕಾರ ಈಗಾಗಲೆ ತರಿಸಿಕೊಂಡಿದೆ ಎಂದು ತೈಲ ಸಚಿವ ಹರ್ದೀಪ್ ಪುರಿ ಲೋಕಸಭೆಗೆ ಮಾಹಿತಿ ನೀಡಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷದಿಂದ ಜಾಗತಿಕ ಇಂಧನ ಸರಬರಾಜು ವ್ಯವಸ್ಥೆ ಅಸ್ತವ್ಯಸ್ತಗೊಂಡು ಇಂದಿಗೆ 13 ದಿನಗಳಾಗುತ್ತಿರುವಂತೆ, ಸಚಿವರು ದೇಶದ ಕಚ್ಚಾತೈಲ ಪೂರೈಕೆ ವ್ಯವಸ್ಥೆ ಸುರಕ್ಷಿತವಾಗಿರುವುದನ್ನು ಸದನದಲ್ಲಿ ದೃಢೀಕರಿಸಿದ್ದಾರೆ.

**ಪೆಟ್ರೋಲ್, ಡೀಸೆಲ್ ಲಭ್ಯತೆಯೂ ಸುರಕ್ಷಿತ:** ಹಾರ್ಮುಜ್ ತಪ್ಪಿಸಿ ಅನ್ಯ ದಾರಿಯಿಂದ ಸರಬರಾಜಾಗಿರುವ ಒಟ್ಟು ಸರಕುಗಳ ಪ್ರಮಾಣ ಶೇ.70ನ್ನು ಮೀರಿದೆ. ದೇಶದ ರಿಫೈನರಿಗಳು ಅತ್ಯಧಿಕ ಸಾಮರ್ಥ್ಯ ಬಳಕೆ ನೆಲೆಯಲ್ಲಿ ಕಾರ್ಯತತ್ಪರವಾಗಿವೆ ಮತ್ತು ಪೆಟ್ರೋಲ್, ಡೀಸೆಲ್‌ಗಳ ಲಭ್ಯತೆ ಕೂಡ ತುಂಬು ಸುರಕ್ಷಿತವಾಗಿದೆ ಎಂದು ಹೇಳಿದ್ದಾರೆ.

**ರಷ್ಯಾ, ನಾರ್ವೆ, ಅಮೆರಿಕಗಳಿಂದ ಎಲ್‌ಪಿಜಿ ಆಮದು:** ಭಾರತವೀಗ ಅಮೆರಿಕ, ರಷ್ಯಾ, ನಾರ್ವೆ, ಕೆನಡಾ, ಅಲ್ಜೀರಿಯಾಗಳಿಂದ ಎಲ್‌ಪಿಜಿ ಆಮದು ಮಾಡಿಕೊಳ್ಳತೊಡಗಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.



## ಪಿಎಂ ನರೇಂದ್ರ ಮೋದಿ ರಾಜತಾಂತ್ರಿಕ ದೂರದರ್ಶಿತ್ವ

ಸಂಘರ್ಷಕ್ಕೆ ಮುನ್ನ ಭಾರತದ ಶೇ.25ರಷ್ಟು ಕಚ್ಚಾತೈಲ ಸರಕು ದೇಶಕ್ಕೆ ಸರಬರಾಜಾಗುತ್ತಿದ್ದುದು ಹಾರ್ಮುಜ್ ಜಲಸಂಧಿ ಮೂಲಕವಾಗಿದೆ. ಈ ಜಲಸಂಧಿ ಮುಚ್ಚಿದ ನೆಲೆಯಲ್ಲಿ, ಕೇಂದ್ರ ಸರಕಾರ ಪೂರೈಕೆ ಹಾದಿಯನ್ನೇ ಬದಲಿಸುವ ಕ್ರಾಂತಿಕಾರಿ ನಿಲುವು ತಳೆದಿದೆ ಮತ್ತು ಹೋರ್ಮುಜ್ ಯೇತರ ಪರ್ಯಾಯ ಮಾರ್ಗಗಳಿಂದ ಇದುವರೆಗೆ ಶೇ.70 ಆಮದುಗಳನ್ನು ನಿರ್ವಹಿಸಲಾಗಿದೆ. ಭಾರತವು ಮಿಂಚಿನ ಗತಿಯಲ್ಲಿ ಕಚ್ಚಾತೈಲ ಖರೀದಿ-ಪೂರೈಕೆ ಹಾದಿ ಬದಲಿಸಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರ ಅಸಾಧಾರಣ ರಾಜತಾಂತ್ರಿಕ ದೂರದರ್ಶಿತ್ವ ಪ್ರಧಾನ ಕಾರಣವೆಂದು ಸಚಿವ ಪುರಿ ಪ್ರಶಂಸಿಸಿದ್ದಾರೆ.

ಅಸಾಧಾರಣ ರಾಜತಾಂತ್ರಿಕ ದೂರದರ್ಶಿತ್ವ ಮೆರೆದ ಪ್ರಧಾನಿ ಮೋದಿ ಅವರಿಗೆ ಕೃತಜ್ಞತೆಗಳು. ಪ್ರಧಾನಿ ಮೋದಿ ಅವರ ದೂರದರ್ಶಿತ್ವದಿಂದಾಗಿ, ಹೋರ್ಮುಜ್ ಜಲಸಂಧಿ ಮುಖೇನ ತರಿಸಬಹುದಿದ್ದ ಪ್ರಮಾಣವನ್ನು ಬಹುಪಟ್ಟು ಮೀರಿದ ಪ್ರಮಾಣದಲ್ಲಿ ಕಚ್ಚಾತೈಲವನ್ನು ಭಾರತ ಅನ್ಯ ಮಾರ್ಗಗಳಿಂದ ತರಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಸಚಿವ ಪುರಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜಗತ್ತಿನ ಅಂದಾಜು ಶೇ.20ರಷ್ಟು ತೈಲ ಮತ್ತು ಶೇ.20ರಷ್ಟು ನೈಸರ್ಗಿಕ ಅನಿಲ ನಿತ್ಯ ಸರಬರಾಜಾಗುತ್ತಿದ್ದುದು ಇರಾನ್, ಅರೇಬಿಯನ್ ದ್ವೀಪ ನಡುವಣ ಇಕ್ಕಟ್ಟಾದ ಜಲಮಾರ್ಗ ಹಾರ್ಮುಜ್ ಜಲಸಂಧಿ ಮುಖೇನವಾಗಿ. ಇರಾನ್, ಇಸ್ರೇಲ್, ಅಮೆರಿಕಗಳ ಸಂಘರ್ಷದಿಂದಾಗಿ ಈ ಜಲಸಂಧಿಯೀಗ ವಾಣಿಜ್ಯಿಕ ನೌಕಾಯಾನಕ್ಕೆ ಮುಚ್ಚುಗಡೆಯಾಗಿ ಬರೋಬ್ಬರಿ 13 ದಿನಗಳಾದುವು. ಜಾಗತಿಕವಾಗಿ ಕಚ್ಚಾತೈಲ ಉತ್ಪಾದನೆಯಲ್ಲಿ ಮಹತ್ವದ ಪಾಲು ಹೊಂದಿರುವ ಸೌದಿ ಅರೇಬಿಯಾ, ಇರಾಕ್, ಯುಎಇ, ಕುವೈತ್ ಹಾಗೂ ಸ್ವತಃ ಇರಾನ್‌ಗೂ ಹಾರ್ಮುಜ್ ಜಲಸಂಧಿ ಪ್ರಮುಖ ರಫ್ತು ಮಾರ್ಗವಾಗಿದೆ. ಹಾರ್ಮುಜ್ ಮುಚ್ಚುಗಡೆಯಿಂದಾಗಿ ಏಷ್ಯಾದ್ಯಂತ ತೈಲ ಆಮದನ್ನು ನೆಚ್ಚಿಕೊಂಡಿರುವ ರಾಷ್ಟ್ರಗಳು ತುಂಬು ಸಂಕಷ್ಟಕ್ಕೆ ಸಿಲುಕಿವೆ.

## ಇಬ್ಬರು ಭಾರತೀಯರ ಸಾವು ಓರ್ವ ನಾಪತ್ತೆ

ಯುಎಇಯಿಂದ ಭಾರತಕ್ಕೆ ಆಗಮಿಸುತ್ತಿದ್ದ ಥಾಯ್-ಧ್ವಜದ ಕಾರ್ಗೋ ಹಡಗಿನ ಮೇಲೆ ಹಾರ್ಮುಜ್ ಜಲಸಂಧಿ ಬಳಿ ಇರಾನ್‌ನ ದಾಳಿಯಲ್ಲಿ ಇಬ್ಬರು ಭಾರತೀಯರು ಮೃತಪಟ್ಟಿದ್ದು, ಮತ್ತೋರ್ವ ಕಾಣೆಯಾಗಿದ್ದಾರೆ. ಅದೇರೀತಿ ಹಡಗಿನಲ್ಲಿದ್ದ ಇಪ್ಪತ್ತು ನಾವಿಕರನ್ನು ರಕ್ಷಿಸಲಾಗಿದೆ. ಇರಾನ್ ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

## ಅಡುಗೆ ಅನಿಲ: ಕಾಳಸಂತೆ ವಿರುದ್ಧ ಕಠಿಣ ಕ್ರಮಕ್ಕೆ ಸೂಚನೆ

ಅನಿಲ ಸಿಲಿಂಡರ್ ಕೊರತೆಯ ಆತಂಕದ ಮಧ್ಯೆ, ಅಡುಗೆ ಅನಿಲ ಸಿಲಿಂಡರ್‌ಗಳ ಸಂಗ್ರಹಣೆ ಅಥವಾ ಕಾಳಸಂತೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಾಗ ಎಲ್‌ಪಿಜಿ ಸ್ಥಾವರಗಳು, ವಿತರಣಾ ಜಾಲಗಳು ಮತ್ತು ಸಾರಿಗೆ ವ್ಯವಸ್ಥೆಗಳಲ್ಲಿ ಭದ್ರತೆ ಬಿಗಿಗೊಳಿಸುವಂತೆ ಕೇಂದ್ರ ಗೃಹ ಸಚಿವಾಲಯವು (ಎಂಎಚ್‌ಎ) ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ. ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಅವರು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಡಿಜಿಪಿಗಳೊಂದಿಗೆ ಎರಡು ಗಂಟೆಗಳ ಕಾಲ ಸಭೆ ನಡೆಸಿ ಸನ್ನದ್ಧತೆಯನ್ನು ಪರಿಶೀಲಿಸಿದರು. ನಿರಂತರ ದೇಶೀಯ ಎಲ್‌ಪಿಜಿ ಪೂರೈಕೆಯನ್ನು ಖಚಿತಪಡಿಸಿಕೊಂಡರು. ಸಭೆಯಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಮಾಹಿತಿ ಮತ್ತು ಪ್ರಸಾರ ಮತ್ತು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿಗಳು ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

## ಓಮಾನ್‌ನಿಂದ ಅನಿಲ ಖರೀದಿಸಿದ ಗೈಲ್

ದೇಶದಲ್ಲಿ ಹೆಚ್ಚುತ್ತಿರುವ ನೈಸರ್ಗಿಕ ಅನಿಲದ ಬೇಡಿಕೆಯನ್ನು ತಲುಪಲು ಮತ್ತು ಪೂರೈಕೆಯನ್ನು ಸುಸ್ಥಿತಿಯಲ್ಲಿಡಲು ಸರ್ಕಾರಿ ಸ್ವಾಮ್ಯದ ಗೈಲ್ (ಜಿಎಐಎಲ್) ಸಂಸ್ಥೆ, ಓಮಾನ್‌ನಿಂದ ಲಿಕ್ವಿಫೈಡ್ ನ್ಯಾಚುರಲ್ ಗ್ಯಾಸ್ (ಎಲ್‌ಎನ್‌ಜಿ) ಖರೀದಿಸಿದೆ. ಹಾರ್ಮುಜ್ ಜಲಸಂಧಿಯಲ್ಲಿನ ಸಂಘರ್ಷ ಮತ್ತು ಕತಾರ್‌ನಿಂದ



ಪೂರೈಕೆಯಲ್ಲಿ ಆಗಿರುವ ಅಡೆತಡೆಗಳಿಂದಾಗಿ ಸೃಷ್ಟಿಯಾಗಿರುವ ಕೊರತೆ ನೀಗಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಯುರೋಪಿಯನ್ ವ್ಯಾಪಾರಿಯೊಬ್ಬರ ಮೂಲಕ ಪ್ರತಿ ಮಿಲಿಯನ್ ಬ್ರಿಟಿಷ್ ಥರ್ಮಲ್ ಯೂನಿಟ್‌ಗೆ (ಎಂಎಂಬಿಟಿಯು) ಸುಮಾರು 17-20 ರಷ್ಟು ಸ್ಥಿರ ಬೆಲೆಯಲ್ಲಿ ಈ ಅನಿಲವನ್ನು ಖರೀದಿಸಲಾಗಿದೆ. ಓರಿಯನ್ ಪ್ರೋಗ್ರೆಸ್ ಎಂಬ ಹಡಗಿನ ಮೂಲಕ ಸಾಗಿಸಲಾಗುತ್ತಿರುವ ಈ ಸರಕು ಮಾರ್ಚ್ 15 ರ ಸುಮಾರಿಗೆ ಭಾರತ ತಲುಪುವ ನಿರೀಕ್ಷೆಯಿದೆ. ಕೊರತೆಯನ್ನು ಸರಿದೂಗಿಸಲು ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಕಾಯ್ದೆಯಡಿ ತುರ್ತು ಅಧಿಕಾರ ಬಳಸಿಕೊಂಡಿದೆ. ಆದ್ಯತೆಯಿಲ್ಲದ ಕೈಗಾರಿಕೆಗಳಿಗೆ ನೀಡಲಾಗುತ್ತಿದ್ದ ಅನಿಲವನ್ನು ಈಗ ಅಗತ್ಯ ಸೇವೆಗಳಿಗೆ ವರ್ಗಾಯಿಸಲಾಗುತ್ತಿದೆ. ಮನೆಬಳಕೆಯ ಅಡುಗೆ ಅನಿಲ (ಎಲ್‌ಪಿಜಿ), ಸಾರಿಗೆ ಇಂಧನ (ಸಿಎನ್‌ಜಿ) ಮತ್ತು ಆಸ್ಪತ್ರೆಗಳಂತಹ ತುರ್ತು ಸೇವೆಗಳಿಗೆ ಶೇ. 100ರಷ್ಟು ಅನಿಲ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಮುಂದಾಗಿದೆ.

## ಯುದ್ಧ ನಿಲ್ಲಿಸಲು ಷರತ್ತು ವಿಧಿಸಿದ ಇರಾನ್

ಅಮೆರಿಕ ಮತ್ತು ಇಸ್ರೇಲ್ ಜತೆಗಿನ ಪ್ರಸ್ತುತ ಯುದ್ಧವನ್ನು ಕೊನೆಗೊಳಿಸಲು ಇರಾನ್ ನಾಲ್ಕು ಪ್ರಮುಖ ಷರತ್ತುಗಳನ್ನು ವಿಧಿಸಿದೆ. ತನ್ನ ಹಕ್ಕುಗಳ ಮಾನ್ಯತೆ, ಯುದ್ಧದ ನಷ್ಟ ಪರಿಹಾರ ಪಾವತಿ ಮತ್ತು ಭವಿಷ್ಯದಲ್ಲಿ ದಾಳಿ ನಡೆಯದಂತೆ ಖಾತರಿ ನೀಡಬೇಕೆಂದು ಇರಾನ್ ಷರತ್ತು ವಿಧಿಸಿದೆ.

**ಕದನ ವಿರಾಮದ ಷರತ್ತುಗಳು :** ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಪೋಸ್ಟ್‌ನಲ್ಲಿ, ಎಕ್ಸ್ ನಲ್ಲಿ ಈ ಷರತ್ತುಗಳನ್ನು ಹಂಚಿಕೊಂಡಿದ್ದಾರೆ. ಯಾವುದೇ ಶಾಂತಿ ಒಪ್ಪಂದ ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ಅಂಗೀಕರಿಸಬೇಕು, ಯುದ್ಧದಿಂದ ಉಂಟಾದ ಹಾನಿಗೆ ಪರಿಹಾರ ನೀಡಬೇಕು ಮತ್ತು ಭವಿಷ್ಯದಲ್ಲಿ ಮತ್ತೆ ಆಕ್ರಮಣ ನಡೆಯದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಲವಾದ ಖಾತರಿ ನೀಡಬೇಕು ಎಂದು ಅವರು ತಿಳಿಸಿದ್ದಾರೆ. ಪ್ರಾದೇಶಿಕ ಶಾಂತಿಗೆ ಇರಾನ್ ಬದ್ಧವಾಗಿದೆ ಎಂದು ಪುನರುಚ್ಚರಿಸಲಾಗಿದೆ.



## ತೈಲ ಟ್ಯಾಂಕರ್‌ಗೆ ದಾಳಿ ಭಾರತೀಯ ಸಿಬ್ಬಂದಿ ಸಾವು

• **ಹೊಸದಿಲ್ಲಿ:** ಇರಾಕ್‌ನ ಬಸ್ರಾ ಬಳಿ ಅಮೆರಿಕ ಒಡೆತನ ಹಡಗಿನ ಮೇಲೆ ಇರಾನ್ ನೀರೊಳಗಿನ ಡ್ರೋನ್ ದಾಳಿಯಲ್ಲಿ ಭಾರತೀಯ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ. ಇರಾಕ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಈ ಸಾವನ್ನು ದೃಢಪಡಿಸಿದ್ದು, ಹಡಗಿನಲ್ಲಿದ್ದ ಇತರ 15 ಭಾರತೀಯ ಸಿಬ್ಬಂದಿಯನ್ನು ಸ್ಥಳಾಂತರಿಸಲಾಗಿದೆ ಎಂದು ಹೇಳಿದೆ. ಪರ್ಷಿಯನ್ ಕೊಲ್ಲಿಯಲ್ಲಿನ ವಾಣಿಜ್ಯ ಹಡಗುಗಳನ್ನು ಕಳೆದ ಕೆಲವು ದಿನಗಳಿಂದ ಇರಾನಿನ ಸೇನೆಯು ಗುರಿಯಾಗಿಸಿಕೊಂಡಿದೆ. ಇರಾಕ್‌ನ ಪ್ರಾದೇಶಿಕ ಜಲಪ್ರದೇಶದಲ್ಲಿ ದಾಳಿಗೆ ಒಳಗಾದ ನಂತರ ಪರ್ಷಿಯನ್ ಕೊಲ್ಲಿಯಲ್ಲಿ ಮತ್ತೊಂದು ತೈಲ ಟ್ಯಾಂಕರ್‌ಗೆ ಬೆಂಕಿ ಹೊತ್ತಿಕೊಂಡಿದೆ. ಇರಾನ್ ದಾಳಿ ಹೊಣೆ ಹೊತ್ತುಕೊಂಡಿದ್ದು, ನೀರೊಳಗಿನ ಡ್ರೋನ್ ದಾಳಿಯು ಪರ್ಷಿಯನ್ ಕೊಲ್ಲಿಯಲ್ಲಿ ಎರಡು ತೈಲ ಟ್ಯಾಂಕರ್‌ಗಳನ್ನು ಸ್ಫೋಟಿಸಿದೆ ಎಂದು ಇರಾನಿನ ರಾಜ್ಯ ಪ್ರಸಾರಕ ಐಆರ್‌ಐಬಿ ತಿಳಿಸಿದೆ. ನೀರೊಳಗಿನ ಡ್ರೋನ್ ದಾಳಿಗಳು ಮಾನವರಹಿತ ಅಂಡರ್‌ವಾಟರ್ ವಾಹನಗಳ (ಯುಯುವಿಗಳು) ಬಳಕೆ ಒಳಗೊಂಡಿರುತ್ತವೆ. ಈ ಡ್ರೋನ್‌ಗಳು ಮಾನವ ನಿರ್ವಾಹಕರಿಲ್ಲದೆ ಕಾರ್ಯನಿರ್ವಹಿಸುತ್ತವೆ.

## 500ಕ್ಕೂ ಹೆಚ್ಚು ಭಾರತೀಯರ ಸ್ಥಳಾಂತರ

ಕತಾರ್‌ನಲ್ಲಿ ಸಿಲುಕಿರುವ 500ಕ್ಕಿಂತ ಹೆಚ್ಚು ಭಾರತೀಯರನ್ನು ದಿಲ್ಲಿ ಮತ್ತು ಇತರ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಭಾರತೀಯ ನಿಯೋಗ ಮಾಹಿತಿ ನೀಡಿದೆ. ತಮ್ಮ ಸಮಸ್ಯೆ ಗೊಂದಲಗಳ ಬಗ್ಗೆ ಪ್ರಶ್ನಿಸಲು, ಭಾರತೀಯ ಸಮುದಾಯಕ್ಕೆ ಸಹಾಯವಾಣಿಗಳು ಲಭ್ಯವಿರಲಿವೆ ಎಂದು ಆಯೋಗ ಹೇಳಿದೆ. ಭಾರತೀಯ ಪ್ರಜೆಗಳಿಗೆ ಪಾಸ್‌ಪೋರ್ಟ್ ತ್ವರಿತ ವಿತರಣೆಗೆ ವಿಶೇಷ ಗಮನ ನೀಡುತ್ತಿದೆ ಎಂದು ಹೇಳಿದೆ. ಪ್ರಸ್ತುತ ಪರಿಸ್ಥಿತಿಯಿಂದಾಗಿ, ನಾವು ವಾರದ ಎಲ್ಲಾ ದಿನಗಳಲ್ಲೂ ಪಾಸ್‌ಪೋರ್ಟ್ ಅರ್ಜಿಗಳನ್ನು ತೆಗೆದುಕೊಳ್ಳಲು ಮುಕ್ತರಾಗಿದ್ದೇವೆ. 1-2 ದಿನಗಳಲ್ಲಿ ತತ್ಕಾಲ್ ಪಾಸ್‌ಪೋರ್ಟ್ ವಿತರಿಸಲಾಗುತ್ತಿದೆ ಎಂದು ಹೇಳಿದೆ.

## ಸರ್ವೋಚ್ಚ ನಾಯಕನ ಮೊದಲ ಸಂದೇಶ

ಇರಾನ್‌ನ ಸರ್ವೋಚ್ಚ ನಾಯಕನಾಗಿ ಅಧಿಕಾರ ವಹಿಸಿಕೊಂಡ ನಂತರ ತನ್ನ ಮೊದಲ ಸಾರ್ವಜನಿಕ ಸಂದೇಶದಲ್ಲಿ, ಮೊಜ್ತಾಬಾ ಖಮೇನಿ ಸರಣಿ ದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇತ್ತೀಚಿನ ದಾಳಿಗಳಲ್ಲಿ ಮೃತಪಟ್ಟ ಇರಾನಿಯನ್ನರ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳಲಾಗುತ್ತದೆ. ಇರಾನ್ ತನ್ನ ಮೃತರ ರಕ್ತದ ಸೇಡು ತೀರಿಸಿಕೊಳ್ಳುವುದರಿಂದ ಹಿಂದೆ ಸರಿಯುವುದಿಲ್ಲ, ಇದು ದೇಶಕ್ಕೆ ಪ್ರಮುಖ ಆದ್ಯತೆಯಾಗಿ ಉಳಿದಿದೆ ಎಂದು ಖಮೇನಿ ಹೇಳಿದ್ದಾರೆ. ಖಮೇನಿ ತಮ್ಮ ಹೇಳಿಕೆಯಲ್ಲಿ, ಹಾರ್ಮುಜ್ ಜಲಸಂಧಿಯನ್ನು ಮುಚ್ಚುವ ಒತ್ತಡವನ್ನು ಸಹ ಉಲ್ಲೇಖಿಸಿದ್ದಾರೆ.

## ಕಿರುಸುದ್ದಿ

### ಫಾರೂಕ್ ಅಬ್ದುಲ್ಲಾ ಹತ್ಯೆಗೆ ಯತ್ನ!

• **ಶ್ರೀನಗರ:** ಜಮ್ಮು-ಕಾಶ್ಮೀರದ ವಿವಾಹ ಸಮಾರಂಭವೊಂದರಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಜಮ್ಮು-ಕಾಶ್ಮೀರ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅದೃಷ್ಟವಶಾತ್ ಅಪಾಯದಿಂದ ಪಾರಾಗಿದ್ದಾರೆ. ದೇವರೇ ನನ್ನನ್ನು ಬದುಕಿಸಿದ್ದಾರೆಂದು ಘಟನೆ ಬಳಿಕ ಫಾರೂಕ್ ಅಬ್ದುಲ್ಲಾ ಅವರು ಹೇಳಿದ್ದಾರೆ. ದಾಳಿಕೋರ ಕಮಲ್ ಸಿಂಗ್ ಜಮ್ವಾಲ್ ನಗರದ ಹೊರವಲಯದಲ್ಲಿರುವ ಗ್ರೇಟರ್ ಕೈಲಾಶ್ ಪ್ರದೇಶದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಬ್ದುಲ್ಲಾ ಅವರನ್ನು ಗುರಿಯಾಗಿಸಿಕೊಂಡಿದ್ದಾನೆ ಎಂದು ಆರೋಪಿಸಲಾಗಿದೆ.

### ಅನಿಲ್ ಅಂಬಾನಿ ಒಡೆತನದ 581 ಕೋಟಿ. ರೂ ಆಸ್ತಿ ಜಪ್ತಿ

ಮುಂಬೈ: ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿಯವರ ಕಂಪನಿಗಳಾದ ಆರ್‌ಎಚ್‌ಎಫ್ ಎಲ್ ಮತ್ತು ಆರ್‌ಸಿಎಫ್‌ಎಲ್‌ನ 581 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ. ಗೋವಾ, ಕೇರಳ, ಕರ್ನಾಟಕ, ಪಂಜಾಬ್, ತಮಿಳುನಾಡು, ಉತ್ತರ ಪ್ರದೇಶ, ಹರಿಯಾಣ, ಜಾರ್ಖಂಡ್, ಮಹಾರಾಷ್ಟ್ರ, ದಿಲ್ಲಿ ಸೇರಿ ಇತರ ಪ್ರದೇಶದಲ್ಲಿರುವ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಆದೇಶ ಹೊರಡಿಸಲಾಗಿದೆ.

## ದಶಕಗಳಿಂದ ಉಗ್ರವಾದ ಪೋಷಿಸುತ್ತಿರುವ ಪಾಕ್

• **ಹೊಸದಿಲ್ಲಿ:** ಗಡಿಯಾಚೆಯ ಭಯೋತ್ಪಾದನೆ ವಿಚಾರದಲ್ಲಿ ಪಾಕ್ ಹುಸಿ ವಿಶ್ವಾಸಾರ್ಹತೆ ಹೊಂದಿದೆ ಎಂದು ಭಾರತ ಪಾಕಿಸ್ತಾನವನ್ನು ಕಟುವಾಗಿ ತರಾಟೆಗೆತ್ತಿಕೊಂಡಿದೆ. ಭಾರತ ಭಯೋತ್ಪಾದನೆಯನ್ನು ಪ್ರಾಯೋಜಿಸುತ್ತಿದೆ ಎಂಬ ಪಾಕ್‌ನ ಮಿಥ್ಯಾರೋಪಕ್ಕೆ ಭಾರತ ತಕ್ಕ ತಿರುಗೇಟು ನೀಡಿದೆ. ದಶಕಗಳಿಂದ ಪಾಕಿಸ್ತಾನ ಭಯೋತ್ಪಾದನೆಯನ್ನು ಪ್ರಚೋದಿಸುತ್ತಿರುವುದು ಟ್ರ್ಯಾಕ್ ರೆಕಾರ್ಡ್. ವಸ್ತುಸ್ಥಿತಿ ಇದಾಗಿರುವಾಗ ಭಾರತದ ವಿರುದ್ಧ ಆರೋಪ ಮಾಡುವ ಮುಖೇನ ಪಾಕಿಸ್ತಾನ ಯಾರನ್ನೂ ಮೂರ್ಖರನ್ನಾಗಿಸಲು ಸಾಧ್ಯವಿಲ್ಲ. ಪಾಕ್‌ನ ಆರೋಪಗಳನ್ನು ಭಾರತ ಸಾರಾಸಗಟಾಗಿ ತಿರಸ್ಕರಿಸುತ್ತದೆ ಎಂದು ಭಾರತದ ವಿದೇಶ ವ್ಯವಹಾರಗಳ ಖಾತೆ ಪ್ರತಿಕ್ರಿಯಿಸಿದೆ. ಇಂತಹ ಆಧಾರ ರಹಿತ ಆರೋಪಗಳನ್ನು ನಾವು ತಿರಸ್ಕರಿಸುತ್ತೇವೆ. ತನ್ನದೇ ತಪ್ಪುಗಳಿಗೆ ,ಮೋಸಗೇಡಿತನಕ್ಕೆ ಭಾರತದ ವಿರುದ್ಧ ಆರೋಪ ಹೊರಿಸುವುದು ಪಾಕಿಸ್ತಾನದ ದ್ವಿತೀಯ ಸ್ವಭಾವವಾಗಿದೆ. ಪಾಕಿಸ್ತಾನ ಏನೇ ಕಥೆ ಹೇಳಿದರೂ, ದಶಕಗಳಿಂದ ಪಾಕಿಸ್ತಾನ ಗಡಿಯಾಚೆಯ ಭಯೋತ್ಪಾದನೆಗೆ ಪ್ರಚೋದನೆ ನೀಡುತ್ತಿರುವ ವಸ್ತುಸ್ಥಿತಿಯನ್ನು ಬದಲಿಸಲಾಗದು ಎಂದು ವಿದೇಶ ವ್ಯವಹಾರಗಳ ಖಾತೆ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ಕಾಬುಲ್ ನೆರೆರಾಷ್ಟ್ರದೊಂದಿಗೆ ಸಂಘರ್ಷದಲ್ಲಿದ್ದು, ಗಡಿ ವಿಚಾರದಲ್ಲೂ ಸಂಕಷ್ಟಗಳನ್ನು ಎದುರಿಸುತ್ತಿರುವಾಗ , ಭಾರತವು ಅಫ್ಘಾನ್ ನೆಲವನ್ನು ಬಳಸಿಕೊಂಡು ನಡೆಯುವ ಭಯೋತ್ಪಾದಕ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡುತ್ತಿದೆ ಎಂದು ಪಾಕಿಸ್ತಾನ ನಿರಂತರವಾಗಿ ಆರೋಪಿಸಿದೆ.

## 16 ದೇಶಗಳ ವಿರುದ್ಧ ಸೆಕ್ಷನ್ 301 ತನಿಖೆ ಪ್ರಾರಂಭ

• **ವಾಷಿಂಗ್ಟನ್:** ಭಾರತ, ಚೀನಾ ಮತ್ತು ಯುರೋಪಿಯನ್ ಯೂನಿಯನ್ ಸೇರಿದಂತೆ 16 ಪ್ರಮುಖ ಆರ್ಥಿಕತೆಗಳ ವಿರುದ್ಧ ಟ್ರಂಪ್ ಆಡಳಿತ 1974ರ ವ್ಯಾಪಾರ ಕಾಯ್ದೆಯ ಸೆಕ್ಷನ್ 301 ಅನ್ವಯದಲ್ಲಿ ಹೊಸ ವ್ಯಾಪಾರ ತನಿಖೆ ಪ್ರಾರಂಭಿಸಿದೆ. ಅಮೆರಿಕದ ಸುಪ್ರೀಂ ಕೋರ್ಟ್ ಇತ್ತೀಚೆಗೆ ಟ್ರಂಪ್ ಅವರ ಪರಸ್ಪರ ಸುಂಕ ನೀತಿ ರದ್ದುಗೊಳಿಸಿದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

**ಕಾನೂನು ತಂತ್ರ?:** ವಿದೇಶಿ ವ್ಯಾಪಾರ ನೀತಿಗಳು



ಅಮೆರಿಕದ ವ್ಯವಹಾರಗಳಿಗೆ ಅನ್ಯಾಯವಾಗಿ ಅನಾನುಕೂಲವನ್ನು ಉಂಟುಮಾಡುತ್ತಿವೆಯೇ ಎಂದು ಪರೀಕ್ಷಿಸಲು ಈ ತನಿಖೆಯನ್ನು ಪ್ರಬಲ ಕಾನೂನು ಪರ್ಯಾಯವಾಗಿ ಬಳಸಲಾಗುತ್ತಿದೆ. ತನಿಖೆ ಭಾಗವಾಗಿ ಲಿಖಿತ ಸಲ್ಲಿಕೆಗಳನ್ನು ಸಂಗ್ರಹಿಸಲಾಗುತ್ತದೆ ಮತ್ತು ಸಾರ್ವಜನಿಕ ವಿಚಾರಣೆಗಳನ್ನು ನಡೆಸಲಾಗುತ್ತದೆ. ಒಂದು ವೇಳೆ ತಾರತಮ್ಯದ ಪದ್ಧತಿಗಳು ಕಂಡುಬಂದಲ್ಲಿ, ಪ್ರತೀಕಾರವಾಗಿ ಹೆಚ್ಚಿನ ಸುಂಕ ಅಥವಾ ಸೇವಾ ಶುಲ್ಕಗಳನ್ನು ವಿಧಿಸುವ ಸಾಧ್ಯತೆಯಿದೆ.

**ಭಾರತದ ಮೇಲೆ ಗಮನ:** ಭಾರತದ ಮೇಲಿರುವ ಹೆಚ್ಚಿನ ಆಮದು ಸುಂಕಗಳು, ಸ್ಥಳೀಯ ಮೂಲದ ನಿಯಮಗಳು ಮತ್ತು ವಿವಿಧ ವಲಯದಲ್ಲಿನ ಬೆಲೆ ನಿಯಂತ್ರಣದ ಕುರಿತಾದ ದೀರ್ಘಕಾಲದ ಕಳವಳಗಳಿಂದಾಗಿ ಭಾರತವನ್ನು ಈ ಪಟ್ಟಿಗೆ ಸೇರಿಸಲಾಗಿದೆ. ಸದ್ಯಕ್ಕೆ ಯಾವುದೇ ತಕ್ಷಣದ ಸುಂಕ ವಿಧಿಸದಿದ್ದರೂ, ಐಟಿ, ಫಾರ್ಮಾಸ್ಯುಟಿಕಲ್ ಜವಳಿ ಮತ್ತು ಆಟೋ ಬಿಡಿಭಾಗಗಳಂತಹ ಭಾರತದ ಪ್ರಮುಖ ರಫ್ತು ವಲಯಗಳು ಈಗ ತೀವ್ರ ನಿಗಾದಲ್ಲಿರಲಿವೆ.

## ಸಿಇಸಿ ಜ್ಞಾನೇಶ್ ಪದಚ್ಯುತಿಗೆ ವಿಪಕ್ಷದ 200 ಸಂಸದರ ಸಹಿ

• **ಹೊಸದಿಲ್ಲಿ:** ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರ ಪದಚ್ಯುತಿ ಕೋರುವ ಐತಿಹಾಸಿಕ ನೋಟಿಸ್‌ಗೆ ಉಭಯ ಸದನಗಳ ಸುಮಾರು 200 ಸಂಸದರು ಗುರುವಾರ ಸಹಿ ಹಾಕಿದ್ದಾರೆ. ಭಾರತದ ಸಂಸದೀಯ ಇತಿಹಾಸದಲ್ಲಿ ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಇಂತಹ ಕ್ರಮ ಕೈಗೊಳ್ಳುತ್ತಿರುವುದು ಇದೇ ಮೊದಲು. ಲೋಕಸಭೆಯ 130 ಮತ್ತು ರಾಜ್ಯಸಭೆಯ 63 ಸದಸ್ಯರ ಬೆಂಬಲವಿರುವ ಈ ನೋಟಿಸ್‌ನಲ್ಲಿ ಒಟ್ಟು ಏಳು ನಿರ್ದಿಷ್ಟ ಆರೋಪಗಳನ್ನು ಪಟ್ಟಿ ಮಾಡಲಾಗಿದೆ. ಪಕ್ಷಪಾತದ ನಡವಳಿಕೆ, ಚುನಾವಣಾ ವಂಚನೆ ತನಿಖೆಗೆ ಉದ್ದೇಶಪೂರ್ವಕ ಅಡ್ಡಿ ಮತ್ತು ಬೃಹತ್ ಪ್ರಮಾಣದಲ್ಲಿ ಮತದಾನದ ಹಕ್ಕು ಕಸಿದುಕೊಳ್ಳುವುದು ಈ ಪ್ರಮುಖ ಆರೋಪಗಳಾಗಿವೆ. ಪ್ರಸ್ತುತ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಆಡಳಿತ ಪಕ್ಷಕ್ಕೆ ಅನುಕೂಲವಾಗುವಂತೆ ಇದೆ ಎಂದು ಇಂಡಿ ಕೂಟ ಮತ್ತು ಆಮ್ ಆದ್ಮಿ ಪಾರ್ಟಿಯ ಸಂಸದರು ಆರೋಪಿಸಿದ್ದಾರೆ.

**ಮುಂದಿನ ಪ್ರಕ್ರಿಯೆ:** ಮುಖ್ಯ ಚುನಾವಣಾ ಆಯುಕ್ತರ ಪದಚ್ಯುತಿ ಪ್ರಕ್ರಿಯೆ, ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಪದಚ್ಯುತಿಗೆ ಅನುಸರಿಸುವ ಕಟ್ಟುನಿಟ್ಟಿನ ಮಾನದಂಡಗಳನ್ನೇ ಹೊಂದಿರುತ್ತದೆ. ದೋಷಾರೋಪಣೆ ಸಾಬೀತಾಗಲು ಅನುಚಿತ ನಡವಳಿಕೆ ಅಥವಾ ಅಸಮರ್ಥತೆಯನ್ನು ಸಾಬೀತುಪಡಿಸಬೇಕಾಗುತ್ತದೆ. ನೋಟಿಸ್ ಸಲ್ಲಿಸಿದ ನಂತರ, ಎರಡು ಸದನಗಳಲ್ಲಿಯೂ ಈ ಪ್ರಸ್ತಾವನೆಯನ್ನು ಅಂಗೀಕರಿಸಿದರೆ, ಸ್ಪೀಕರ್ ಮತ್ತು ಅಧ್ಯಕ್ಷರು ಜಂಟಿ ಸಮಿತಿಯನ್ನು ರಚಿಸಬಹುದು. ಈ ಪ್ರಸ್ತಾವನೆ ಯಶಸ್ವಿಯಾಗಲು ಸಂಸತ್ತಿನಲ್ಲಿ ವಿಶೇಷ ಬಹುಮತದ (ಮೂರನೇ ಎರಡರಷ್ಟು) ಅಗತ್ಯವಿರುತ್ತದೆ.

## ಇಂದು ಮೋದಿ ಅಸ್ಸಾಂಗೆ: ಹಲವು ಯೋಜನೆಗೆ ಚಾಲನೆ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರದಿಂದ ಎರಡು ದಿನಗಳ ಭೇಟಿಗೆ ಅಸ್ಸಾಂ ಆಗಮಿಸಲಿದ್ದು, ಈ ವೇಳೆ ಅವರು ಕೊಕ್ರಾಝಾರ್, ಗುವಾಹಟಿ ಮತ್ತು ಸಿಲ್ಚಾರ್‌ನಲ್ಲಿ 47,800 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಅನೇಕ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ ಹಲವು ಯೋಜನೆಗಳಿಗೆ ಹಸಿರು ನಿಶಾನೆ ತೋರಿಸಲಿದ್ದಾರೆ. ಶುಕ್ರವಾರ ತಮ್ಮ ಭೇಟಿಯ ಮೊದಲ ದಿನದಂದು, ಮೋದಿ ಮಧ್ಯಾಹ್ನ 1:30ರ ಸುಮಾರಿಗೆ ಕೊಕ್ರಾಝಾರ್ ನಲ್ಲಿ ಭೂಮಿ ಪೂಜೆ ನೆರವೇರಿಸಲಿದ್ದಾರೆ. 4,570 ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಹಸಿರು ನಿಶಾನೆ ತೋರಿಸಲಿದ್ದಾರೆ. ಬಳಿಕ ಸಂಜೆ 5 ಗಂಟೆಗೆ ಗುವಾಹಟಿಯಲ್ಲಿ ಅವರು ಭೂಮಿ ಪೂಜೆ ನೆರವೇರಿಸಿ, ಸುಮಾರು 19,680 ಕೋಟಿ ರೂ. ಮೌಲ್ಯದ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಮಾರ್ಚ್ 14ರಂದು ಬೆಳಗ್ಗೆ ಸುಮಾರು 1 ಗಂಟೆಗೆ ಪ್ರಧಾನಮಂತ್ರಿಯವರು ಸಿಲ್ಚಾರ್‌ನಲ್ಲಿ ಭೂಮಿ ಪೂಜೆ ನೆರವೇರಿಸಲಿದ್ದು, ಸುಮಾರು 23,550 ಕೋಟಿ ರೂ. ಮೌಲ್ಯದ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

### ಲಿಂಗಾಧಾರಿತ ಅಂತರ, ನ್ಯೂನತೆಗಳ ನಿವಾರಣೆಗೆ ಸಂಘಟಿತ ಕ್ರಮ ಅಗತ್ಯ

# ಸಾಧಕ ಮಹಿಳಾ ರೈತರಿಗೆ ಪ್ರಚಾರ ಅಗತ್ಯ: ಮುರ್ಮು

• **ಹೊಸದಿಲ್ಲಿ:** ಕೃಷಿ ಮತ್ತು ಕೃಷಿ-ಆಹಾರ ರಂಗಗಳಲ್ಲಿ ಕಾಯಕ ನಿರತ ಮಹಿಳೆಯರು ನೀತಿ ನಿರೂಪಣೆ, ನಿರ್ಧಾರ ಕೈಗೊಳ್ಳುವಿಕೆ, ನಾಯಕತ್ವ ಸ್ಥಾನವನ್ನು ಹೊಂದುವ ಮೂಲಕ ಮಹತ್ವದ ಪಾತ್ರ ವಹಿಸಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ ನೀಡಿದ್ದಾರೆ. ಮೌಲ್ಯ ಸರಪಳಿಯುದ್ದಕ್ಕೂ ಇರುವ ಲಿಂಗಾಧಾರಿತ ಅಂತರ, ನ್ಯೂನತೆಗಳ ನಿವಾರಿಸಲು ಸಂಘಟಿತ ಕ್ರಮ ಅಗತ್ಯವೆಂದು ಅವರು ಪ್ರತಿಪಾದಿಸಿದ್ದಾರೆ.

ಕೃಷಿರಂಗದಲ್ಲಿ ಯಶಸ್ವಿಯಾಗಿರುವ ಮಹಿಳೆಯರ ಕೊಡುಗೆಗಳ ಬಗ್ಗೆ ಪ್ರಕಟಣೆ-ಪ್ರಚಾರ ಮಾಡುವುದರಿಂದ , ಹೆಚ್ಚೆಚ್ಚು ಜನರಿಗೆ ಈ ಸಾಧಕ ಮಹಿಳೆಯರ ಯಶೋಗಾಥೆಯ ಅರಿವಾಗುತ್ತದೆ. ಮಹಿಳಾ ನೇತೃತ್ವದಲ್ಲಿ ಅಭಿವೃದ್ಧಿ ಸಾಕಾರಗೊಳಿಸುವ ಭಾರತ ಸರಕಾರದ ಪ್ರೋತ್ಸಾಹಕ ಆದ್ಯತೆಯನ್ನು ಪ್ರಶಂಸಿಸಿ, ಕೃಷಿ ರಂಗದ ಎಲ್ಲಾ ಸ್ತರಗಳಲ್ಲೂ ಬೃಹತ್ ಸಂಖ್ಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಲಿಂಗಸಮಾನತೆ-ಎಲ್ಲರ ಒಳಗೊಳ್ಳುವಿಕೆಯ ಕೃಷಿ ಬೆಳವಣಿಗೆಗೆ ಉತ್ತೇಜನವೀಯುವುದು ಎಂದು ರಾಷ್ಟ್ರಪತಿ ಮುರ್ಮು ಹೇಳಿದರು. ಕೃಷಿ-ಆಹಾರ



ವ್ಯವಸ್ಥೆಗಳಲ್ಲಿ ಮಹಿಳೆ ಕುರಿತ ಮೂರು ದಿನಗಳ ಜಾಗತಿಕ ಸಮಾವೇಶದಲ್ಲಿ ರಾಷ್ಟ್ರಪತಿ ಪಾಲ್ಗೊಂಡರು.

**ಮಹಿಳಾ ಕೃಷಿಕರಿಗೆ ಬೆಂಬಲ ಅಗತ್ಯ :** ಭೂಮಿಯ ಒಡೆತನ-ಹಕ್ಕುಪತ್ರಕ್ಕೆ ಸಂಬಂಧಿತ ವಿವಾದಗಳು, ತಂತ್ರಜ್ಞಾನದಲ್ಲಿ ಹಿನ್ನಡೆ, ಸಾಂಸ್ಥಿಕ ಹಣಕಾಸು ಸೌಲಭ್ಯ ಪಡೆಯುವುದೇ ಇತ್ಯಾದಿ ವಿಚಾರಗಳಲ್ಲಿ ಮಹಿಳಾ ಕೃಷಿಕರಿಗೆ ಅಗತ್ಯ ಬೆಂಬಲ ನೀಡಬೇಕೆಂದು ರಾಷ್ಟ್ರಪತಿ ಮುರ್ಮು ಸಲಹೆಯಿತ್ತರು. ಕೃತಕ ಬುದ್ಧಿಮತ್ತೆಯು ಮಹಿಳಾ ಕೃಷಿಕರಿಗೆ ಅದ್ಭುತ ರೀತಿ ಹೊಸ ಅವಕಾಶಗಳ ಕಲ್ಪಿಸುತ್ತಿದೆ ಎಂಬುದಕ್ಕೆ, ಸರಕಾರದ ಜಾನುವಾರುಗಳ ಪೋಷಣೆಯ ದೃಷ್ಟಿಕೋನದಿಂದ ಪ್ರೇರಿತ ಎಐ ಆಧಾರಿತ ಯೋಜನೆ ಸರ್ಲಾಬೆನ್ ಸೂಕ್ತ ನಿದರ್ಶನವಾಗಿದೆ.

**ನ್ಯೂನತೆ ನಿವಾರಣೆಗೆ ನೀಡಿದ ಕರೆಯಾಗಿದೆ:** ವಿಶ್ವಸಂಸ್ಥೆ 2026ನ್ನು ಅಂತಾರಾಷ್ಟ್ರೀಯ ಮಹಿಳಾ ರೈತರ ವರ್ಷವೆಂದು ಘೋಷಿಸಿರುವುದು ಶ್ಲಾಘನೀಯ. ಇದು ಕೃಷಿ-ಆಹಾರ ರಂಗದಲ್ಲಿನ ಮಹಿಳಾ ರೈತರಿಗೆ ನಾಯಕತ್ವ ಪಾತ್ರವನ್ನು ನೀಡಬೇಕು ಮತ್ತು ಆಹಾರ-ಕೃಷಿ ಮೌಲ್ಯ ಸರಪಳಿಯಲ್ಲಿನ ಲಿಂಗಾಧಾರಿತ ನ್ಯೂನತೆ, ಅಂತರಗಳ ನಿವಾರಿಸಲು ನೀಡಿದ ಕರೆಯಾಗಿದೆ ಎಂದು ವಿಶ್ಲೇಷಿಸಿದರು.

**ಜನ ಧನ್ ಖಾತೆಗಳಲ್ಲೂ ಮಹಿಳೆಯರ ಮೇಲುಗೈ:** ವಿಶ್ವದ ಬೃಹತ್ ಕಾರ್ಯಕ್ರಮ ಖ್ಯಾತಿಯ ಜನ ಧನ್ ಯೋಜನೆಯಡಿ 570 ಮಿಲಿಯನ್ ಖಾತೆಗಳು ತೆರೆಯಲ್ಪಟ್ಟಿವೆ ಮತ್ತು ಇದರಲ್ಲಿ ಶೇ.56 ಖಾತೆದಾರರು ಮಹಿಳೆಯರು. ಮುದ್ರಾ ಸಾಲ ಫಲಾನುಭವಿಗಳಲ್ಲೂ ಶೇ.68ರಷ್ಟು ಮಹಿಳೆಯರಿದ್ದಾರೆ. ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯಗಳು ಬಹುಸಂಖ್ಯೆಯಲ್ಲಿ ಜನರನ್ನು ತಲುಪಿರುವುದನ್ನು ಇದು ಪ್ರತಿಫಲಿಸಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

### ಪ್ರಾಮಾಣಿಕತೆಯಿಂದ ಕಲಾಪ ನಿರ್ವಹಿಸಲಿದ್ದೇನೆ: ಸಭಾಪತಿ ಓಂ ಬಿರ್ಲಾ

# ನಿಯಮಾನುಸಾರ ಲೋಕಸಭೆ ಕಾರ್ಯನಿರ್ವಹಣೆ

• **ಹೊಸದಿಲ್ಲಿ:** ಲೋಕಸಭೆಯ ಸಭಾಪತಿಪೀಠ ಯಾರೇ ಒಬ್ಬ ವ್ಯಕ್ತಿಗೆ ಸೇರಿದ್ದಲ್ಲ, ಇದು ಸದನದ ಘನತೆಯ ದ್ಯೋತಕವಾಗಿದೆ. ಸದನವು ನಿಯಮಗಳಿಗೆ ಅನುಸಾರ ಕಾರ್ಯ ನಿರ್ವಹಿಸುತ್ತದೆ. ಯಾರೇ ಸದಸ್ಯರಿಗೆ ತಮಗೆ ಬೇಕಾದ ಸಮಯದಲ್ಲಿ ತಮಗೆ ಬೇಕಾದ ವಿಚಾರದಲ್ಲಿ ಸ್ವೇಚ್ಛೆಯಿಂದ ಮಾತನಾಡುವ ಹಕ್ಕಿಲ್ಲ ಎಂದು ಸಭಾಪತಿ ಓಂ ಬಿರ್ಲಾ ಹೇಳಿದ್ದಾರೆ. ಸಭಾಪತಿಗಳ ವಿರುದ್ಧ ವಿಪಕ್ಷೀಯರು ಮಂಡಿಸಿದ್ದ ಅವಿಶ್ವಾಸ ನಿರ್ಣಯ ತಿರಸ್ಕಾರಗೊಂಡ ಬೆನ್ನಲ್ಲೇ , ಸಭಾಪತಿಗಳು ಸಂಸತ್ತಿನ ನಿಯಮಾವಳಿಗಳನ್ನು ಸದಸ್ಯರಿಗೆ ಮತ್ತೆ ಸ್ಪಷ್ಟ ಮನವರಿಕೆ ಮಾಡಿದ್ದಾರೆ.

**ನಿಯಮಗಳ ಮೀರಿ ಮಾತನಾಡುವ ಹಕ್ಕಿಲ್ಲ:** ಯಾರೇ ಸದಸ್ಯರಿಗೆ ಇಷ್ಟವಾಗುತ್ತದೋ ಇಲ್ಲವೋ, ಲೋಕಸಭಾ ಕಲಾಪಗಳಂತು ಅಸ್ತಿತ್ವದಲ್ಲಿರೋ ನಿಯಮಗಳು ಹಾಗೂ ಕಾರ್ಯ ವಿಧಾನ ಪ್ರಕಾರವೇ ನಡೆಯುತ್ತದೆ. ತಾನು ಪ್ರಾಮಾಣಿಕತೆಯಿಂದ ನ್ಯಾಯೋಚಿತವಾಗಿ ಕಲಾಪಗಳ ನಿರ್ವಹಿಸಲಿದ್ದೇನೆ. ಈ ನಿಯಮಗಳ ಚೌಕಟ್ಟನ್ನು ಮೀರಿ ಮಾತನಾಡುವ ಹಕ್ಕನ್ನು



ಸದನದ ಯಾರೇ ಸದಸ್ಯರು ಹೊಂದಿಲ್ಲ ಎಂದು ಬಿರ್ಲಾ ಸದನದ ನಿಯಮಗಳ ಪಾವಿತ್ರ್ಯವನ್ನು ಎತ್ತಿಹಿಡಿದರು. ಆಳುವ ಪಕ್ಷೀಯರು ಮೇಜು ಬಡಿದು ಸಭಾಪತಿಗಳ ಹೇಳಿಕೆಯನ್ನು ಬೆಂಬಲಿಸಿದರು.

**ಸಭಾಪತಿಗಳ ಸಮ್ಮತಿ ವಿನಾ ಮಾತನಾಡಲಾಗದು:** ಎರಡು ದಿನಗಳ ಚರ್ಚೆ ಸಂದರ್ಭ ನನ್ನ ಮೇಲೆ ವಿಶ್ವಾಸವಿರಿಸಿದ ಸಮಸ್ತರಿಗೂ ತಾನು ಕೃತಜ್ಞನಾಗಿರುವೆ. ಹಾಗೆಯೇ ತನ್ನ ಪರವಾಗಿ ಹಾಗೂ ವಿರೋಧವಾಗಿ ಮಾತನಾಡಿದ ಎಲ್ಲರಿಗೂ ಕೃತಜ್ಞತೆಗಳು. ವಿಪಕ್ಷ ನಾಯಕ ರಾಹುಲ್ ಗಾಂಧಿಗೆ ಮಾತನಾಡಲು ಸಾಕಷ್ಟು ಅವಕಾಶ ನೀಡಿಲ್ಲ, ಅವರಿಗೆ ಯಾವುದೇ ಸಂದರ್ಭ ಯಾವುದೇ ವಿಷಯವಾಗಿ ಮಾತನಾಡಲು ಅವಕಾಶ ಕೊಡಬೇಕೆಂದು ಕೆಲವು ಸದಸ್ಯರು ಚರ್ಚೆ ಸಂದರ್ಭ ಆಗ್ರಹಿಸಿದ್ದರು ಎಂದು ಉಲ್ಲೇಖಿಸಿದ ಸಭಾಪತಿ ಬಿರ್ಲಾ, ಪ್ರತಿಯೋರ್ವ ಸದಸ್ಯರಿಗೂ ಸದನದಲ್ಲಿ ಮಾತನಾಡುವ ಹಕ್ಕಿದೆ ಖಂಡಿತ, ಆದರೂ ಯಾರೇ ಸದಸ್ಯರೂ ಸದನದ ನಿಯಮ, ನಿಬಂಧನೆಗಳಿಗೆ ಬದ್ಧವಾಗಿ ಮಾತನಾಡಬೇಕು. ದೇಶದ ಪ್ರಧಾನಿ ಅಥವಾ ಯಾವುದೇ ಸಚಿವರ ಸಹಿತ ಯಾರೇ ಸದಸ್ಯರು ಸಭಾಪತಿಗಳ ಸಮ್ಮತಿ ಪಡೆಯದೆ ಮಾತನಾಡುವ ಹಾಗಿಲ್ಲ, ಸದನದ ಯಾರೇ ಸದಸ್ಯರಿಗೂ ತಮಗೆ ಬೇಕಾದ ಸಮಯದಲ್ಲಿ ಬೇಕಾದ ವಿಚಾರವಾಗಿ ಸ್ವೇಚ್ಛೆಯಿಂದ ಮಾತನಾಡುವ ಹಕ್ಕಿಲ್ಲ, ಸಭಾಪತಿಗಳು ಅವಕಾಶ ಕೊಟ್ಟಾಗಲೇ ಮಾತನಾಡಬಹುದು. ಸದನದಲ್ಲಿ ಭಾಷಣ ಮಾಡಲು ಸಂಸದರಿಗೆ ಸ್ವಾತಂತ್ರ್ಯವಿದೆ ಖಂಡಿತ, ಆದರೆ ನಿಯಮಗಳಿಗೆ ಬದ್ಧವಾಗೇ ಮಾತನಾಡಬೇಕು ಎಂದು ಪುನರುಚ್ಚರಿಸಿದರು.

## ಸಂಪಾದಕೀಯ

### ಎರಡು ತೈಲ ಹಡಗುಗಳ ಆಗಮನ ಸ್ವಾಗತಾರ್ಹ

ಮಧ್ಯಪ್ರಾಚ್ಯದ ಯುದ್ಧದ ನಡುವೆಯೇ, ಹಾರ್ಮುಜ್ ಜಲಸಂಧಿಯಿಂದ ಭಾರತ ಕಡೆಗೆ ತೈಲ ಹೊತ್ತ ಎರಡು ಹಡಗುಗಳನ್ನು ತರಿಸಿಕೊಳ್ಳಲು ಯಶಸ್ವಿಯಾಗಿದ್ದು, ಈ ಮೂಲಕ ದೇಶದಲ್ಲಿ ಹುಟ್ಟುತ್ತಿರುವ ಎಲ್‌ಪಿಜಿ ಮತ್ತು ತೈಲ ಕೊರತೆ ವದಂತಿಗಳನ್ನು ನಿವಾರಿಸಲು ಮುಂದಾಗಿದೆ.

ಈಗಾಗಲೇ ಪ್ರಧಾನಿ ನರೇಂದ್ರ ಮೋದಿ, ಪೆಟ್ರೋಲಿಯಂ ಸಚಿವರು ಮತ್ತು ತೈಲ ಕಂಪನಿಗಳು ತೈಲ ಮತ್ತು ಎಲ್‌ಪಿಜಿಗೆ ಯಾವುದೇ ಸಮಸ್ಯೆ ಇಲ್ಲ, ನಮ್ಮಲ್ಲಿ ಕೊರತೆಯುಂಟಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಜತೆಗೆ, ದೇಶದ ಶೇ.70ರಷ್ಟು ತೈಲವನ್ನು ಹಾರ್ಮೋಜ್ ಜಲಸಂಧಿಯಿಂದ ಹೊರತಾದ ಬೇರೆ ಮಾರ್ಗಗಳಿಂದ ತರಿಸಿಕೊಳ್ಳುತ್ತಿದ್ದೇವೆ ಎಂದೂ ಸ್ಪಷ್ಟವಾಗಿ ಕೇಂದ್ರ ಸರ್ಕಾರ ಹೇಳಿದೆ. ಇರಾನ್‌ನ ವಿದೇಶಾಂಗ ಸಚಿವ ಮತ್ತು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಸತತವಾಗಿ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದು, ಭಾರತದ ಹಡಗುಗಳಿಗೆ ಅವಕಾಶ ಮಾಡಿಕೊಡುವ ಬಗ್ಗೆ ಒಂದು ನಿರ್ಧಾರಕ್ಕೆ ಬರಲಿದ್ದಾರೆ. ಇದರ ಮೊದಲ ಹಂತವಾಗಿ ತೈಲ ಹೊತ್ತ ಎರಡು ಹಡಗುಗಳು, ಹಾರ್ಮೋಜ್ ಜಲಸಂಧಿಯಿಂದಲೇ ರಹಸ್ಯವಾಗಿ ಹೊರಟು, ಮುಂಬೈಗೆ ಬಂದಿವೆ. ಇದೊಂದು ರೀತಿಯಲ್ಲಿ ದೊಡ್ಡ ರಹಸ್ಯ ಕಾರ್ಯಾಚರಣೆಯಂತೆಯೇ ನಡೆದಿದ್ದು, ದೇಶದ ಜನರ ಹಿತಾಸಕ್ತಿಗಾಗಿ ದೊಡ್ಡ ಮಟ್ಟದ ಅಪಾಯವನ್ನೇ ತೆಗೆದುಕೊಂಡಿದೆ. ಹೀಗಾಗಿ ಮುಂದಿನ ದಿನಗಳಲ್ಲೂ ಯಾವುದೇ ಕಾರಣಕ್ಕೂ ತೈಲ ಮತ್ತು ಎಲ್‌ಪಿಜಿ ಕೊರತೆಯಾಗಲು ಬಿಡುವುದಿಲ್ಲ ಎಂದು ಕೇಂದ್ರ ಸರ್ಕಾರವೂ ಹೇಳುತ್ತಿದ್ದು, ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ.

ಈ ಮೊದಲೇ ಹೇಳಿದಂತೆ ಯುದ್ಧ ಕಾಲದಲ್ಲಿ ಎಲ್ಲವೂ ಸರಾಗವಾಗಿ ನಡೆಯಬೇಕು ಎಂದು ಆಶಿಸುವುದು ತಪ್ಪಾಗುತ್ತದೆ. ಕೆಲವೊಮ್ಮೆ ದೂರದಲ್ಲಿ ಎಲ್ಲೋ ನಡೆಯುವ ಯುದ್ಧಗಳೂ ನಮ್ಮ ಮೇಲೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಹೊಡೆತ ನೀಡಬಹುದು. ಆದರೆ, ಈಗ ಯುದ್ಧದಲ್ಲಿ ಭಾಗಿಯಾಗಿರುವ ಎಲ್ಲ ದೇಶಗಳೂ ಒಂದಲ್ಲ, ಒಂದು ನಿಟ್ಟಿನಲ್ಲಿ ಭಾರತದ ಜತೆ ಉತ್ತಮ ಸಂಬಂಧ ಹೊಂದಿವೆ. ಹೀಗಾಗಿ, ಕೆಲ ಮಟ್ಟಿಗೆ ಗೊಂದಲಗಳಾದರೂ, ಸಹನೆಯಿಂದ ಕಾಯಬೇಕಾದ ಅನಿವಾರ್ಯತೆಯೂ ಜನರಿಗೆ ಇದೆ. ಈಗ ಸರ್ಕಾರವೂ ಕಣ್ಣು ಮುಚ್ಚಿ ಕುಳಿತಿಲ್ಲ, ತನ್ನ ಎಲ್ಲ ಲಭ್ಯ ಮಾರ್ಗಗಳ ಮೂಲಕ ದೇಶದಲ್ಲಿ ಯಾವುದೇ ವಸ್ತುಗಳಿಗೆ ಕೊರತೆಯಾಗದಂತೆ ನೋಡಿಕೊಳ್ಳಲು ಶ್ರಮಿಸುತ್ತಿದೆ. ಇದು ಮುಂಬೈ ಬಂದರಿಗೆ ಬಂದ ಹಡಗುಗಳಿಂದಲೇ ಸಾಬೀತಾಗಿದೆ. ಇಂಥ ಹೊತ್ತಲ್ಲಿ ನಾವು ರಾಜಕೀಯದ ದಾಳಗಳಿಗೆ ಬಲಿಯಾಗದೆ, ವ್ಯವಸ್ಥೆಯ ಜತೆಗೆ ನಿಲ್ಲಬೇಕಾದ ಜವಾಬ್ದಾರಿಯನ್ನೂ ಹೊಂದಿದ್ದೇವೆ. ಇದರಲ್ಲಿ ನಾವು ಮಾಡಬೇಕಾಗಿದ್ದುದು, ಸರ್ಕಾರದ ಮೇಲೆ ನಂಬಿಕೆ ಇಟ್ಟು, ಯಾವುದೇ ಕಾರಣಕ್ಕೂ ಗಾಬರಿಗೆ ಅಥವಾ ಆತಂಕಕ್ಕೆ ಬೀಳದೇ ಸಮಚಿತ್ತದಿಂದ ಇರಬೇಕು. ಆಗಷ್ಟೇ ಎಲ್ಲ ಗೊಂದಲಗಳು, ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಾಗುತ್ತದೆ. ಯುದ್ಧದ ಹೊತ್ತಲ್ಲಿ ನಮ್ಮ ಸಮಚಿತ್ತದ ನಡೆಗಳು, ಅಪಾರವಾದ ಅನುಕೂಲ ಮಾಡಿಕೊಡುತ್ತವೆ ಎಂಬುದನ್ನು ಮರೆಯಬಾರದು.

## ಗುರುಗಳ ಮಾರ್ಗದರ್ಶನ ಬೇಕು

**ಗುರೂಣಾಂ ವಚನಂ ಗ್ರಾಹ್ಯಂ ಪ್ರಾಪ್ಯೇ ಲಕ್ಷ್ಯೇ ಸುದೂರತಃ ।**
**ಸಮೀಪಸ್ಥಂ ತು ಯತ್ ಕಿಂಚಿತ್ ಸ್ವಯಂ ಪ್ರಾಪ್ನೋತಿ ಮಾನವಃ ॥ -ಸುಭಾಷಿತಶತಕಂ**

ದೂರದಲ್ಲಿರುವ ಲಕ್ಷ್ಯವನ್ನು ಭೇದಿಸಲು ಗುರುಗಳ ಮಾರ್ಗದರ್ಶನದ ಮಾತು ಬೇಕು. ಹತ್ತಿರದಲ್ಲೇ ಇರುವುದನ್ನು ಮನುಷ್ಯನು ತಾನೇ ಪಡೆಯಬಹುದು - ಎಂಬುದು ಶ್ಲೋಕಾರ್ಥ.




ಸನಾತನ ಪರಂಪರೆಯಲ್ಲಿ ಗುರುವಿನದು ಅತ್ಯಂತ ಮಹತ್ವದ ಸ್ಥಾನ. ಯಾವುದೇ ಕೆಲಸವನ್ನು ಆರಂಭಿಸುವ ಪೂರ್ವದಲ್ಲಿ ಗುರುವನ್ನು ನೆನಪಿಸಬೇಕು. ಧಾರ್ಮಿಕ ಪೂಜಾದಿಗಳಲ್ಲಂತೂ ಗುರು-ಗಣಪತಿಯರನ್ನು ಪೂಜಿಸಿ ಮುಂದಿನ ವಿಧಿ ವಿಧಾನವನ್ನು ನೆರವೇರಿಸುತ್ತಾರೆ. ಗುರುವಿಲ್ಲದೇ ಬದುಕು ಸಾಗುವುದಿಲ್ಲ, ಇಹಪರಗಳ ಸಾಧನೆಯಲ್ಲೂ ಗುರುವಿಗೆ ಪ್ರಥಮ ಪ್ರಾಶಸ್ತ್ಯ. ಇದಕ್ಕೆ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದು ದಾಸವಾಣಿ ಎಚ್ಚರಿಸುತ್ತದೆ. ''ಹರ ಮುನಿದರೂ ಗುರು ಕಾಯ್ವ'' ಎಂಬ ನುಡಿಗಟ್ಟು ಗುರುವಿನ ಗುರುತ್ವಕ್ಕೆ ಹಿಡಿದ ಕನ್ನಡಿ.

ಅದ್ದರಿಂದಲೇ ಉಪನಿಷತ್ತು ತಾಯಿ ತಂದೆಯರ ಅನಂತರ ''ಆಚಾರ್ಯ ದೇವೋಭವ'' ಎಂದು ಗುರುವಿನ ಹಿರಿಮೆಯನ್ನು ಸಾರಿದೆ. ಗುರು ವ್ಯಕ್ತಿಯೇ ಆಗಬೇಕಿಲ್ಲ, ಸಂಕೇತವೂ ಆಗುತ್ತದೆ. ಪ್ರಕೃತಿಯಲ್ಲಿರುವ ವಿವಿಧ ವಸ್ತುಗಳೂ ಆಗುತ್ತವೆ. ಏಕಲವ್ಯನಿಗೆ ದ್ರೋಣರ ಮೃಣ್ಮಯ ಮೂರ್ತಿ ಪ್ರೇರಣೆ ನೀಡಿ ಅಸದೃಶ ಬಿಲ್ಗಾರನನ್ನಾಗಿ ರೂಪಿಸಿತು.

ಶ್ರೀಮದ್ ಭಾಗವತದಲ್ಲಿ ಬರುವ ಉದ್ಧವಗೀತೆ ಪ್ರಕೃತಿಯಲ್ಲಿರುವ ಒಂದೊಂದು ವಸ್ತುವೂ ಗುರುಸ್ಥಾನದಲ್ಲಿ ನಿಂತು ಧೈರ್ಯ ತುಂಬುತ್ತವೆ ಎಂಬ ವಿಚಾರ ವಿಸ್ತೃತವಾಗಿ ನಿರೂಪಿಸಲ್ಪಟ್ಟಿದೆ. ಪ್ರತಿಯೊಬ್ಬರಿಗೂ ಗುರಿ ತಲುಪಲು ಗುರು ಬೇಕು. ಗುರು ತ್ರಿಮೂರ್ತಿ ಸ್ವರೂಪಿಯಾಗಿ ತಾನೊಬ್ಬನೇ ತ್ರಿಮೂರ್ತಿಗಳ ಕೆಲಸ ಮಾಡಬಲ್ಲ, ಬ್ರಹ್ಮನು ಸೃಷ್ಟಿ ಕಾರ್ಯ ಮಾಡುವಂತೆ ಗುರುವು ಹೊಸ ಬಗೆಯ ಚಿಂತನೆಯ ಹುಟ್ಟಿಗೆ ಕಾರಣನಾಗಿ ಬ್ರಹ್ಮನಾಗುತ್ತಾನೆ. ಒಳ್ಳೆಯತನವನ್ನು ಉಳಿಸಿ ಬೆಳೆಸಿಕೊಳ್ಳುವ ಸಂದರ್ಭದಲ್ಲಿ ವಿಷ್ಣುವಾಗಿ ಸ್ಥಿತಿ ಕೆಲಸ ಮಾಡಬಲ್ಲ, ಜನರಲ್ಲಿರುವ ಅಜ್ಞಾನವನ್ನೂ, ದೋಷವನ್ನೂ ದೂರೀಕರಿಸಿ (ನಾಶಪಡಿಸಿ) ಮಹೇಶ್ವರನಾಗಿ ಸ್ಥಾನವನ್ನು ಧರಿಸಬಲ್ಲ, ಒಂದು ಪರಿಪೂರ್ಣ ವ್ಯಕ್ತಿತ್ವ ಅರಳುವಲ್ಲಿ ಗುರುವಿನ ಪಾತ್ರ ಅತ್ಯಂತ ಮಹತ್ವದ್ದು.

ಎಲ್ಲ ಸಂದರ್ಭದಲ್ಲಿಯೂ ಗುರು ಅನುಗ್ರಹ ಬೇಕೇಬೇಕು. ಗುರುವಿನ ಅನುಗ್ರಹ ಸಿಗದಿದ್ದರೆ ಬದುಕು ಸಫಲವೆನಿಸದು. ಅದ್ದರಿಂದಲೇ ಗುರುಗಳ ಪಾದಗಳಿಗೆರಗಿ ಆಶೀರ್ವಚನವನ್ನೂ, ಅನುಗ್ರಹ ಮಂತ್ರಾಕ್ಷತೆಯನ್ನೂ ಪಡೆಯಲು ಹಂಬಲಿಸುತ್ತೇವೆ.

ಹೆಚ್ಚಿನ ಸಂದರ್ಭದಲ್ಲಿ ವಿವೇಕದಿಂದ ವ್ಯವಹರಿಸಿ ತನ್ನ ಹತ್ತಿರದಲ್ಲಿ, ಸುತ್ತುಮುತ್ತಲಿನ ಜ್ಞಾನವನ್ನು ತಾನೇ ಪಡೆಯಬಹುದು. ತನ್ನ ವಿವೇಕವನ್ನು ಒರೆಗೆ ಹಚ್ಚಿ ತೊಡಗಿಕೊಂಡರೆ ಇದು ಸಾಧ್ಯ, ಪ್ರಯತ್ನದಿಂದ ಪಡೆದುಕೊಳ್ಳಬಹುದು. ಸುಲಭವಾದದ್ದನ್ನು ತಾನೇ ಓದಿ ಜ್ಞಾನವನ್ನು ಪಡೆದುಕೊಳ್ಳಬಹುದು. ಆದರೆ ದೂರದ ಲಕ್ಷ್ಯವನ್ನು ಭೇದಿಸಲು ಗುರೂಪದೇಶ ಬೇಕು, ಗುರುವಿನ ಮಾರ್ಗದರ್ಶನ ಬೇಕು. ದೂರದ ಲಕ್ಷ್ಯವನ್ನು ಭೇದಿಸುವ ಸಾಮರ್ಥ್ಯವನ್ನೂ ಉಪಾಯವನ್ನೂ ಗುರುವು ಹೊಂದಿರುತ್ತಾನೆ. ಅದನ್ನು ನಮ್ಮದಾಗಿಸಿಕೊಳ್ಳಲು ಗುರುವಿನ ಸಹಕಾರ ಬೇಕೇಬೇಕು. ಕಠಿಣ ವಿಷಯವನ್ನು, ಗೊಂದಲಮಯ ವಿಚಾರವನ್ನು, ರಹಸ್ಯ ನಿರೂಪಣೆಯನ್ನು ತಿಳಿಯಲು ಗುರು ಬೇಕಾಗುತ್ತದೆ. ಅದ್ದರಿಂದ ಪ್ರತಿಯೊಬ್ಬರ ಜೀವನದಲ್ಲಿಯೂ ಗುರುವಿನ ಪಾತ್ರ ದೊಡ್ಡದಿರುತ್ತದೆ. ಈ ಕಾರಣಕ್ಕಾಗಿಯೇ ಗುರುವನ್ನು ಗೌರವಿಸುವ, ಗುರುಸೇವೆ ಮಾಡುವ, ಪದ್ಧತಿ ನಮ್ಮ ಸಮಾಜದಲ್ಲಿ ಅನುಸ್ಯೂತವಾಗಿ ಸಾಗಿ ಬಂದಿದೆ. ಇದನ್ನು ಸರಿಯಾಗಿ ಅರಿತು ನಮ್ಮದಾಗಿಸಿಕೊಳ್ಳಬೇಕು.

# ಯುದ್ಧಕಾಲದಲ್ಲೊಂದು ಅಕಾಲಿಕ ಚಿಂತೆ!

ಉಘೇ ವೀರಭೂಮಿಗೆ

• ಸಂತೋಷ್ ತಮ್ಮಯ್ಯ
santoshthammaiah@gmail.com



ಇದು ಅರೇಬಿಯನ್ ನೈಟ್ಸ್ ಕತೆಯಲ್ಲ, ಆದರೆ ಹೆಚ್ಚುಕಡಿಮೆ ಹಾಗೆಯೇ ಇದೆ.

ಒಂಬತ್ತನೆಯ ಶತಮಾನದ ಇಥಿಯೋಪಿಯಾದಲ್ಲಿ ಕಲ್ದಿ ಎಂಬ ಕುರಿಗಾಹಿಯಿದ್ದ. ಒಂದು ದಿನ ಆತ ಪೊದೆಯಂತಿದ್ದ ಗಿಡವೊಂದರಲ್ಲಿ ಹೊಳೆಯುತ್ತಿದ್ದ ಹಣ್ಣನ್ನು ಕಂಡು ಕುತೂಹಲಗೊಂಡು ಕಿತ್ತು ತಿಂದ. ವಿಚಿತ್ರ ರುಚಿಯ ಹಣ್ಣು ಕಲ್ದಿಗೆ ಚೈತನ್ಯದಾಯಕ ಅನುಭವವನ್ನು ನೀಡಿತು. ಆ ಗಿಡ ಮುಸ್ಲಿಂ ಮತಪ್ರಚಾರಕ ಸಂತನ ಸುಪರ್ದಿಯಲ್ಲಿತ್ತು. ಇನ್ನೊಂದಿಷ್ಟು ಹಣ್ಣುಗಳನ್ನು ಕಿತ್ತುಕೊಂಡ ಕಲ್ದಿ ಅದನ್ನು ಮನೆಗೆ ಕೊಂಡೊಯ್ಯಲು ಆತನ ಅನುಮತಿ ಕೇಳಿದ. ಅನುಮತಿ ನಿರಾಕರಿಸಿದ ಮುದುಕ ಸಂತ ಕಲ್ದಿಯ ಕೈಯಲ್ಲಿದ್ದ ಹಣ್ಣುಗಳನ್ನು ಕಿತ್ತು ಬೆಂಕಿಗೆಸೆದ. ಸುಡತೊಡಗಿದ ಹಣ್ಣುಗಳು ಅಪಾರ ಸುವಾಸನೆಯನ್ನು ಬೀರತೊಡಗಿತು. ಅದರ ಪರಿಮಳಕ್ಕೆ ಅಕ್ಕಪಕ್ಕದಲ್ಲಿದ್ದವರು ನೆರೆದರು. ಸುಟ್ಟ ಬೀಜಗಳನ್ನು ಬೆಂಕಿಯಿಂದ ಹೆಕ್ಕಿ ತೆಗೆದರು. ಕುಟ್ಟಿ ನೋಡಿದರು. ಏನನ್ನಿಸಿತೋ ಏನೋ ಸುಟ್ಟಬೀಜಗಳನ್ನು ಪುಡಿಮಾಡಿ ನೀರಿನಲ್ಲಿ ಕರಗಿಸಿ ಕುಡಿದರು. ಕುಡಿದವರಿಗೆ ಆ ಕಷಾಯ ಮುದ ನೀಡಿತು.

ಜಗತ್ತಿನ ಮೊದಲ ಕಾಫಿ ಹೀಗೆ ತಯಾರಾಯಿತು ಎಂದು ಈ ದಂತಕತೆ ಹೇಳುತ್ತದೆ. ಇದರ ಸತ್ಯಾಸತ್ಯತೆಯ ಬಗ್ಗೆ ಅನೇಕ ಸಂಶೋಧನೆಗಳಾಗಿವೆ. ಕೊನೆಗೆ ಇಂಥ ಕತೆಗಳು ಅರಬ್ ನೆಲದ ಅಲ್ಲಲ್ಲಿ ಬೇರೆಬೇರೆ ಸ್ವರೂಪದಲ್ಲಿ ಆಚರಣೆಯಲ್ಲಿರುವುದರಿಂದ ಅವು apocryphal ಆಗಿರಬಹುದು, 1671ಕ್ಕೆ ಮುನ್ನ ಇಂಥ ಯಾವ ಕತೆಗಳೂ ಅಸ್ತಿತ್ವದಲ್ಲಿರಲಿಲ್ಲ ಎಂದು ತೀರ್ಮಾನಿಸಿದ ವಿದ್ವಾಂಸರು ಚರ್ಚೆಯನ್ನು ಕೊನೆಗೊಳಿಸಿದರು. ಆದರೆ ಹೀಗೆ ತೀರ್ಮಾನಿಸಿದ ದೊಡ್ಡದೊಡ್ಡ ಸಂಶೋಧಕರು ದಂತಕತೆಗಳಲ್ಲಿ ಉಲ್ಲೇಖಿತ ಕಾಫಿಯ ಸ್ವಾದದ ಬಗ್ಗೆ ಮಾತ್ರ ಎಳ್ಳಷ್ಟೂ ಅನುಮಾನ ವ್ಯಕ್ತಪಡಿಸಲಿಲ್ಲ. ಕಾಫಿ ಇತಿಹಾಸದ ಆರಂಭದ ಕಾಲದ ಈ ಗೊಂದಲಗಳನ್ನು ಬಿಟ್ಟರೆ ಈ ಕ್ಷಣದವರೆಗೆ ಜಗತ್ತು ಕಾಫಿಯಿಂದ ಹೇಗೆ ಅವಲಂಬಿತವಾಗಿದೆ, ಪ್ರೇರಿತವಾಗಿದೆ ಮತ್ತು ನಾಗರಿಕತೆಯಲ್ಲಿ ಕಾಫಿ ಹೇಗೆ ಪ್ರಭಾವ ಬೀರಿದೆ ಎನ್ನುವುದರ ಸಂಪೂರ್ಣ ಮಾಹಿತಿಯನ್ನು ಜಗತ್ತು ಅಧಿಕೃತವಾಗಿ ದಾಖಲಿಸಿದೆ. ಅದನ್ನು ಪಾನೀಯವೊಂದಕ್ಕೆ ಕೊಟ್ಟ ಪ್ರಾಮುಖ್ಯತೆ ಎನ್ನಬೇಕೋ ಅಥವಾ ನಾಗರಿಕತೆಗೆ ಸಲ್ಲಿಸುವ ಕೃತಜ್ಞತೆ ಎನ್ನಬೇಕೋ ತಿಳಿಯದು. ಆದರೆ ಆ ಸ್ವಾದದ ಮೂಲಕ ಕಾಫಿ ಇಂದು ಇಡೀ ಜಗತ್ತಿನ ಬಹುತೇಕ ಎಲ್ಲಾ ದೇಶಗಳ ಮೇಲೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪ್ರಭಾವ ಬೀರಿದೆ ಎನ್ನುವುದಂತೂ ಸತ್ಯ.

ದೇಶದಲ್ಲಿ ಅತಿ ಹೆಚ್ಚು ಕಾಫಿ ಬೆಳೆಯುವ ಕರ್ನಾಟಕದ ಕೊಡಗು-ಚಿಕ್ಕಮಗಳೂರಿನ ಕಾಫಿ ತೋಟಗಳಲ್ಲೀಗ ಕಾಫಿ ಕುಯ್ಲು ಮುಗಿದು, ಗಿಡಗಳು ಹೂವು ಬಿಟ್ಟಿವೆ. ಇಲ್ಲಿ ಹೂವು ಬಿಡುವುದಕ್ಕೂ ದೂರದ ಮಧ್ಯಪ್ರಾಚ್ಯದಲ್ಲಿ ಕದನವಾದನ ಹಾರತೊಡಗುವುದಕ್ಕೂ ಸರಿಹೋಗಿದೆ. ಹಾಗಾಗಿ ಕಾಫಿ ಹೂವಿನ ಪರಿಮಳಕ್ಕಿಂತ ದಟ್ಟವಾಗಿ ಕಾಫಿ ಬೆಲೆಯ ಚರ್ಚೆಯಾಗುತ್ತಿದೆ. ಹಡಗುಗಳು ಸಂಚರಿಸದೆ ಕಾಫಿ ಹೊರದೇಶಕ್ಕೆ ಸಾಗುವುದು ಹೇಗೆ? ಇದರಿಂದ ಬೆಲೆ ಏರಬಹುದೇ ಅಥವಾ ಇಳಿಯಬಹುದೇ ಎಂಬಿತ್ಯಾದಿ ಚರ್ಚೆಗಳು ಬೆಳೆಗಾರರಲ್ಲಿ ನಡೆದು ಖಮೇನಿಯ ಹತ್ಯೆಯೇ ಮರೆತುಹೋಗಿದೆ! ಯುದ್ಧವು ಅಡುಗೆಮನೆಯ ಅನಿಲ ಸಿಲಿಂಡರ್ ಮೇಲೆ ಪರಿಣಾಮ ಬೀರುವುದಾದರೆ ಕಾಫಿ ಬೆಲೆಯ ಮೇಲೆ ಬೀರಲಾರದೆ ಎಂಬ ಪ್ರಶ್ನೆ ಬೆಳೆಗಾರರನ್ನು ಕಾಡುತ್ತಿದೆ. ಯುದ್ಧಕ್ಕೆ ಯಾವುದೇ ರಾಜಕೀಯ ಕಾರಣಗಳನ್ನು ನೀಡಲಾಗಿದ್ದರೂ, ಮೂಲ ಕಾರಣ ಯಾವಾಗಲೂ ಆರ್ಥಿಕವಾಗಿರುತ್ತದೆ ಎಂಬುದೆಷ್ಟು ನಿಜವೋ ತಿಳಿಯದು. ಆದರೆ ಎಲ್ಲಾ ಯುದ್ಧಗಳ ಅಂತಿಮ ಪರಿಣಾಮ ಆರ್ಥಿಕತೆಯ ಮೇಲಾಗುತ್ತದೆ ಎಂಬುದು ಮಾತ್ರ ಸತ್ಯ. ಜಗತ್ತಿಗೆ ತೈಲೋತ್ಪನ್ನಗಳ ಕೊರತೆಯ ಭೀತಿ ಹುಟ್ಟಿರುವುದೇ ಅದಕ್ಕೆ ಸಾಕ್ಷಿ. ಪ್ರತಿ ಕದನವಿರಾಮಗಳ ನಂತರ ಯುದ್ಧಗ್ರಸ್ತ, ಯುದ್ಧಸಂತ್ರಸ್ತ ಮತ್ತು ಯುದ್ಧದಿಂದ ದೂರ ಉಳಿದ ದೇಶಗಳೆಲ್ಲವೂ ಒಂದಲ್ಲಾ ಒಂದು ಸ್ಥಿತ್ಯಂತರಕ್ಕೆ ಒಳಗಾಗುತ್ತವೆ. ಯುದ್ಧದ ನಂತರ ಯಾವುದೋ ಒಂದು ಪಾಠವನ್ನು ಪ್ರತೀ ದೇಶವೂ ಕಲಿಯುತ್ತದೆ. ಅದ್ದರಿಂದ ಯುದ್ಧಾನಂತರದ ಇತಿಹಾಸವನ್ನು ಗಮನಿಸಿದರೆ ಅನೇಕ ಕುತೂಹಲಕರ ಸಂಗತಿಗಳು ಇಣುಕುತ್ತವೆ. ಯುದ್ಧ ಯಾವುದೇ ಕಾರಣಕ್ಕಾಗಿ ನಡೆದಿರಲಿ, ಕೆಲವು ಸಂಗತಿಗಳು ಯುದ್ಧದ ಹೊರತಾಗಿಯೂ ಎದ್ದು ಕಾಣುತ್ತವೆ. ಯುದ್ಧಕಾಲದ ಚಿಂತನೆಗಳು ಭ್ರಮೆಯೂ ಆಗಬಹುದೆಂಬುದನ್ನು ತೋರಿಸುತ್ತವೆ.

ಅದಕ್ಕೆ ಕಾಫಿಗಿಂತ ಉತ್ತಮ ಉದಾಹರಣೆ ಬಹುಶಃ ಬೇರೆ ಇಲ್ಲ. ಬೆಲೆಯಲ್ಲಿ ವ್ಯತ್ಯಾಸವಾಗಬಹುದೇ ಎಂಬ ಪ್ರಶ್ನೆ ಬೆಳೆಗಾರರ ಕುತೂಹಲವೇ ಇರಬಹುದು. ಆದರೆ ಕಾಫಿ ಸಹಿತ ಎಲ್ಲಾ ವ್ಯವಹಾರಗಳು ಯುದ್ಧದಿಂದ ಒಂದು ಕ್ಷಣ ಗೊಂದಲಗೊಂಡಿರುವುದಂತೂ ಸತ್ಯ. ಅದು ಶಾಶ್ವತ ಸ್ಥಿತಿಯಲ್ಲ, ಕಾಫಿ ಸಾಗಿಸುವ ಹಡಗು ನಿಂತರೆ ಕಂಟೇನರ್ ಸಾಗಿಸುವ ಹಡಗು ಇಂಥ ಸ್ಥಿತಿಯಲ್ಲಿ ನಿಲ್ಲಲೇಬೇಕು! ಕಾಫಿ ಜಗತ್ತಿನ ಜೀವನಾವಶ್ಯಕ ಸರಕೇನಲ್ಲ. ಆದರೆ ಶತಮಾನದಿಂದಲೂ ಜಗತ್ತು ಕಠಿಣ ಪರಿಸ್ಥಿತಿಗಳಲ್ಲಿ ಕಾಫಿಯನ್ನು ಬಿಟ್ಟು ಬದುಕಿಲ್ಲ. ಪರಿಸ್ಥಿತಿ ಮತ್ತು ಮನುಷ್ಯನ ಚಟದ ಕಾರಣಗಳಿಗಾಗಿ ಕಾಫಿಯನ್ನು ಹೊತ್ತ ಹಡಗುಗಳು ಲಂಡನ್, ನ್ಯೂಯಾರ್ಕಿಗೆ ಶೀಘ್ರ ಸಂಚರಿಸಲೇಬೇಕು! ಒಂದು ವೇಳೆ ಕಾಫಿಯ ಆಮದು-ರಫ್ತು, ಯುದ್ಧ-ಕ್ರಾಂತಿಗಳಿಗೆ ನೇರಾನೇರ ಪರಿಣಾಮ ಬೀರುವುದಾಗಿದ್ದರೆ ಕಾಫಿ ಸರ್ವನಾಶವಾಗಿ ಅದೆಷ್ಟೋ ಶತಮಾನಗಳಾಗಿರುತ್ತಿತ್ತು. ಇಂಥ ಎಷ್ಟೋ ಯುದ್ಧ-ಕ್ರಾಂತಿಗಳನ್ನು ನೋಡಿದ ಕಾಫಿ ಈಗಿನ ಮಧ್ಯಪ್ರಾಚ್ಯದ ಯುದ್ಧಕ್ಕೂ ಹೆದರುವುದಿಲ್ಲ. ಅಷ್ಟಕ್ಕೂ ಕಾಫಿ ಮಾರ್ಗಕ್ಕೂ ಮಧ್ಯಪ್ರಾಚ್ಯ ಯುದ್ಧದಿಂದ ಸ್ತಬ್ಧವಾಗಿರುವ ಸಮುದ್ರಮಾರ್ಗಕ್ಕೂ ಏನೇನೂ ಸಂಬಂಧವಿಲ್ಲ, ಹರ್ಮುಜ್ ಜಲಸಂಧಿ, ಪರ್ಷಿಯನ್ ಕೊಲ್ಲಿಯಲ್ಲಿಂದಲೂ ಭಾರತದ ಕಾಫಿ ಸಾಗಿಲ್ಲ. ಅಲ್ಲದೆ ಜಗತ್ತಿನಲ್ಲಿ ಸಂಘರ್ಷಗಳೆಷ್ಟೇ ಸಂಭವಿಸಿದರೂ ಕಾಫಿ ಎಂದೂ ಸೋತಿಲ್ಲ. ಗಡಿಗಳು ಬದಲಾದರೂ ಕಾಫಿಯ ಹುಚ್ಚು ಬಿಟ್ಟಿಲ್ಲ, ಯಾವ ಬಾಂಬುಗಳೂ ಕಾಫಿಯನ್ನು ಕದಲಿಸಿಲ್ಲ, ಕ್ಷಿಪಣಿಗಳು ಕಾಫಿಗೆ ಭಯ ತರಿಸಿಲ್ಲ, ಕಾಫಿಯ ಇತಿಹಾಸವನ್ನು ನೋಡಿದರೆ ಯುದ್ಧ ಕಾಲದಲ್ಲೇ ಕಾಫಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿದೆ.

1526ರಲ್ಲಿ ಹಂಗೇರಿಯ ರಾಜ ಎರಡನೆಯ ಲೂಯಿಸ್ ಮತ್ತು ಒಟ್ಟೋಮನ್ ಸುಲ್ತಾನ್ ನಡುವೆ ನಡೆದ ಐತಿಹಾಸಿಕ 'ಮೊಹಾಕ್ಸ್ ಯುದ್ಧ'ದಲ್ಲಿ ಒಟ್ಟೋಮನ್ನರು ಹಂಗೇರಿಯನ್ನು ಆಕ್ರಮಿಸಿಕೊಂಡರು. ಗೆದ್ದ ಒಟ್ಟೋಮನರು ಹಂಗೇರಿಯಲ್ಲಿ ಕಾಫಿಯನ್ನು ಪರಿಚಯಿಸಿದರು. ಕೆಲವೇ ಸಮಯದಲ್ಲಿ ಹಂಗೇರಿಯಲ್ಲಿ ಕಾಫಿ ಜನಪ್ರಿಯವಾಯಿತು ಮತ್ತು ಹಂಗೇರಿಯ ಮೂಲಕ ಇಡೀ ಯುರೋಪಿಗೆ ಹರಡಿತು. ಆ ಮೂಲಕ ಕಾಫಿಯ ವಾಣಿಜ್ಯೀಕರಣದ ಹೊಸ ಶಕೆ ಆರಂಭವಾಯಿತು. 1529ರಲ್ಲಿ ಅದೇ ಒಟ್ಟೋಮನ್ನರು ಆಸ್ಟ್ರಿಯಾದ ರಾಜಧಾನಿ ವಿಯೆನ್ನಾಕ್ಕೆ ಮುತ್ತಿಗೆ ಹಾಕಿದರು. ಇಲ್ಲಿ ಒಟ್ಟೋಮನ್ ಟರ್ಕರು ಗೆಲ್ಲದಿದ್ದರೂ ಅವರ ಕಾಫಿ ವಿಯೆನ್ನಾದಲ್ಲಿ ಗೆದ್ದಿತು. ಆಸ್ಟ್ರಿಯಾದ ಜನ ಕಾಫಿಯನ್ನು ಯುದ್ಧದ ಕೊಡುಗೆ ಎಂದು ಸ್ವಾಗತಿಸಿ ಕಾಫಿ ಸಂಸ್ಕೃತಿಯನ್ನು ಬೆಳೆಸಿದರು. ಆಸ್ಟ್ರಿಯಾದ ಮೂಲಕ ಜರ್ಮನಿ, ಫ್ರಾನ್ಸ್‌ಗಳಿಗೂ ಹರಡಿತು. 1565ರಲ್ಲಿ ಇದೇ ಟರ್ಕರು ಮಾಲ್ಟಾ ದ್ವೀಪಗಳ ಮೇಲೆ ದಂಡೆತ್ತಿಹೋದಾಗಲೂ ಕಾಫಿ ಬೀಜಗಳನ್ನು ಕೊಂಡೊಯ್ದರು. ಗುಲಾಮರಿಂದ ಕಾಫಿ ತೋಟಗಳನ್ನು ನಿರ್ಮಿಸಿದರು. ಇದೇ ರೀತಿ ವೆನಿಸ್ ಗಣರಾಜ್ಯ, ಉತ್ತರ ಆಫ್ರಿಕಾ, ಈಜಿಪ್ಟ್‌ಗೂ ಕಾಫಿ ಆಕ್ರಮಣಕಾರರಿಂದಲೇ ಸಾಗಿತು. ಕ್ರಮೇಣ ಅವೆಲ್ಲವೂ ಕಾಫಿ ಬೆಳೆಯುವ ದೇಶಗಳಾಗಿ ರಫ್ತುಮಾಡುವ ದೇಶಗಳೂ ಆದವು. ಯುದ್ಧದ ಕಾರಣದಿಂದ ಪರಿಚಯವಾದ ಕಾಫಿ ಸಂತ್ರಸ್ತ ದೇಶಗಳಿಗೆ ಆರ್ಥಿಕ ಮೂಲವಾದ ಕೌತುಕ ಕಾಫಿ ಬಿಟ್ಟರೆ ಬೇರೆ ಬೆಳೆಗಳಲ್ಲಿ ಕಾಣದು. 19ನೇ ಶತಮಾನದಲ್ಲಿ ಕಾಫಿ ಸಂಸ್ಕೃತಿ ಮಧ್ಯ ಯುರೋಪಿನಾದ್ಯಂತ ಹರಡಿ ಕವಿ-ಸಾಹಿತಿಗಳು, ಕಲಾವಿದರು, ಬುದ್ಧಿಜೀವಿಗಳು ಕಾಫಿಯ ನೆಪದಿಂದ ಭೇಟಿಯಾಗಲಾರಂಭಿಸಿದರು. ಕಾಫಿ ಹೌಸ್‌ಗಳು ನಿರ್ಮಾಣಗೊಂಡವು. ಬ್ರಿಟಿಷ್, ಡಚ್, ಫ್ರೆಂಚರ ಪ್ರಭಾವದಿಂದ ಕಾಫಿ ಸೇವನೆ ಪ್ರತಿಷ್ಠೆಯ ಸಂಕೇತವಾಯಿತು. ಇದರಿಂದ ಯುರೋಪಿನಲ್ಲಿ ಕಾಫಿ ಕುಡಿಯುವವರ ಮೇಲೆ ಹೆಚ್ಚುವರಿ ತೆರಿಗೆ ವಿಧಿಸುವ ನಿಯಮಗಳೂ ಬಂದವು. ಮುಂದೆ ಐರೋಪ್ಯರು ತಮ್ಮ ವಸಾಹತುಗಳಿಗೆ ಸಸ್ಯಶಾಸ್ತ್ರಜ್ಞರನ್ನು ಅಟ್ಟಿ ಕಾಫಿ ಬೆಳೆಯ ಸಾಧ್ಯತೆಯನ್ನು ಪರಿಶೀಲಿಸತೊಡಗಿದರು. ಭಾರತದಲ್ಲಿ ಕಾಫಿ ವಾಣಿಜ್ಯ ಬೆಳೆಯಾಗಿ ಆರಂಭವಾಗಿದ್ದು ಇದೇ ಅವಧಿಯಲ್ಲಿ. ಭಾರತದಲ್ಲಿಂದು ವಸಾಹತುಶಾಹಿಯ ಅಂಶಗಳು ಒಂದೊಂದಾಗಿ ಕಳಚುತ್ತಿವೆ. ಆದರೆ ಕಾಫಿ ಸ್ವದೇಶಿಯಾಗಿ ಬದಲಾಗಿದೆ! ಇಂದು ಜಗತ್ತಿನ ಬಹುಪಾಲು ದೇಶಗಳು ಒಂದೋ ಕಾಫಿ ಬೆಳೆಗಾರ ದೇಶವಾಗಿದೆ ಅಥವಾ ಕಾಫಿಯ ಗ್ರಾಹಕವಾಗಿದೆ. ಅಂಥ ಕಾಫಿ ಯುದ್ಧದ ಕಾರಣಕ್ಕೆ ಕುಗ್ಗುವುದೆಂದರೇನು?

ಹದಿನಾರನೇ ಶತಮಾನದ ಇಸ್ಲಾಮಿಕ್ ಚಿಂತಕ ತಜ್ಞರು ಕಾಫಿಯ ಪರಿಣಾಮವು ಹಶಿಶ್ ಅಥವಾ ಆಲ್ಕೋಹಾಲ್‌ನಂತಿದೆ ಎಂದು ಸಾರಿದ್ದರು. ಅದನ್ನು ನಂಬಿದ ಮತೀಯ ನಾಯಕರು ಅಮಲು ಪದಾರ್ಥವಿರುವ ಕಾಫಿ ಇಸ್ಲಾಮಿನ ತತ್ತ್ವಾದರ್ಶಗಳಿಗೆ ವಿರುದ್ಧವಾದದ್ದು ಎಂದು ಫತ್ವಾಗಳನ್ನು ಹೊರಡಿಸಲಾರಂಭಿಸಿದರು. ಆ ಹೊತ್ತಿಗಾಗಲೇ ಇಸ್ಲಾಮಿನ ಪ್ರಮುಖ ಕ್ಷೇತ್ರಗಳಾದ ಮೆಕ್ಕಾ, ಯೆಮೆನ್ ಮತ್ತು ಕೈರೋದಲ್ಲಿನ ಕಾಫಿಹೌಸ್‌ಗಳು ಜನಪ್ರಿಯಗೊಂಡಿದ್ದವು. ಈ ಕಾಫಿಹೌಸ್‌ಗಳು ಮದರಸಾಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಸಂಪ್ರದಾಯಸ್ಥ ಮತಗುರುಗಳಿಗೆ ಇದು ಹಿಡಿಸಲಿಲ್ಲ, ಇಸ್ಲಾಂ ಸಂಸ್ಕೃತಿ ಕಾಫಿ ಸಂಸ್ಕೃತಿಯಾಗಿ ಬದಲಾಗುವ ಮುನ್ನ ಎಚ್ಚರ ವಹಿಸುವುದು ಸೂಕ್ತವೆಂದು ಕಾಫಿ ಮತ್ತು ಕಾಫಿ ಹೌಸ್‌ಗಳ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಯಿತು. ಹಲವು ದೇಶಗಳಲ್ಲಿ ಕಾಫಿಯನ್ನೇ ನಿಷೇಧಿಸಲಾಗಿತ್ತು! 1511ರಲ್ಲಿ ಮೆಕ್ಕಾದ ದೇವತಾಶಾಸ್ತ್ರದ ನ್ಯಾಯಾಲಯದಲ್ಲಿ ಸಂಪ್ರದಾಯವಾದಿ ಇಮಾಮ್‌ಗಳು ಕಾಫಿಯನ್ನು ನಿಷೇಧಿಸಿದ್ದರು. ಮುಂದೆ 1524ರಲ್ಲಿ ಒಟ್ಟೋಮನ್ ಒಂದನೆಯ ಸುಲೇಮಾನ್ ಆದೇಶದ ಮೇರೆಗೆ ಮುಖ್ಯ ಮುಫ್ತಿ ಎಬುಸ್ಸುದ್ ಎಲ್-ಇಮಾದಿ ಆ ನಿಷೇಧವನ್ನು ರದ್ದುಗೊಳಿಸಿದರು. 1532ರಲ್ಲಿ ಕೈರೋ ಕೂಡ ಕಾಫಿಯನ್ನು ನಿಷೇಧಿಸಿತು. ಕಾಫಿ ಬೀಜಗಳನ್ನು ಹೊಂದಿರುವ ಕಾಫಿಹೌಸ್‌ಗಳು ಮತ್ತು ಗೋದಾಮುಗಳ ಪರವಾನಿಗೆಯನ್ನು ರದ್ದುಗೊಳಿಸಿತು. 1532ರಿಂದ 1533ರ ನಡುವೆ ಕಟ್ಟರ್ ಇಸ್ಲಾಮಿಕ್ ಸಾಮ್ರಾಜ್ಯವಾಗಿದ್ದ ಸಫಾವಿದ್ ಕೂಡ ಕಾಫಿಯು ತಂಬಾಕು ಮತ್ತು ಮದ್ಯಕ್ಕಿಂತ ಭಿನ್ನವಲ್ಲ ಎಂದು ಕಾಫಿಯ ವಿರುದ್ಧ ಫತ್ವಾ ಹೊರಡಿಸಿತು. ಇಸ್ಲಾಂ ಮತಗುರುಗಳಿಂದ ಬಂದ ಈ ಯಾವ ಫತ್ವಾಗಳು ಹೆಚ್ಚು ಕಾಲ ಬಾಳಿಕೆ ಬರಲಿಲ್ಲ, ಕಾಫಿ ಫತ್ವಾವನ್ನೂ ಮೀರಿ ಬೆಳೆಯಿತು. ಇಸ್ಲಾಮಿನಿಂದ ನಿಷೇಧಕ್ಕೊಳಗಾದ ಕಾಫಿಯನ್ನು ಕ್ರೈಸ್ತ ಮತಗುರುಗಳೂ ನಿಷೇಧಿಸಿದರು. ಇಟಲಿಯಲ್ಲಿ ಕಾಫಿ ಪರಿಚಯವಾದ ಆರಂಭದ ದಿನಗಳಲ್ಲಿ ಕ್ಯಾಥೋಲಿಕ್ ಚರ್ಚ್ ಅದನ್ನು ವಿರೋಧಿಸಿತು. ಪಾದ್ರಿಗಳು ಅದನ್ನು 'ಸೈತಾನನ ಪಾನೀಯ' ಎಂದು ಕರೆದರು. ಆದರೆ ಚರ್ಚ್ ಸಮಾಜದ ವಿರೋಧವನ್ನು ಎದುರಿಸಬೇಕಾಯಿತು. ಒತ್ತಡಕ್ಕೆ ಮಣಿದ ಪೋಪ್ ಎಂಟನೇ ಕ್ಲೆಮೆಂಟ್ ಸ್ವತಃ ಕಾಫಿಯನ್ನು ಸವಿದು ಪರೀಕ್ಷಿಸಿ ''ಈ ಸೈತಾನನ ಪಾನೀಯವು ತುಂಬಾ ರುಚಿಕರವಾಗಿದೆ. ನಾಸ್ತಿಕರಿಗೆ ಮಾತ್ರ ಇದನ್ನು ಬಳಸಲು ಬಿಡುವುದು ವಿಷಾದಕರ'' ಎಂದು ಘೋಷಿಸಿದರು. 1675ರಲ್ಲಿ ಕಾಫಿ ಹೌಸ್‌ಗಳು ರಾಜಕೀಯ ವಿಮರ್ಶೆಯ ಕೇಂದ್ರಗಳೆಂದು ಇಂಗ್ಲೆಂಡಿನ ಎರಡನೆಯ ಚಾರ್ಲ್ಸ್ ಕಾಫಿಯನ್ನು ನಿಷೇಧಿಸಿದ! ನಂತರ ಒತ್ತಡಕ್ಕೆ ಸಿಲುಕಿ ನಿಷೇಧ ರದ್ದುಗೊಳಿಸಿದ. 1777ರಲ್ಲಿ ಪ್ರಷ್ಯಾ ಕಾಫಿಯಿಂದ ಜನರಲ್ಲಿ ಬೀಯರ್ ಕುಡಿಯುವ ಪ್ರವೃತ್ತಿ ಕಡಿಮೆಯಾಗುತ್ತಿದೆ ಎಂಬ ಕಾರಣ ನೀಡಿ ಕಾಫಿಯನ್ನು ನಿಷೇಧಿಸಿತು. ಹಿಂದೆ ಮತೀಯ ಕಾರಣಕ್ಕೆ ಕಾಫಿಯನ್ನು ನಿಷೇಧಿಸಿದ್ದ ಟರ್ಕಿ 1640ರಲ್ಲಿ ಕಾಫಿ ಕೇಂದ್ರಗಳು ಆಡಳಿತದ ವಿರೋಧಿ ಯೋಜನೆಯನ್ನು ಹಾಕಬಹುದೆಂಬ ಕಾರಣಕ್ಕೆ ನಿಷೇಧಿಸಿತು. 1750ರಿಂದ 1820ರವರೆಗೆ ಸ್ವೀಡನ್, ಕಾಫಿ ಹೌಸ್‌ಗಳು ರಾಜಕೀಯ ಹುನ್ನಾರದ ತಾಣವಾಗುತ್ತಿವೆ ಮತ್ತು ಜನರ ಆರೋಗ್ಯವನ್ನು ಕೆಡಿಸುತ್ತಿವೆ ಎಂಬ ಕಾರಣ ನೀಡಿ ನಿಷೇಧಿಸಿತು. ಆದರೆ ಕೆಲವೇ ದಿನಗಳಲ್ಲಿ ನಿಷೇಧ ತೆರವಾಯಿತು. ಇಷ್ಟೆಲ್ಲಾ ನಿಷೇಧಗಳ ತರುವಾಯ ಕಾಫಿ ಉಳಿಯಿತು, ಮಾತ್ರವಲ್ಲ ಜಗತ್ತಿನಾದ್ಯಂತ ಜನಪ್ರಿಯವೂ ಆಯಿತು. 1674ರಲ್ಲಿ ಲಂಡನಿನ ಮಹಿಳೆಯರು, ಕಾಫಿಯು ಪುರುಷರ ಲೈಂಗಿಕ ಶಕ್ತಿಯನ್ನು ಕಡಿಮೆ ಮಾಡುತ್ತದೆ, ಇದು ಬಲಹೀನ ಇಂಗ್ಲೆಂಡಿನ ಸೃಷ್ಟಿಗೆ ಕಾರಣವಾಗುತ್ತದೆ ಎಂದು ಅಭಿಯಾನವನ್ನೇ ಕೈಗೊಂಡರು (The Women's Petition Against Coffee). ನಂತರ ಮಹಿಳೆಯರಿಗೂ ಕಾಫಿಯ ರುಚಿ ಹತ್ತಿತು. ಹೀಗೆ ಹಲವು ಬಾರಿ ಹಲವು ಕಾರಣಗಳಿಂದ ಜಗತ್ತಿನ ನಾನಾ ಮೂಲೆಗಳಲ್ಲಿ ಸಂಕಷ್ಟಕ್ಕೊಳಗಾದರೂ ಕಾಫಿ ನಾಶವಾಗಲಿಲ್ಲ, ರಫ್ತು ನಿಲ್ಲಲಿಲ್ಲ, ಎರಡೆರಡು ಮಹಾಯುದ್ಧಗಳ ಗದ್ದಲದಲ್ಲೂ ವಿಶ್ವದ ಕಾಫಿ ವಹಿವಾಟು ಸರಾಗವಾಗಿ ನಡೆಯುತ್ತಿದ್ದರೆ ಈ ಮಧ್ಯಪ್ರಾಚ್ಯದ ಯುದ್ಧ ಕಾಫಿಗ್ಯಾವ ಲೆಕ್ಕ?

ಇಂದು ಯಾವುದೋ ಸಮುದ್ರದಲ್ಲಿ ನಾಲ್ಕು ಹಡಗುಗಳು ನಿಂತ ಮಾತ್ರಕ್ಕೆ ಕಾಫಿಯ ಬೆನ್ನುಮೂಳೆಯೇನೂ ಮುರಿಯುವುದಿಲ್ಲ, ಯುದ್ಧಗ್ರಸ್ತ ದೇಶಗಳೂ ಕಾಫಿ ಇಲ್ಲದೆ ಬದುಕುವುದಿಲ್ಲ, ಆರ್ಥಿಕ ಮಹಾಪತನದಲ್ಲೂ ಕಾಫಿಯದ್ದು ರಕ್ಷಣಾತ್ಮಕ. ಅಷ್ಟರಮಟ್ಟಿಗೆ ಕಾಫಿ ಜಗತ್ತನ್ನಾಳುತ್ತಿದೆ. ಆದರೆ ಅತ್ತ ಯುದ್ಧ ಇತ್ತ ಅಂಗಳಕ್ಕೆ ಬಂದುಬಿದ್ದ ಕಾಫಿ, ಹರಡುತ್ತಿರುವ ಗಾಳಿಸುದ್ದಿಗಳು ಬೆಳೆಗಾರರನ್ನು ಸಹಜವಾಗಿ ಹೆದರಿಸುತ್ತವೆ. ಜೊತೆಗೆ ಬೆಲೆಗಳ ಏರಿಳಿತ ಗಾಳಿಸುದ್ದಿಗಳಿಗೆ ರೆಕ್ಕೆಪುಕ್ಕಗಳನ್ನು ಮೂಡಿಸುತ್ತವೆ. ಇತರ ಸರಕುಗಳ ಬೆಲೆ ವ್ಯತ್ಯಾಸಕ್ಕೆ ಏನು ಕಾರಣಗಳಿರುತ್ತವೋ ಕಾಫಿಗೂ ಅಂಥದ್ದೇ ಕಾರಣಗಳಿರುತ್ತವೆಯೇ ಹೊರತು ಯುದ್ಧ ಕಾಫಿಯನ್ನು ಸರ್ವನಾಶವನ್ನಂತೂ ಮಾಡುವುದಿಲ್ಲ, ಕಾಫಿ ಸಾಗಿಸುವ ಹಡಗುಗಳು ಯುದ್ಧಕ್ಕೆ ಹೆದರಿ ದೀರ್ಘಾವಧಿಯವರೆಗೆ ಲಂಗರು ಹಾಕುವುದಿಲ್ಲ.

# ಸರಕಾರದ ವಿರುದ್ಧ ಸೋನಿಯಾ ಟೀಕೆಗೆ ಅರ್ಥವಿಲ್ಲ

▸ ರಾಮ್ ಮಾಧವ್

ಇರಾನಿನ ಮುಖಂಡ ಅಯತೊಲ್ಲಾ ಖಮೇನಿ ಹತ್ಯೆಯಾದುದಕ್ಕೆ ಭಾರತವು ಖಂಡಿಸಲಿಲ್ಲವೇಕೆ ಎಂದು ಟೀಕಿಸಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಲೇಖನವೊಂದನ್ನು ಬರೆದಿದ್ದಾರೆ. 'ನಿಷ್ಪಕ್ಷಪಾತತನ'ವನ್ನು ಭಾರತ ತ್ಯಜಿಸಿದೆ ಎಂದು ಆರೋಪಿಸಿದ ಅವರು, ದೇಶದ ವಿದೇಶಾಂಗ ನೀತಿಯ ವಿಶ್ವಾಸಾರ್ಹತೆ ಮತ್ತು ಅದು ಸಾಗುತ್ತಿರುವ ದಿಕ್ಕನ್ನು ಪ್ರಶ್ನಿಸಿದ್ದಾರೆ.

ಆದರೆ ಇರಾನ್ ಸಂಘರ್ಷವನ್ನು ಇಂತಹ ಸಂಕುಚಿತ ಮಾದರಿಯಲ್ಲಿ ವಿಶ್ಲೇಷಿಸುವ ಬದಲಾಗಿ ವಿಸ್ತರಿತ ಆಯಾಮದಲ್ಲಿ ವಿಶ್ಲೇಷಿಸಬೇಕಾಗಿದೆ. ವಾಸ್ತವಾಂಶಗಳನ್ನು ಅರಿತುಕೊಂಡು ಪ್ರತಿಕ್ರಿಯಿಸಬೇಕಾಗುತ್ತದೆ. ಹಲವು ಪ್ರಸಂಗಗಳಲ್ಲಿ ಭಾರತವು ಉದ್ವಿಗ್ನತೆಯನ್ನು ಹೆಚ್ಚಿಸುವ ಬದಲಿಗೆ ಸಂಧಾನ ಮತ್ತು ರಾಜತಾಂತ್ರಿಕ ಕ್ರಮದಿಂದ ಪರಿಸ್ಥಿತಿ ನಿಭಾಯಿಸಬೇಕೆಂದು ಕರೆ ಕೊಟ್ಟಿತ್ತು. ಭಾರತ ಮತ್ತು ಇರಾನ್ ಸರಕಾರಿ ಮಟ್ಟದಲ್ಲಿ ಹಾಗೂ ಜನರ ಮಟ್ಟದಲ್ಲಿ ಸೌಹಾರ್ದ ಸಂಬಂಧ ಹೊಂದಿದೆ. ಆದರೆ ಭಾವನೆಗಳಿಗೆ ದಾಸರಾಗಿ ಹಿತಾಸಕ್ತಿಗಳನ್ನು ಬಲಿಕೊಡಲಾಗುವುದಿಲ್ಲ. ಇರಾನ್‌ನ ಆಡಳಿತವು ಜಗತ್ತು ಕಂಡಿರುವ ಆಡಳಿತ ವ್ಯವಸ್ಥೆಗಿಂತ ಭಿನ್ನವಾದ ವ್ಯವಸ್ಥೆಯನ್ನು ಹೊಂದಿದೆ. ಅಲ್ಲಿ ಇರುವುದು ವಿಭಿನ್ನ ರೀತಿಯ ಧಾರ್ಮಿಕ ಪ್ರಭುತ್ವ. 9ನೇ ಶತಮಾನದ ವಿಲಾಯತ್-ಇ-ಫಕಿ ಮಾದರಿಯನ್ನು ಅಲ್ಲಿ ಅನುಸರಿಸಲಾಗುತ್ತದೆ. 1979ರಲ್ಲಿ ಇರಾನಿನಲ್ಲಿ ಇಸ್ಲಾಮಿಕ್ ಕ್ರಾಂತಿ ನಡೆದ ಬಳಿಕ ಅಯತೊಲ್ಲಾ ಖೊಮೇನಿ ತಮ್ಮನ್ನು ವಲಿ-ಇ-ಫಕಿ ಎಂದು ಘೋಷಿಸಿಕೊಂಡರು ಹಾಗೂ ಈ ವ್ಯವಸ್ಥೆಯನ್ನು ಸಂವಿಧಾನದಲ್ಲಿ ಅಡಕಗೊಳಿಸಿದರು. ಇದರ ಪ್ರಕಾರ ಎಲ್ಲಾ ಅಧಿಕಾರಗಳು ಸರ್ವೋಚ್ಚ ನಾಯಕನ ಕೈಯಲ್ಲಿದ್ದು, ಚುನಾಯಿತ ಸರಕಾರವು ಅವರ ಅಧೀನದಲ್ಲಿರುತ್ತದೆ. 1989ರಲ್ಲಿ ಖೊಮೇನಿ ನಿಧನಾನಂತರ ಅವರ ಪುತ್ರ ಖಮೇನಿ ಈ ಹುದ್ದೆಗೇರಿದರು.

ಈ ಆಡಳಿತ ಮಾದರಿಯು ಅಸಹಜವಾಗಿದ್ದು, ಕೆಲವು ಸಂದರ್ಭಗಳಲ್ಲಿ ರಾಜತಾಂತ್ರಿಕ ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತದೆ. ಖಮೇನಿಯವರ ಸ್ಥಾನಮಾನವನ್ನು ಗಮನಿಸಿದರೆ ಸೋನಿಯಾ ಗಾಂಧಿಯವರು ಅವರನ್ನು ಇರಾನಿನ ಆಡಳಿತದ ಮುಖ್ಯಸ್ಥ ಎಂದು ಬಣ್ಣಿಸುವುದು ಸರಿ ಕಾಣುವುದಿಲ್ಲ, ಇಬ್ಬರು ಪರಮೋಚ್ಚ ನಾಯಕರೂ (ಖೊಮೇನಿ ಮತ್ತು ಖಮೇನಿ) ಧಾರ್ಮಿಕ ಮುಖಂಡರಾಗಿದ್ದು, ತಮ್ಮ ದೇಶದಿಂದ ಹೊರಗೆ ಪ್ರಯಾಣ ಮಾಡಿದವರೇ ಅಲ್ಲ, ವಿದೇಶಗಳಲ್ಲಿ ಇರಾನನ್ನು ಪ್ರತಿನಿಧಿಸುವುದು ಇರಾನಿನ ಅಧ್ಯಕ್ಷರು. ಇರಾನಿನ ಅಧ್ಯಕ್ಷರು ವಿದೇಶಗಳಿಗೆ ಭೇಟಿ ಮಾಡಿದಾಗ ಅವರಿಗೆ ಒಬ್ಬ ರಾಷ್ಟ್ರ ಮುಖಂಡನಿಗೆ ನೀಡುವ ಗೌರವಾದರಗಳನ್ನು ಸಲ್ಲಿಸಲಾಗುತ್ತದೆ. ಇರಾನಿನ ಮೂವರು ರಾಷ್ಟ್ರಾಧ್ಯಕ್ಷರು ಭಾರತಕ್ಕೆ ಭೇಟಿ ನೀಡಿದಾಗ (ಮೊಹಮ್ಮದ್ ಕಟಾಮಿ 2003, ಅಹಮದಿ ನೇಜಾದ್ 2008, ಹಸನ್ ರೌಹಾನಿ 2018) ಭಾರತವು ಅವರಿಗೆ ರಾಷ್ಟ್ರದ ಒಬ್ಬ ಮುಖಂಡರಿಗೆ ಸಲ್ಲಬೇಕಾದ ರೀತಿಯ ಗೌರವ ಸಲ್ಲಿಸಿದೆ. ಎಲ್ಲಾ ಬಗೆಯ ಶಿಷ್ಟಾಚಾರಗಳನ್ನು ಪಾಲಿಸಿದೆ. ಈ ಬಾರಿ ಖಮೇನಿ ನಿಧನರಾದಾಗ ಭಾರತದ ಸಂತಾಪವನ್ನು ಸೂಚಿಸಲು ಇರಾನ್ ರಾಯಭಾರ ಕಚೇರಿಗೆ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಅವರನ್ನು ಕಳಿಸಿದುದು ಅದಕ್ಕಾಗಿಯೇ.

ಇರಾನ್ ಒಐಸಿಯಲ್ಲಿ ಕಾಶ್ಮೀರ ವಿರೋಧಿ ನಿರ್ಣಯವನ್ನು ಬೆಂಬಲಿಸಲಿಲ್ಲ ಹಾಗೂ ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿಯಲ್ಲಿ ಅಂತಹ ನಿರ್ಣಯವನ್ನು ವಿರೋಧಿಸಿತ್ತು ಎಂದು ಸೋನಿಯಾಗಾಂಧಿ ಹೇಳಿರುವುದು ನಿಜ. ಇರಾನ್ ಸರಕಾರವು ಪಾಕಿಸ್ತಾನ ಪ್ರಾಯೋಜಿತ ಕಾಶ್ಮೀರದ ಮೇಲಿನ ನಿರ್ಣಯವನ್ನು ಬೆಂಬಲಿಸದಿರಲು ತನ್ನದೇ ಆದ ಭೌಗೋಳಿಕ ಮತ್ತು ಆರ್ಥಿಕ ಕಾರಣಗಳಿದ್ದವು. ಆದರೆ ಇರಾನ್ ಸರಕಾರದ ನಿಲುವನ್ನು ಅಲ್ಲಿನ ಪರಮೋಚ್ಚ ನಾಯಕ ಖಮೇನಿ ಕೂಡಾ ಪಾಲಿಸಿದ್ದಾರೆ ಎಂದು ಹೇಳಲು ಬರುವುದಿಲ್ಲ, ಕಳೆದ 10 ವರ್ಷಗಳಲ್ಲಿ ಖಮೇನಿ ಹಲವಾರು ಸಂದರ್ಭಗಳಲ್ಲಿ ಕಾಶ್ಮೀರಕ್ಕೆ ಸಂಬಂಧಿಸಿ ಮತ್ತು ಮುಸ್ಲಿಮರಿಗೆ ಸಂಬಂಧಿಸಿ ಭಾರತವನ್ನು ಟೀಕಿಸಿದ್ದಾರೆ.

ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370ನೇ ವಿಧಿ ರದ್ದುಪಡಿಸಿದಾಗ ಖಮೇನಿ ಅದನ್ನು ವಿರೋಧಿಸಿ ಟ್ವೀಟ್ ಮಾಡಿದ್ದರು. 2020ರಲ್ಲಿ ಸಿಎಎ ವಿರೋಧಿಸಿ ದಿಲ್ಲಿಯಲ್ಲಿ ಪ್ರತಿಭಟನೆ ನಡೆದಾಗಲೂ ಭಾರತವು ಮುಸ್ಲಿಮರ ನರಮೇಧ ನಡೆಸುತ್ತದೆ ಎಂದು ಆರೋಪಿಸಿದ್ದರು. ಭಾರತವು ತನ್ನ ಉಗ್ರವಾದಿ ಹಿಂದುಗಳನ್ನು ನಿಯಂತ್ರಿಸಬೇಕು, ಇಲ್ಲದಿದ್ದರೆ ಇಸ್ಲಾಮಿಕ್ ಜಗತ್ತು ಭಾರತವನ್ನು ನಿಷೇಧಿಸಲಿದೆ ಎಂದು ಅವರು ಬೆದರಿಸಿದ್ದರು. 2024ರಲ್ಲಿ ಭಾರತವನ್ನು ಗಾಝಾ ಮತ್ತು ಮ್ಯಾನ್ಮಾರ್‌ನೊಂದಿಗೆ ಸಮೀಕರಿಸಿದ್ದ ಖಮೇನಿ, ಮ್ಯಾನ್ಮಾರ್, ಗಾಝಾ ಮತ್ತು ಭಾರತದಲ್ಲಿ ಮುಸ್ಲಿಮರನ್ನು ಶೋಷಿಸಲಾಗುತ್ತಿದೆ ಎಂದಿದ್ದರು. ಭಾರತವು ಇದನ್ನು ತನ್ನ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಎಂದು ಬಣ್ಣಿಸಿ ಇಂತಹ ಅಪಪ್ರಚಾರವು ಸ್ವೀಕಾರಾರ್ಹವಲ್ಲ ಎಂದು ಪ್ರತಿಕ್ರಿಯಿಸಿತ್ತು.

ವಿವಾದವೆಂಬುದು ಖಮೇನಿಗೆ ಹೊಸದೇನೂ ಅಲ್ಲ, 2015ರಲ್ಲಿ ಅವರು ಸೌದಿ ಅರೇಬಿಯಾ ಜನಾಂಗ ನಾಶದಲ್ಲಿ ತೊಡಗಿದೆ ಎಂದು ಆರೋಪಿಸಿದ್ದರು. ಇದು ಸೌದಿಗೆ ರೋಷ ಬರಿಸಿತ್ತು. ಅದೇ ಖಮೇನಿಯವರು ಇಸ್ರೇಲ್ ಮತ್ತು ಅಮೆರಿಕಗಳ ನಾಶಕ್ಕೂ ಆಗಾಗ ಕರೆ ಕೊಟ್ಟಿದ್ದರು. ಟ್ರಂಪ್‌ರನ್ನು ಹತ್ಯೆ ಮಾಡುವಂತೆಯೂ ಕರೆ ನೀಡಿದ್ದರು. ಖಮೇನಿ ಹತ್ಯೆಯಾದಾಗ ಸಂತಾಪ ಸೂಚಿಸದಿರುವುದು ಭಾರತವಷ್ಟೇ ಅಲ್ಲ, ಹಲವಾರು ರಾಷ್ಟ್ರಗಳು ಸಂತಾಪ ಸೂಚಿಸದೆ ಉಳಿದಿವೆ. ಜಿ-7 ರಾಷ್ಟ್ರಗಳು, ಯುಎಇ, ಸೌದಿ ಅರೇಬಿಯಾ, ಈಜಿಪ್ಟ್, ಬಹ್ರೇನ್, ಮೊರಾಕ್ಕೊ ಮತ್ತು ಇಂಡೋನೇಷಿಯಾ ಸೇರಿದಂತೆ ಹಲವಾರು ಇಸ್ಲಾಮಿಕ್ ದೇಶಗಳು ಸಂತಾಪ ಸೂಚಿಸಲಿಲ್ಲ, ಹಲವಾರು ಪ್ರಚೋದನಾ ಹೇಳಿಕೆಗಳ ಹೊರತಾಗಿಯೂ ಭಾರತ ಸರಕಾರವು ಇರಾನ್‌ನೊಂದಿಗೆ ಸೌಹಾರ್ದ ಸಂಬಂಧವನ್ನೇ ಕಾಯ್ದುಕೊಂಡು ಬಂದಿತ್ತು. ಇರಾನಿನ ಅಧ್ಯಕ್ಷ ಇಬ್ರಾಹಿಂ ರೈಸಿ ಹೆಲಿಕಾಪ್ಟರ್ ದುರಂತದಲ್ಲಿ ಮೃತಪಟ್ಟಾಗ ಭಾರತವು ಒಂದು ದಿನದ ಶೋಕಾಚರಣೆ ಘೋಷಿಸಿತ್ತು. ಹಾಗಾಗಿ ಭಾರತ ಸರಕಾರವು ತನ್ನ ಪರಂಪರೆಯನ್ನು ಮುರಿದಿದೆ ಎಂಬ ಸೋನಿಯಾ ಅವರ ಟೀಕೆಗೆ ಆಧಾರವಿಲ್ಲ, ಹೆಚ್ಚೆಂದರೆ ಅವರ ಲೇಖನವು ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತ ಓಲೈಕೆ ರಾಜಕಾರಣದ ಚಾಳಿಯನ್ನು ಮತ್ತೊಮ್ಮೆ ಬಹಿರಂಗಗೊಳಿಸಿದೆಯಷ್ಟೆ.

ಪತ್ರ ಮಿತ್ರ

## ನಾಯಕತ್ವ ಗುಣ ಹೀಗಿದ್ದರೇ ಚೆನ್ನ

ತಂಡವೊಂದರ ನಾಯಕ ಅನಿಸಿಕೊಂಡವನಿಗೆ ತನ್ನ ತಂಡದ ಸದಸ್ಯರೆಲ್ಲರಲ್ಲಿ ಹುದುಗಿರುವ ಶಕ್ತಿಯ ಪರಿಚಯ ಇರಲೇ ಬೇಕು. ಒಬ್ಬಾತ ಕೆಲವೊಮ್ಮೆ ಪರಿಸ್ಥಿತಿಯ ಒತ್ತಡ ಅಥವಾ ಇನ್ನಾವುದೋ ಕಾರಣಗಳಿಂದ ನಾಯಕ ನಿರೀಕ್ಷಿಸಿದ ಫಲಿತಾಂಶ ನೀಡಲು ಶಕ್ಯನಾಗದೇ ಇರಲೂಬಹುದು. ಹಾಗೆಂತ, ಆ ವ್ಯಕ್ತಿಯ ಶಕ್ತಿಯೇ ಕುಂದಿ ಹೋಗಿದೆ ಅಂದುಕೊಂಡು, ಅವಕಾಶಗಳನ್ನೇ ಕಲ್ಪಿಸದೇ ಇದ್ದರೆ, ಬಹು ದೊಡ್ಡ ನಷ್ಟ ಆಗುವ ಸಾಧ್ಯತೆಗಳೇ ಹೆಚ್ಚು.

ಈ ಮಾತಿಗೆ ತಾಜಾ ಉದಾಹರಣೆ ಕ್ರಿಕೆಟಿಗ ಅಭಿಷೇಕ್ ಶರ್ಮಾ. ಟಿ20 ವಿಶ್ವಕಪ್‌ನ ಕೆಲ ಪಂದ್ಯಗಳಲ್ಲಿ ಅತ್ಯಂತ ಕಳಪೆ ಪ್ರದರ್ಶನ ನೀಡಿದ್ದರಿಂದ ತಂಡದಲ್ಲಿ ಆತ ತನ್ನ ಸ್ಥಾನವನ್ನೇ ಕಳೆದುಕೊಂಡುಬಿಟ್ಟ ಅಂದವರೇ ಹೆಚ್ಚು. ಫೈನಲ್‌ನ ಮುನ್ನಾ ದಿನದ "ಸಂಭಾವ್ಯರ" ಪಟ್ಟಿಯಲ್ಲೂ ಆತನ ಹೆಸರು ಇದ್ದಿರಲಿಲ್ಲ, ಆದರೂ ನಾಯಕ ಸೂರ್ಯಕುಮಾರ್‌ಗೆ ಅಭಿಷೇಕ್ ಮೇಲಿನ ವಿಶ್ವಾಸ ಕುಂದಿರದಿದ್ದ ಕಾರಣ, ಅಂತಿಮ ಪಂದ್ಯದಲ್ಲೂ ಅವಕಾಶ ಕೊಟ್ಟ ಪರಿಣಾಮವನ್ನು ನಾವೆಲ್ಲ ಕಂಡಿದ್ದೇವೆ. ಕೇವಲ 21 ಎಸೆತಗಳಲ್ಲಿ 52 ರನ್ ಗಳಿಸಿ, ತಂಡದ ಗೆಲುವಿಗೆ ಸಹಕಾರಿಯಾಗಿದ್ದನ್ನು ಯಾರೂ ಮರೆಯಲಾರರು. ಅಭಿಷೇಕ್‌ನ ಹಿಂದಿನ ವೈಫಲ್ಯವನ್ನೇ ಮುಖ್ಯವಾಗಿರಿಸಿಕೊಳ್ಳದೆ, ಆತನಲ್ಲೂ ಆತ್ಮ ವಿಶ್ವಾಸ ಹೆಚ್ಚಿಸುವ ಕೆಲಸ ಮಾಡಿ, ಮತ್ತೆ ಅವಕಾಶ ಕೊಟ್ಟಿದ್ದು ನಾಯಕನ ಗುಣ.

ಇದು ನಮ್ಮ ಮನೆಗಳಲ್ಲೂ ನಿಜ. ಯಜಮಾನ ಎಂದುಕೊಂಡವ ತನ್ನ ಕುಟುಂಬದ ಸದಸ್ಯರೆಲ್ಲರ ಗುಣ, ಅವರಲ್ಲಿರುವ ವಿಶೇಷ ಅಭಿರುಚಿ, ಹಾಗೂ ಇವೆಲ್ಲವುಗಳ ಸಂಪೂರ್ಣ ಪರಿಚಯ ಉಳ್ಳವನಾದಾಗ, ಕುಟುಂಬದ ಸಣ್ಣ- ಪುಟ್ಟ ಅಡೆತಡೆಗಳನ್ನು ಅತ್ಯಂತ ಸರಳವಾಗಿ ನಿಭಾಯಿಸಿಕೊಂಡು ಹೋಗಬಹುದು.

ಈ ಗುಣ, ರಾಜಕಾರಣದಲ್ಲಂತೂ ಸದಾ ಕೆಲಸ ಮಾಡುವಂತಹುದು. ಕೆಲವು ಮುಖಂಡರು ಎಷ್ಟೇ ಬುದ್ಧಿಮತ್ತೆ, ಜ್ಞಾನ, ತಿಳುವಳಿಕೆ ಇದ್ದರೂ, ಕೆಲವೊಮ್ಮೆ ಪರಿಸ್ಥಿತಿಯ ಒತ್ತಡದಿಂದಾಗಿ ಅತ್ಯಂತ ನೇರ, ನಿಷ್ಠುರ ಮಾತುಗಳಿಂದ ತನ್ನ ಪಕ್ಷಕ್ಕೇ ಮುಜುಗರ ತಂದೊಡ್ಡುತ್ತಾರೆ. ಹಾಗೆಂತ ಅವರನ್ನು ತಕ್ಷಣ ಮೂಲೆಗುಂಪು ಮಾಡುವುದು ಸರಿಯೆನಿಸದು. ತಪ್ಪು ಸಂಭವಿಸಿದೆ ಅಥವಾ ಸಂಭವಿಸಲಿದೆ ಎಂಬುದು ತಿಳಿದಾಕ್ಷಣ, ಹತ್ತಿರ ಕರೆದು ತಿಳಿಹೇಳುವ ಪ್ರಯತ್ನ ಮಾಡಬೇಕು. ಇಲ್ಲೂ ಪಕ್ಷದ ಅಧ್ಯಕ್ಷ ಅಥವಾ ಮುಖ್ಯಮಂತ್ರಿಯೋ ಅಥವಾ ಪ್ರಧಾನಿಯೋ, ಮಾತಲ್ಲಿ ಹಿಡಿತ ತಪ್ಪುತ್ತಿದ್ದವರನ್ನು ತಮ್ಮ ಹಿಡಿತಕ್ಕೆ ತಂದು ಅವರನ್ನು ಸುಧಾರಿಸಿದಲ್ಲಿ ಎಲ್ಲವೂ ಸರಿಯಾಗಿ ನಡೆದೀತು. ನಿರ್ಲಕ್ಷ್ಯಕ್ಕೆ ಒಳಗಾದ ವ್ಯಕ್ತಿಗೂ, ಮುಂದೊಂದು ದಿನ ಮತ್ತೆ ಅವಕಾಶ ಕೊಡುವ ಸಂದರ್ಭ ಬರಲೂ ಬಹುದು ಎಂಬುದೂ ಗೋಚರವಾಗುತ್ತಿದೆ. ಹೀಗಾಗಿ, ಗುಂಪಿನ ನಾಯಕ ಅತ್ಯಂತ ಕಾಳಜಿಯಿಂದ ವ್ಯವಹರಿಸಲೇ ಬೇಕು. ಇದೇ ಅಲ್ಲವೇ ನಾಯಕತ್ವ ? ಇಲ್ಲವೆಂದರೆ ಯಾರು ಬೇಕಾದರೂ ನಾಯಕರಾಗಬಹುದಿತ್ತು.

ಈ ವರ್ಷದ ಕ್ರಿಕೆಟ್ ಮತ್ತು ಕೆಲ ರಾಜಕೀಯ ಬೆಳವಣಿಗೆಗಳು ಒಬ್ಬ ನಾಯಕ ಹೇಗಿದ್ದರೆ ಚೆನ್ನ ಎಂಬುದನ್ನು ಸ್ಪಷ್ಟಪಡಿಸಿದಂತಿದೆ !

**-ಶಂಕರನಾರಾಯಣ ಭಟ್**, ಮಾದಗೇರಿ

## ಡೇಟಾ ಸೆಂಟರ್‌ಗಳ ಸ್ಥಾಪನೆಗೆ ಹಿಂಜರಿಕೆ ಬೇಕಿಲ್ಲ

ಇತ್ತೀಚೆಗೆ ವಿಧಾನ ಸಭೆಯ ಕಲಾಪದಲ್ಲಿ ಮಾತನಾಡಿದ ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆಯವರು ಪ್ರಮುಖ ಎಐ ಸಂಸ್ಥೆಯಾದ ಚಾಟ್‌ಜಿಪಿಟಿಯಲ್ಲಿ ಐದು ಪ್ರಶ್ನೆ ಕೇಳಿದರೆ ಸುಮಾರು ಅರ್ಧ ಲೀಟರ್ ನೀರಿನ ಬಳಕೆಯಾಗುತ್ತದೆ ಎಂದು ಹೇಳಿದರು. ಚಾಟ್ ಜಿಪಿಟಿಯಲ್ಲಿ ಪ್ರಶ್ನೆ ಕೇಳುವುದು ಸುಲಭ. ಆದರ ಹಿಂದೆ ಇಂಥದೊಂದು ಗಂಭೀರ ನೀರಿನ ಸಮಸ್ಯೆ ಇದೆಯೆಂದು ಗೊತ್ತಿರಲಿಲ್ಲ, ಆದರೆ ಸಚಿವರು ಡೇಟಾ ಸೆಂಟರ್‌ಗಳ ಬಳಕೆಗೆ ನೀರು ಮತ್ತು ಇಂಧನ ಬಳಕೆಯಾಗುತ್ತದೆಯೆಂಬುದರ ಬಗ್ಗೆ ವಿವರಣೆ ನೀಡುವಾಗ ಐದು ಪ್ರಶ್ನೆಗಳಿಗೆ ಅರ್ಧ ಲೀಟರ್ ನೀರಿನ ಬಳಕೆಯಾಗುತ್ತದೆ ಎಂಬುದು ತೀರಾ ಉತ್ಪ್ರೇಕ್ಷೆಯ ಮಾತೆನ್ನಿಸಿತು.

ಈ ಬಗ್ಗೆ ಚಾಟ್‌ಜಿಪಿಟಿಯನ್ನೇ ಪ್ರಶ್ನೆ ಮಾಡಿದಾಗ ಬಂದ ಉತ್ತರ, ಚಾಟ್‌ಜಿಪಿಟಿಯು ಪ್ರಶ್ನೆಗೆ ಉತ್ತರ ನೀಡುವಾಗ ಬಳಕೆಯಾಗುವ ನೀರಿನ ಮೊತ್ತ 0.000085 ಗ್ಯಾಲನ್, ಅಂದರೆ ಒಂದು ಸಣ್ಣ ಚಮಚದ 15 ನೇಯ ಒಂದು ಭಾಗ! ಇದು ಎಐನ ಸಂಕೀರ್ಣತೆಯ ಮೇಲೂ ಅವಲಂಬಿತವಾಗಿದೆ. ಇದು ಯೂಟ್ಯೂಬ್‌ನ ಒಂದು ವಿಡಿಯೋ ನೋಡಲು ಬಳಕೆಯಾಗುವ ನೀರು ಹಾಗೂ ಇಂಧನದ ನೂರಾರು ಪಟ್ಟು ಕಡಿಮೆ! ಆದರೂ ದೊಡ್ಡ ಪ್ರಮಾಣದಲ್ಲಿ ಡೇಟಾ ಸೆಂಟರ್‌ಗಳನ್ನು ಸ್ಥಾಪಿಸಿದಾಗ ಬಿಲಿಯನ್ ಲೀಟರ್ ಗಟ್ಟಲೆ ನೀರು ಬೇಕಾಗುತ್ತದೆ. ಅದಕ್ಕಾಗಿಯೇ ಅದನ್ನು ತಂಪು ಪ್ರದೇಶದಲ್ಲಿ ಡೇಟಾಸೆಂಟರ್‌ಗಳನ್ನು ಸ್ಥಾಪಿಸಬೇಕಾಗುತ್ತದೆ. ಅಲ್ಲದೆ ಕೂಲಿಂಗ್ ಪರ್ಯಾಯಗಳಾದ ಏರ್ ಕೂಲಿಂಗ್ ಹಾಗೂ ನೀರಿನ ಮರುಬಳಕೆಯಿಂದ ನೀರಿನ ಉಳಿತಾಯ ಮಾಡಬಹುದಾಗಿದೆ.

ಜಗತ್ತು ಈಗ ಕೃತಕ ಬುದ್ಧಿಮತ್ತೆಯತ್ತ ಹೊರಟಿದೆ ಎಂಬುದೇನೋ ನಿಜ. ಈಗಾಗಲೇ ಖಾಸಗಿ ಡೇಟಾಸೆಂಟರ್‌ಗಳು ಸಾಕಷ್ಟು ಇವೆ. ಸರ್ಕಾರದ ವತಿಯಿಂದ ಇವುಗಳ ಸ್ಥಾಪನೆ ಮಾಡಬೇಕಾದರೆ ಡೇಟಾಸೆಂಟರ್‌ಗಳಿಗೆ ವ್ಯಾಪಕ ಭೂಮಿ, ನೀರು, ಇಂಧನ ಬೇಕು. ಅವುಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯ. ಡೇಟಾಸೆಂಟರ್‌ಗಳಿಂದ ಯುವ ಸಮೂಹಕ್ಕೆ ಹೊಸ ಉದ್ಯೋಗಾವಕಾಶಗಳು ಸಿಗುತ್ತವೆ. ಜಾಗತಿಕ ಮಟ್ಟದಲ್ಲಿ ಕರ್ನಾಟಕವನ್ನು ನೋಡುವ ದೃಷ್ಟಿಯೇ ಬದಲಾಗುತ್ತದೆ. ಆದರೆ ಸಚಿವರು ಡೇಟಾಸೆಂಟರ್‌ಗಳ ಸ್ಥಾಪನೆಗೆ ನೀರು, ಇಂಧನದಂಥ ಮೂಲಭೂತ ಬೇಡಿಕೆಗಳ ನೆಪವೊಡ್ಡಿ ನಕಾರಾತ್ಮಕತೆ ಹರಡುವುದು ಸಲ್ಲದು.

ವಿದ್ಯುತ್ತನ್ನು ಅಯೋಗ್ಯರಿಗೆ ಉಚಿತವಾಗಿ ನೀಡಲಾಗುತ್ತಿದೆ, ವಿದ್ಯುತ್ ಕಳ್ಳತನವಾಗುತ್ತಿದೆ, ನೀರನ್ನು ಪೋಲು ಮಾಡಲಾಗುತ್ತಿದೆ, ಉಳ್ಳವರು, ಭ್ರಷ್ಟ ರಾಜಕಾರಣಿಗಳು ಸಾವಿರಾರು ಎಕರೆ ಪ್ರದೇಶವನ್ನು ತಮ್ಮ ಹೆಸರಿಗೆ ಬರೆಸಿಕೊಂಡು ಮೆರೆಯುತ್ತಿದ್ದಾರೆ. ಸಚಿವರಿಗೆ ಪ್ರಾಮಾಣಿಕ ಕಾಳಜಿ ಇದ್ದರೆ ಇವೆಲ್ಲವನ್ನೂ ತಡೆದು ರಾಜ್ಯದಲ್ಲಿ ಡೇಟಾಸೆಂಟರ್‌ಗಳನ್ನು ಸ್ಥಾಪಿಸಿ ರಾಜ್ಯದ ಹಿತವನ್ನು ಕಾಪಾಡಬಹುದಾಗಿದೆ.

**-ಉಮೇಶ ಬೆಳಕೂಡ**, ಮೂಡಲಗಿ

(ಲೇಖನಗಳನ್ನು ಕಳಿಸುವವರು ಮತ್ತು ಪತ್ರಮಿತ್ರಕ್ಕೆ ಬರೆಯುವವರು hosavishesha@gmail.com ಕ್ಕೆ ಮೇಲ್ ಮಾಡಿ)

## ಕಿರುಸುದ್ದಿ

### ಏ.15ರಂದು ಕಾನ್ಶಿರಾಮ್ ಜಯಂತಿ ಆಚರಣೆ

### ನರ್ಸರಿ ತರಗತಿಗೆ ಆಹ್ವಾನ

### ಹೊಸದಾಗಿ 441 ಶೌಚಾಲಯ ನಿರ್ಮಾಣ

### ಡಿವೈಎಸ್‌ಪಿ ಚಲುವರಾಜುಗೆ ಮಾತೃ ವಿಯೋಗ



ಹಾರೋಹಳ್ಳಿ ನಾಗರಿಕರಿಂದ ತೀವ್ರ ವಿರೋಧ | ಕಂದಾಯ ಸಚಿವರಿಗೆ ಪತ್ರ ಬರೆದರೂ ಕ್ರಮವಿಲ್ಲ

# ವಾಸ್ತು ನೆಪದಲ್ಲಿ ತಾಲೂಕು ಕಚೇರಿ ಸ್ಥಳಾಂತರ

▸ ಕಿರಣ್ ಹಾರೋಹಳ್ಳಿ

• ಹಾರೋಹಳ್ಳಿ: ವಾಸ್ತು ಸಮಸ್ಯೆ ಎಂದು ನೆಪ ಹೇಳಿಕೊಂಡು ತರಾತುರಿಯಲ್ಲಿ ಹಾರೋಹಳ್ಳಿ ತಾಲೂಕು ಕಚೇರಿ ಸ್ಥಳಾಂತರ ಮಾಡಲು ಇಲ್ಲಿನ ಅಧಿಕಾರಿಗಳು ಮುಂದಾಗಿದ್ದಾರೆ. ಅಧಿಕಾರಿಗಳ ಕ್ರಮದ ವಿರುದ್ಧ ಸಾರ್ವಜನಿಕರು ಕಿಡಿಕಾರಿದ್ದಾರೆ.

ಹಾರೋಹಳ್ಳಿ ಅಧಿಕೃತ ತಾಲೂಕಾಗಿ ಐದು ವರ್ಷಗಳೇ ಕಳೆದಿದೆ. ಇದೀಗಷ್ಟೇ ತಾಲೂಕು ಕಚೇರಿ ಕಟ್ಟಡ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ.

ಹಾರೋಹಳ್ಳಿ ತಾಲೂಕು ತಾಲೂಕಾಗಿ ಮೇಲ್ದರ್ಜೆಗೇರಿದ ಬಳಿಕ ಮೂವರು ತಹಸೀಲ್ದಾರ್ ಅವರು ಅಧಿಕಾರ ನಡೆಸಿದ್ದಾರೆ.



ದಿಗಂತ ವಿಶೇಷ

“ಭೂ ಮಾಫಿಯಾ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡಲು ಹುನ್ನಾರ ಮಾಡುತ್ತಿದ್ದಾರೆ. ಈಗಿನ ತಾಲೂಕು ಕಚೇರಿ ದಂಡಾಧಿಕಾರಿಗಳು ಪಾರದರ್ಶಕ ಆಡಳಿತವನ್ನು ಮಾಡದೆ ಇಂತಹ ನಿರ್ಧಾರವನ್ನು ತೆಗೆದುಕೊಂಡಿರುವುದು ಸರಿಯಲ್ಲ.

■ ಚೀಲೂರು ಹರೀಶ್, ಜಿಲ್ಲಾಧ್ಯಕ್ಷ, ಯುವ ಘಟಕ ರಾಜ್ಯ ರೈತ ಸಂಘ

“ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸದೇ ಕಚೇರಿ ಸ್ಥಳಾಂತರಿಸುವ ನಿರ್ಧಾರ ಕೈಗೊಂಡಿರುವುದರ ಹಿಂದೆ ಯಾರ ಕೈವಾಡ ಇದೆ. ಇದಕ್ಕೆ ಜಿಲ್ಲಾಡಳಿತ ಅವಕಾಶ ನೀಡದೆ ಕ್ರಮವಹಿಸಬೇಕಿದೆ.

■ ಜ್ಞಾನೇಶ್, ವಕೀಲರು ಮತ್ತು ಸಾಮಾಜಿಕ ಕಾರ್ಯಕರ್ತ

“ಸಾರ್ವಜನಿಕರಿಗೆ ಎಲ್ಲಾ ರೀತಿಯ ವ್ಯವಸ್ಥೆ ಕಲ್ಪಿಸಲಾಗುವುದು. ಈ ಬಗ್ಗೆ ಯಾವುದೇ ಸಂದೇಹಗಳಿದ್ದರೂ ಸಂಪರ್ಕಿಸಬಹುದು ಇದರಲ್ಲಿ ಯಾವುದೇ ಮೌಲ್ಯವಿಲ್ಲ, ಸಾರ್ವಜನಿಕರು ಸಹಕರಿಸಬೇಕು. ನಾವಿರುವುದೇ ಸಾರ್ವಜನಿಕರ ಸೇವೆ ಮಾಡಲಾಗುವುದು.

■ ಹರ್ಷವರ್ಧನ್, ತಹಸೀಲ್ದಾರ್, ಹಾರೋಹಳ್ಳಿ ತಾಲೂಕು.

ನಂದಗುಡಿ ಬಳಿ ಕಾಡಿನಿಂದ ಹೊರಬಂದ ನವಿಲು

## ನಿತ್ರಾಣವಾಗಿದ್ದ ನವಿಲು ರಕ್ಷಣೆ!



ವಸಂತಿ ವೇಣುಗೋಪಾಲ್ ಆಂಗ್ಲ ಶಾಲೆಯಲ್ಲಿ ಕಾರ್ಯಕ್ರಮ

## ವಿದ್ಯಾರ್ಥಿಗಳು ದುಶ್ಚಟಕ್ಕೆ ಬಲಿಯಾಗಬೇಡಿ



## ಗೃಹಬಳಕೆ ವಿದ್ಯುತ್ ವಾಣಿಜ್ಯಕ್ಕಿಲ್ಲ



ದುಬಾರಿ ತೆರಿಗೆ ಬೆಸ್ಕಾಂನಿಂದ ಕ್ರಮ

ಸಿದ್ದನಪಾಳ್ಯ ಗ್ರಾಮ ಮುಖ್ಯ ರಸ್ತೆ ಕಾಮಗಾರಿಗೆ ಚಾಲನೆ

## ಕೈಗಾರಿಕಾ ಪ್ರದೇಶಾಭಿವೃದ್ಧಿಗೆ ಬದ್ಧ



ಸಚಿವರ ಜತೆ ಆರ್ಥಿಕ ತಜ್ಞ ಡಾ.ಎಂ. ಆರ್. ರಂಗನಾಥ ಮಾತುಕತೆ

## ಸೋಲಾರ್ ವಿದ್ಯುತ್ ಉತ್ಪಾದನೆಗೆ ಯೋಜನೆ



ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗಿ | ಪಾನಕ, ಮಜ್ಜಿಗೆ ವಿತರಣೆ

## ದೇವರಹೊಸಹಳ್ಳಿ ವೀರಭದ್ರೇಶ್ವರ ರಥೋತ್ಸವ



## ಕಿರುಸುದ್ದಿ

### ಪಂಡಿತ್ ಶ್ರೀನಿವಾಸನ್ ಸ್ವಾಮಿಗಳು ಬೆಳ್ಳಾವಿ ನಿಧನ



• **ಬೆಂಗಳೂರು:** ಯುಗಪುರುಷ, ಸದ್ಗುರು, ಪರಮಪೂಜ್ಯ ಶ್ರೀ ಪಂಡಿತ್ ಶ್ರೀನಿವಾಸನ್ ಸ್ವಾಮಿಗಳು ಬೆಳ್ಳಾವಿ ಗುರುವಾರ ಸಂಜೆ ಶಿವ ಸಾಯುಜ್ಯ ಹೊಂದಿದ್ದಾರೆ. ಶ್ರೀಗಳ ಅಂತಿಮ ವಿಧಿ ವಿಧಾನ ಹಾಗೂ ಅಂತ್ಯಕ್ರಿಯೆ ಮಧುಗಿರಿ ತಾಲೂಕು ತೋಗರಿಘೊಂಡನಹಳ್ಳಿ ಸಾಮ್ರಾಜ್ಯ ಲಕ್ಷ್ಮೀ ಮಹಾಸಂಸ್ಥಾನದಲ್ಲಿ ಶುಕ್ರವಾರ (ಮಾ.13) ನೆರವೇರಲಿದೆ ಎಂದು ಮಠದ ಪ್ರಕಟಣೆ ತಿಳಿಸಿದೆ.

### ತಾತ್ಕಾಲಿಕವಾಗಿ ಮುಷ್ಕರ ವಾಪಸ್: ನಂದೀಶ್

• **ಕೋಲಾರ:** ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ'ಅನಿರ್ದಿಷ್ಟಾವಧಿ ಮುಷ್ಕರವನ್ನು 'ಇಂದು ವಾಪಸ್ ಪಡೆದಿರುವುದಾಗಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಸಂಘದ ಜಿಲ್ಲಾಧ್ಯಕ್ಷ ಎಸ್.ನಂದೀಶ್ ಕುಮಾರ್ ತಿಳಿಸಿದರು. ನಗರದ ಎಸ್.ಎನ್.ಆರ್. ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಮಾಧ್ಯಮದವರೊಂದಿಗೆ ಅವರು ಮಾತನಾಡಿ, ಮಾ.15ವರೆಗೆ ಮೊದಲ ಹಂತದ ಮುಷ್ಕರದಲ್ಲಿ ತುರ್ತು ಸೇವೆಗಳ ಹೊರತು ಪಡಿಸಿ ಹೊರ ರೋಗಿಗಳ ಸೇವೆಯನ್ನು ಕೈಬಿಟ್ಟು ಮುಷ್ಕರ ನಡೆಸಲು ತೀರ್ಮಾನಿಸಲಾಗಿತ್ತು ಎಂದು ತಿಳಿಸಿದ್ದಾರೆ. ಮಾ.16 ರಿಂದ ವೈದ್ಯರು ಮತ್ತು ಅಧಿಕಾರಿಗಳು ಮತ್ತು ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೆ ಕರ್ತವ್ಯದಿಂದ ದೂರವಿರುತ್ತಾರೆ ಎಂದು ಪತ್ರಿಕಾ ಗೋಷ್ಠಿ ಮೂಲಕ ಹೇಳಿಕೆ ನೀಡಲಾಗಿತ್ತು ಆದರೆ ಮುಷ್ಕರದ ಕರೆಗೆ ಸ್ಪಂದಿಸಿರುವ ಸರ್ಕಾರ ರಾಜ್ಯ ಮಟ್ಟದ ಸಂಘದ ಸದಸ್ಯರೊಂದಿಗೆ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ದಿನೇಶ್ ಗುಂಡುರಾವ್ ಅವರುಗಳು ನಡೆಸಿದ ಮಾತುಕತೆಯಲ್ಲಿ ವೈದ್ಯರ ಸಂಘದ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದರು. ಸಂಘದ ಜಿಲ್ಲಾಧ್ಯಕ್ಷ ಡಾ. ರಮೇಶ್ ಸಿ.ಜೆ. ಮಾತನಾಡಿ, ನಮ್ಮ 14 ಬೇಡಿಕೆಗಳ ಪೈಕಿ 13 ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಸರ್ಕಾರವು ಸಮ್ಮತಿಸಿದೆ. ಇಲಾಖೆಯಲ್ಲಿ ಹೆಚ್ಚುವರಿ ಕಾರ್ಯದರ್ಶಿ ಹುದ್ದೆಯನ್ನು ಸೃಷ್ಟಿಸಲು ಸರ್ಕಾರ ಸಮ್ಮತಿಸಿದೆಂದರು.

ವಿಸ್ಮಯಕಾರಿಯಾದ ಬಲಿ ಬೀಳುವ ಗುಡ್ಡಪ್ಪನ ಪ್ರಸಂಗ | ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗಿ ನಿರೀಕ್ಷೆ

# ಹೊಸಕನ್ನಂಬಾಡಿಯಲ್ಲಿ ಹಿರಿದೇವಮ್ಮ ಜಾತ್ರೆ

▸ ಎಚ್.ಕೃಷ್ಣೇಗೌಡ ಪಾಂಡವಪುರ

• **ಪಾಂಡವಪುರ:** ಇಲ್ಲೊಂದು ಪವಾಡ ಹಾಗೂ ವಿಸ್ಮಯ ನಡೆಯುತ್ತದೆ. ಅದೇನೆಂದರೆ ದೇವಸ್ಥಾನದ ದೇವರ ಗುಡ್ಡಪ್ಪ ಬೆಳಗಿನ ಜಾವ ಸತ್ತು ಸುಮಾರು 2 ಗಂಟೆ ಕಳೆದ ಬಳಿಕ ಬೆಳಗ್ಗೆ ಆತ ಮರುಜೀವ ಪಡೆಯುವ ಪವಾಡ ಸದೃಶ್ಯವದು.

ಹೌದು, ಈ ರೀತಿ ಪವಾಡ ಹಾಗೂ ವಿಸ್ಮಯ ಬೇರೆಲ್ಲೂ ನಡೆಯುವುದಿಲ್ಲ, ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಹೊಸ ಕನ್ನಂಬಾಡಿ ಗ್ರಾಮದಲ್ಲಿ ಮಾ.14 ಮತ್ತು ಮಾ.15ರಂದು ನಡೆಯಲಿರುವ ಶ್ರೀ ಹಿರಿದೇವಮ್ಮ ಮತ್ತು ಶ್ರೀ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವದಲ್ಲಿ ಈ ವಿಸ್ಮಯ ನಡೆಯುತ್ತದೆ. ಮಾ.15ರ ಭಾನುವಾರ ಬೆಳಗಿನ ಜಾವ ದೇವರಿಗೆ ಕುರಿ ಬಲಿ ಕೊಡುತ್ತಾರೆ. ಆ ವೇಳೆ ದೇವರ ಗುಡ್ಡಪ್ಪ ಸಾವನ್ನಪ್ಪುತ್ತಾನೆ (ಗುಡ್ಡಪ್ಪನ ಉಸಿರು ನಿಂತಿರುತ್ತದೆ). ನಂತರ ಆ ಮನುಷ್ಯನ ನಾಡಿ ಪರೀಕ್ಷೆ ಮತ್ತು ಹೃದಯ ಬಡಿತವನ್ನು ವೈದ್ಯರಿಂದ ಪರೀಕ್ಷೆ ಮಾಡಲಾಗುತ್ತದೆ. ಆತ ಆಗ ಸತ್ತಿರುತ್ತಾನೆ (ಒಂದಿಷ್ಟು ಉಸಿರಾಟವಾಡುವುದಿಲ್ಲ).

ದೇವರ ಗುಡ್ಡಪ್ಪ ಸತ್ತ ಸಂದರ್ಭದಲ್ಲಿ ಎಣ್ಣೆಯಲ್ಲಿ ದೀಪ ಉರಿಯುತ್ತಿರುತ್ತದೆ. ಬಳಿಕ ದೇವರ ಗುಡ್ಡಪ್ಪನನ್ನು ಬಿಳಿ ಪಂಚೆಯಲ್ಲಿ ಕಟ್ಟಿಕೊಂಡು ಆಯುತ್ತಾ ಗ್ರಾಮದ ಹೊರವಲಯದಲ್ಲಿರುವ ಬಲಿ ಕಲ್ಲು ಬಳಿ ಮಲಗಿಸುತ್ತಾರೆ. ನಂತರ ಎದೆಯ ಮೇಲೆ ಅಕ್ಕಿ, ಹೂ ಹಾಕುತ್ತಾರೆ. ಸೂರ್ಯೋದಯದ ಸಮಯದಲ್ಲಿ ದೇಹದ ಮೇಲೆ ಹೂ, ನಿಂಬೆಹಣ್ಣು ಹಾಕಿದಾಗ ನಿಂಬೆಹಣ್ಣು ಸಿಡಿಯುತ್ತದೆ. ಆಗ ಆತನಿಗೆ ಪ್ರಜ್ಞೆ ಬರುತ್ತದೆ. ಪ್ರಜ್ಞೆ ಬರುವ ಸಮಯಕ್ಕೆ ಸರಿಯಾಗಿ ಸೂರ್ಯೋದಯವಾಗುತ್ತದೆ.



**ವಿಜೃಂಭಣೆಯ ಜಾತ್ರೆ:** ತಾಲೂಕಿನ ಹೊಸ ಕನ್ನಂಬಾಡಿ ಗ್ರಾಮದಲ್ಲಿ ಮಾ.14 ಮತ್ತು ಮಾ.15ರಂದು ಶ್ರೀ ಹಿರಿದೇವಮ್ಮ ಮತ್ತು ಶ್ರೀ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವ ಬಹಳ ವಿಜೃಂಭಣೆಯಿಂದ ನಡೆಯಲಿದೆ.

ಗ್ರಾಮದಲ್ಲಿ 15 ದಿನಗಳಿಂದ ಬಹಳ ನಿಷ್ಠೆ, ಭಕ್ತಿ ಭಾವದಿಂದ ಈ ಹಬ್ಬವನ್ನು ಪ್ರತಿವರ್ಷ ಆಚರಣೆ ಮಾಡಿಕೊಂಡು ಬಂದಿದ್ದಾರೆ. ಹಿರಿದೇವಮ್ಮ ಮತ್ತು ಚೌಡೇಶ್ವರಿ ದೇವಿಯ ಹಬ್ಬ 15 ದಿನ ಇರುವಂತೆಯೇ ಗ್ರಾಮದಲ್ಲಿ ಬಹಳ ನಿಷ್ಠೆಯಿಂದ ಪ್ರತಿ ಮನೆಗಳಲ್ಲಿ ಒಗ್ಗರಣೆ ಹಾಕುವಂತಿಲ್ಲ, ಹಾಗೆಯೇ ಮಾಂಸಾಹಾರಿ ಮಾಡುವಂತಿಲ್ಲ, ಅಷ್ಟೇ ಭಕ್ತಿಯಿಂದ ಆಚರಿಸಿಕೊಂಡು ಬಂದಿದ್ದಾರೆ.

ಹಿರಿದೇವಮ್ಮ ಮತ್ತು ಚೌಡೇಶ್ವರಿ ದೇವಿಯ ಮೂರ್ತಿಯನ್ನು ಕಾವೇರಿ ನದಿಯ ತೀರದ ಹತ್ತಿರ ತೆಗೆದುಕೊಂಡು ಹೋಗಿ ಮೂರ್ತಿಯನ್ನು ನೀರಿನಲ್ಲಿ ಸ್ನಾನ ಮಾಡಿಸಿ ನಂತರ ಹೂವಿನಿಂದ ಅಲಂಕಾರಗೊಳಿಸಿ ಪಲ್ಲಕ್ಕಿ ಮೇಲೆ ಇಟ್ಟು ಮುತ್ತೈದೆಯರು ಸೇರಿದಂತೆ ಸಾವಿರಾರು ಭಕ್ತರು ಪಲ್ಲಕ್ಕಿಯಲ್ಲಿ ಹಿರಿದೇವಮ್ಮ ಮತ್ತು ಚೌಡೇಶ್ವರಿ ದೇವಿಯನ್ನು ಮೆರವಣಿಗೆ ಮೂಲಕ ತರುತ್ತಾರೆ. ನಂತರ ದೇವಸ್ಥಾನದಲ್ಲಿ ಹಿರಿದೇವಮ್ಮ ಮತ್ತು ಚೌಡೇಶ್ವರಿದೇವಿ ಮೂರ್ತಿಗಳನ್ನು ಇಟ್ಟು ಸಾವಿರಾರು ಭಕ್ತರು ಪೂಜೆ ಸಲ್ಲಿಸುವರು. ಹರಕೆ ಹೊತ್ತಿರುವ ಭಕ್ತರು ಬಾಯಿಬೀಗ ಹಾಕಿಕೊಂಡು ದೇವಿಗೆ ಪೂಜೆ ಸಲ್ಲಿಸಿ ತಮ್ಮ ಹರಕೆ ತೀರಿಸುತ್ತಾರೆ. ಸಾವಿರಾರು ಭಕ್ತರು ಭಕ್ತಿ ನಿಷ್ಠೆಯಿಂದ ಈ ಹಬ್ಬವನ್ನು ಆಚರಿಸಿ ಗ್ರಾಮ ದೇವತೆಗೆ ಪ್ರೀತಿಗೆ ಪಾತ್ರರಾಗುವರು.

ಹಿರಿಯರಿಂದ ಆಚರಣೆ ಮಾಡಿಕೊಂಡು ಬಂದಿರುವ ಹಬ್ಬವನ್ನು ಇಂದಿಗೂ ಪಾಲನೆ ಮಾಡಿಕೊಂಡು ಬಂದಿರುವುದು ಈ ಗ್ರಾಮ ದೇವತೆಯ ಹಬ್ಬದ ವಿಶೇಷವಾಗಿದೆ. ಹಾಗೆಯೇ ಇಲ್ಲಿ ಎಲ್ಲಾ ವರ್ಗದ ಜನತೆ ಗ್ರಾಮದಲ್ಲಿ ಒಗ್ಗಟ್ಟಿನಿಂದ ಆಚರಿಸುವುದು ಬೇರೆ ಗ್ರಾಮಗಳಿಗೆ ಮಾದರಿಯಾಗಿದೆ. ಹೊಸಕನ್ನಂಬಾಡಿ ಗ್ರಾಮದಲ್ಲಿ ಮಳೆ ಬರಲಿ, ಬರದೇ ಇರಲೀ ಪ್ರತಿ ವರ್ಷ ಈ ಗ್ರಾಮ ದೇವತೆ ಹಬ್ಬಕ್ಕೆ ಅಕ್ಕ-ಪಕ್ಕ ಗ್ರಾಮಸ್ಥರು ಬಂದು ಹಿರಿದೇವಮ್ಮ ಮತ್ತು ಚೌಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿ ಪ್ರೀತಿಗೆ ಪಾತ್ರರಾಗುತ್ತಾರೆ.

> "ಹಳೆ ಕನ್ನಂಬಾಡಿ ಇದ್ದಾಗಿನಿಂದ ಗ್ರಾಮದಲ್ಲಿ ಅನಾದಿಕಾಲದಿಂದಲೂ ಈ ಬಲಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಕೊರೊನಾ ವೇಳೆಯೂ ಹಬ್ಬ ಸ್ಥಗಿತಗೊಂಡಿಲ್ಲ, ಆವಾಗಲೂ ಸಾಂಕೇತಿಕವಾಗಿ ಬಲಿ ಹಬ್ಬ ಆಚರಿಸಲಾಗಿದೆ. ಹೊಸ ಕನ್ನಂಬಾಡಿ ಪ್ರವಾಸೋದ್ಯಮ ಕೇಂದ್ರವಾಗಿರುವ ಹಿನ್ನೆಲೆ ಮೂಲ ಸೌಕರ್ಯ ಕಲ್ಪಿಸಬೇಕು.
>
> ■ ಸುರೇಶ್, ಕನ್ನಂಬಾಡಿ ಗ್ರಾಮಸ್ಥರು.



ರಾಜರಾಜೇಶ್ವರಿ ನಗರದಲ್ಲಿ ಹೊಸ ತಂತ್ರಜ್ಞಾನ-ಸನ್ನದ್ಧ ಪಿ.ಡಬ್ಲ್ಯು. ವಿದ್ಯಾಪೀಠ ಕೇಂದ್ರಕ್ಕೆ ಚಾಲನೆ ಫಿಸಿಕ್ಸ್ ವಾಲಾದ ವಿದ್ಯಾಪೀಠ-ಆಫ್ಲೈನ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಂಕಿತ್ ಗುಪ್ತಾ ಚಾಲನೆ ನೀಡಿದರು.

# ಡಿಜಿಟಲ್ ಜಾಹೀರಾತು ಫಲಕ:ನೋಟಿಸ್

• **ಬೆಂಗಳೂರು:** ನಗರದಲ್ಲಿ ಅಕ್ರಮವಾಗಿ ಡಿಜಿಟಲ್ ಜಾಹೀರಾತು ಫಲಕಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿವೆ. ಈ ರೀತಿಯ ಸ್ವಯಂ ಪ್ರದರ್ಶನಕ್ಕೆ ಹೊರಡಿಸುವ ಜಾಹೀರಾತುಗಳನ್ನು ವಾಣಿಜ್ಯ ಉದ್ದೇಶಕ್ಕೆ ಪರಿವರ್ತಿಸಲು ಒಂದು ಬಾರಿಯ ಅವಕಾಶ ಕಲ್ಪಿಸಿರುವ ನಿಯಮ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಬಂಧ ರಾಜ್ಯ ಸರ್ಕಾರ ಮತ್ತು ಜಿಬಿಎಗೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಕೇಂದ್ರ ಸರ್ಕಾರದ ನಿವೃತ್ತ ನೌಕರ ಹಾಗೂ ಸಾಮಾಜಿಕ ಕಾರ್ಯಕರ್ತ ಕೆ.ಲಕ್ಷ್ಮಣ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ.ಪೂಣಚ್ಚ ಅವರ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಬೆಂಗಳೂರಿನಲ್ಲಿ ಕೇವಲ ಆನ್-ಸೈಟ್ (ಯಾವುದೇ ಸಂಸ್ಥೆಯು ತನ್ನ ಸ್ವಂತ ಉತ್ಪನ್ನಗಳ ವ್ಯಾಪಾರ ಸ್ಥಳದಲ್ಲಿನ ವ್ಯವಹಾರ ಗುರುತಿಸುವ) ಪ್ರಚಾರಕ್ಕಾಗಿ ಜಾಹೀರಾತು ನೀಡಬಹುದಾಗಿದೆ. ಆದರೆ, ವಾಣಿಜ್ಯ ವ್ಯವಹಾರಕ್ಕೆ ಪ್ರಚಾರ ನೀಡುವುದಕ್ಕೆ ಅವಕಾಶವಿಲ್ಲ. ಆದರೆ, ಸ್ವಯಂ ಜಾಹೀರಾತುಗಳನ್ನು ಮೂರು ತಿಂಗಳ ಬಳಿಕ ನಿಗದಿಯ ಶುಲ್ಕ ಪಾವತಿಸಿ ವಾಣಿಜ್ಯ ಜಾಹೀರಾತುಗಳನ್ನಾಗಿ ಪರಿವರ್ತಿಸುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ.

ಗ್ರೇಟರ್ ಬೆಂಗಳೂರು ಪ್ರದೇಶಗಳಲ್ಲಿ 2025ರ ನಿಯಮ 8(7)(6)ರ ಹಾಗೂ ಈ ಸಂಬಂಧ 2026ರ ಫೆ.4ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶವನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ. ಹೈಕೋರ್ಟ್ ಮಧ್ಯಪ್ರವೇಶದಿಂದಾಗಿ ನಗರದಲ್ಲಿ 2018ರ ಬಳಿಕ ನಗರದಲ್ಲಿ ವಾಣಿಜ್ಯ ಜಾಹೀರಾತುಗಳ ಮೇಲೆ ಸಂಪೂರ್ಣ ನಿಷೇಧ ಹೇರಲಾಗಿತ್ತು. ನಗರದ ಸೌಂದರ್ಯ ಮತ್ತು ಸುರಕ್ಷತೆಯನ್ನು ಕಾಪಾಡುವ ಸಲುವಾಗಿ ಖಾಸಗಿ ಕಟ್ಟಡಗಳ ಮೇಲೆ ವಾಣಿಜ್ಯ ಜಾಹೀರಾತು ಫಲಕಗಳನ್ನು ನಿರ್ಬಂಧ ವಿಧಿಸುವ ಸಂಬಂಧ ಬಿಬಿಎಂಪಿಯು ಸರ್ವಾನುಮತದಿಂದ ನಿರ್ಣಯ ಕೈಗೊಂಡಿತ್ತು.

ಹೊರಾಂಗಣ ಸಂದೇಶ ಮತ್ತು ಸಾರ್ವಜನಿಕ ಪ್ರದರ್ಶನ ಬೈಲಾವನ್ನು ರಚನೆ ಮಾಡುವುದಕ್ಕೆ ಕಾರಣವಾಗಿತ್ತು. ಆದರೆ, ಇದಾದ ಬಳಿಕ ನಗರದಲ್ಲಿ ಖಾಸಗಿ ಕಟ್ಟಡಗಳ ಮೇಲೆ ಡಿಜಿಟಲ್ ಫಲಕಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಅಲ್ಲದೆ, ನಗರದಲ್ಲಿ ವಾಣಿಜ್ಯ ಜಾಹೀರಾತುಗಳ ನಿರ್ಬಂಧದ ನಡುವೆಯೂ ಡಿಜಿಟಲ್ ಜಾಹೀರಾತು ಫಲಕಗಳಿಗೆ ಜಿಬಿಎ ಅನುಮತಿ ನೀಡುತ್ತಿದ್ದು, ಇದು ಬಿಬಿಎಂಪಿ ಕಾಯ್ದೆ ಸೆಕ್ಷನ್ 150ರನ್ನು ಉಲ್ಲಂಘಿಸಲಾಗಿದೆ.

ಡಿಜಿಟಲ್ ಜಾಹೀರಾತು ಫಲಕಗಳು ಅತ್ಯಂತ ಹೊಳಪನ್ನು ಹೊಂದಿರಲಿದ್ದು, ಅದು ಬದಲಾವಣೆಯಾಗಿರುತ್ತದೆ. ಇದರಿಂದ ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೀವ್ರತರದ ತೊಂದರೆ ನೀಡಲಿದೆ. ಇದರಿಂದ ರಸ್ತೆ ಅಪಘಾತಗಳಿಗೂ ಕಾರಣವಾಗುವ ಸಾಧ್ಯತೆ ಇದೆ. ಜತೆಗೆ ದೃಶ್ಯ ಮಾಲಿನ್ಯಕ್ಕೆ ಕಾರಣವಾಗುತ್ತಿದ್ದು, ಸಂವಿಧಾನದ 21ನೇ ವಿಧಿ ಅಡಿಯಲ್ಲಿ ಲಭ್ಯವಿರುವ ಸ್ವಚ್ಛ ಪರಿಸರ ಹಕ್ಕಿನ ಉಲ್ಲಂಘನೆಗೆ ಕಾರಣವಾಗಲಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

# 15 ಕೋಟಿ ರೂ. ಮೌಲ್ಯದ ಆಸ್ತಿ ವಶ

• **ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ತನ್ನ ಸ್ವತ್ತಿನ ಭೂಮಿಯನ್ನು ಸಂರಕ್ಷಿಸುವ ಹಾಗೂ ಅನಧಿಕೃತ ಅತಿಕ್ರಮಣವನ್ನು ತೆರವುಗೊಳಿಸುವ ತನ್ನ ಕಾನೂನುಬದ್ಧ ಜವಾಬ್ದಾರಿಯ ಅಂಗವಾಗಿ, ಬೆಂಗಳೂರು ಉತ್ತರ ತಾಲೂಕು, ಯಶವಂತಪುರ ಹೋಬಳಿ, ಮಲ್ಲತ್ತಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 8ರಲ್ಲಿ ಕಾರ್ಯಾಚರಣೆ ನಡೆಸಿ ಸುಮಾರು 15 ಕೋಟಿ ರೂ. ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಕಾರ್ಯಾಚರಣೆಯ ವೇಳೆ ಅನಧಿಕೃತವಾಗಿ ನಿರ್ಮಿಸಲ್ಪಟ್ಟ ಕಟ್ಟಡಗಳನ್ನು ತೆರವುಗೊಳಿಸಿ, 12 ಗುಂಟೆ ಪ್ರದೇಶದ ಬಿಡಿಎ ಸ್ವತ್ತನ್ನು ವಶಪಡಿಸಿಕೊಂಡು ಪ್ರಾಧಿಕಾರದ ಕಾನೂನುಬದ್ಧ ವಶಕ್ಕೆ ಪಡೆಯಲಾಗಿದೆ. ವಶಪಡಿಸಿಕೊಂಡ ಸ್ವತ್ತಿನ ಅಂದಾಜು ಮೌಲ್ಯ ಸುಮಾರು ರೂ. 15 ಕೋಟಿಗಳಾಗಿದೆ. ಆಸ್ತಿ ಖರೀದಿಸುವ ಮೊದಲು ಸಂಬಂಧಿತ ದಾಖಲೆಗಳ ಸಮಗ್ರ ಪರಿಶೀಲನೆ ನಡೆಸಿ, ಅನುಮೋದಿತ ಬಡಾವಣೆಗಳಲ್ಲಿ ಮಾತ್ರ ನಿವೇಶನಗಳನ್ನು ಖರೀದಿಸಬೇಕು. ಶೀರ್ಷಿಕೆ ದಾಖಲೆಗಳು, ಕಾನೂನುಬದ್ಧ ಅನುಮತಿಗಳು ಹಾಗೂ ಸಂಬಂಧಿತ



ಪ್ರಾಧಿಕಾರಗಳಿಂದ ದೃಢೀಕರಣವನ್ನು ಪಡೆಯುವುದು ಅಗತ್ಯವಾಗಿದೆ. ಬಿಡಿಎ ಸ್ವತ್ತಿನ ರಕ್ಷಣೆ ಮತ್ತು ಸುಸಂಘಟಿತ ನಗರಾಭಿವೃದ್ಧಿಗೆ ಸಾರ್ವಜನಿಕರ ಸಹಕಾರ ಅತ್ಯಂತ ಮುಖ್ಯವಾಗಿದೆ ಎಂದು ಬಿಡಿಎ ತಿಳಿಸಿದೆ.

# ಅವೈಜ್ಞಾನಿಕ ಕಾಮಗಾರಿ: ಸರಿಪಡಿಸುವಂತೆ ಒತ್ತಾಯ

• **ಬೇಲೂರು:** ಪಟ್ಟಣದ ಎಳನೇ ವಾರ್ಡ್ ಹಾಗೂ ವೈಕುಂಠ ಬೀದಿಯಲ್ಲಿ ನಡೆಯುತ್ತಿರುವ 7,8,9,23,15 ..ರ ರಸ್ತೆ ಹಾಗೂ ಚರಂಡಿ ಕಾಮಗಾರಿಗಳು ಅವೈಜ್ಞಾನಿಕವಾಗಿ ನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ತೀವ್ರ ಅನಾನುಕೂಲ ಉಂಟಾಗಿದೆ ಎಂದು ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಹಾಗೂ ಮಾಜಿ ಅಧ್ಯಕ್ಷೆ, ಹಾಲಿ ಸದಸ್ಯ ತೀರ್ಥಕುಮಾರಿ ವೆಂಕಟೇಶ್ ಆರೋಪಿಸಿದರು.

ಈ ಕುರಿತು ಮಾತನಾಡಿ, ಪಟ್ಟಣದಲ್ಲಿ ಕೆಲವು ಪ್ರಮುಖ ವಾರ್ಡ್‌ಗಳಲ್ಲಿ ಪೈಪ್ ಲೈನ್ ಒಡೆದು ಹೋಗುವುದು ಹಾಗೂ ಯುಜಿಡಿ ಸಮಸ್ಯೆಗಳ ಕುರಿತು ಪುರಸಭೆಗೆ ಹೆಚ್ಚಾಗಿ ದೂರುಗಳು ಬರುತ್ತಿವೆ. ಇದರಿಂದ ತಕ್ಷಣ ಸಮಸ್ಯೆ ಪರಿಹಾರ ಸಲು ಕಂಟ್ರಾಕ್ಟರ್‌ಗಳಿಗೆ ಸೂಚನೆ ನೀಡಿ, ವರ್ಕರ್ ಗಳನ್ನು ಸ್ಥಳದಲ್ಲೇ ಇದ್ದು ಪೈಪ್‌ಲೈನ್ ಒಡೆದು ಹೋದಾಗ ತಕ್ಷಣ ದುರಸ್ತಿ ಮಾಡುವಂತೆ ಆದೇಶಿಸಲಾಗಿದೆ ಎಂದು ಹೇಳಿದರು. ಕುಡಿಯುವ ನೀರಿನ ವ್ಯವಸ್ಥೆಗೆ ಯಾವುದೇ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಈ ವಿಷಯವನ್ನು ಶಾಸಕರ ಗಮನಕ್ಕೂ ತರಲಾಗಿದೆ.

## ಸಾರ್ವಜನಿಕ ಪ್ರಕಟಣೆ

[illegible]

## PUBLIC NOTICE

It is hereby informed to the General Public that I am intending to purchase the land comprising in Sy No.176 measuring 9 acres 23 guntas, assessed at Rs.12.65, situated at Thimmanayakanahalli village, Basetthalli hobli, Sidlaghatta taluk, from the khatedars Sri. Avil Kumar C.N. and Abhishek C.N. both sons of Narayanaswamy C.N. who are in possession of the same. As Absolute owners thereof Any person having rights on the aforesaidsaid property can file the objections within SEVEN days of this publication, addressing to.

Sri. B.L. Keshava Kumar
S/o B.V. Lakshminarayanappa,
Vapasandra, Chickballapur-562101.
Mobile 93436 72033.

**ಜಾಹೀರಾತಿಗಾಗಿ ಸಂಪರ್ಕಿಸಿ :**
**9845438807**
**9611755391**

**IN THE COURT OF THE XI ADDL. CIVIL JUDGE AND J.M.F.C AT MYSURU**
**O.S. NO. 1110 OF 2020**

**PLAINTIFF : SRI.NANJAPPA** S/o Bassappa, Aged about 62 Years, R/at 225, 7th Cross, Madeshwara Nagara, Mysuru-16.

V/S

**DEFENDANTS : NAGALINGACHARI AND OTHERS** Hg: 16-06-2026

**NOTICE**

TO, **1. Sri.Nagalingachari @ Nagalingu** S/o Late. Chennaveera Chari Aged about 63 years, R/at No.66, 6th Cross, Aravind Nagara, Mysore City. ... **Defendant No.1**

**2. Sri.Nagaraju,** S/o Late. Chennaveera Chari, Aged about 62 years, R/at No.1942/A, 7th Cross, Maruti Tent Road, Janatha Nagar, Mysuru City. .......**Defendant No.2**

**3. Sri. Somachari,** S/o Late. Chennaveera Chari, Aged about 57 years, R/at No.129, 2nd Cross, Lalithadripura Village, Mysuru Taluk. ...**Defendant No.5**

**4. Sri. Rajesh** S/o Puttaraja chari, Aged about 38 years, R/at No.41/1, 3rd Cross, Ganesha Nagara "A" Block, N.R. Mohalla, Mysuru City. .......**Defendant No.11**

**5. Sri.Manjunath,** S/o Muniyappa Aged about 41years, R/at No.Maruthi Nagar Lalithadripura Village, Mysuru Taluk. ..... **Defendant No.12**

**6. Sri.Devaiah** S/o Siddaiah Aged about64 years, R/at No.Maruthi Nagar Lalithadripura Village, Mysuru Taluk. ........ **Defendant No.13**

**7. Smt. Nagarathna** W/o V.Kumar Aged about 45years, R/at No.Maruthi Nagar Lalithadripura Village, Mysuru Taluk. ..... **Defendant No.14**

**8. Smt. Nagamma,** W/o Aged about years, R/at No.Maruthi Nagar Lalithadripura Village, Mysuru Taluk. .....**Defendant No.15**

**9. Sri.Mahesh** S/o Aged about years, R/at No.Maruthi Nagar Lalithadripura Village, Mysuru Taluk. .....**Defendant No.16**

**10. Sri.Prakash** S/o Narappa Aged about 48 Years, R/at No.Maruthi Nagar Lalithadripura Village, Mysuru Taluk. ..... **Defendant No.17**

The Plaintiff has filed the above suit against the defendants for relief of Mandatory injunction. The notice of this Hon'ble court through Court and R.P.A.D. has not served upon you. Hence, you the Defendant **No. 1,2,5, and 11 to 17.** is hereby called upon to appear before this Hon'ble Court **on 16-06-2026 at 11:00am.** Either personally or through your counsel. Failing which you will be placed ex-parte and the above matter will be preceded in accordance with Law. Giving by my Hand with Seal Dated this the 10.3.26

**By order of the Court**
**Chief Ministerial Officer, Civil Judge and JMFC, MYSURU**
**Advocate for Appellant : V.M.Prasad,** #74/1, Alanahalli ring road, Service road, Near Devegowda circle, Mysuru-570 026.

**IN THE COURT OF THE 2ND ADDITIONAL CIVIL JUDGE & J.M.F.C. AT CHICKBALLAPUR.**
**Crl. Misc. NO. 625/2025.**

**Petitioners : 1. Smt. Munilakshmamma** W/o Late T.R. Channappa Aged about 90 years, **2. Smt. T.C. Rathnamma** D/o Late T.R. Channappa Aged about 63 years, **3. Sri. T.C. Narayanaswamy** S/o Late T. R. Channappa Aged about 61 years, **4. Smt. Nagaveni T.N.** D/o T.C. Narayanaswamy Aged about 39 years, **5. Smt. Radhika N** D/o T. C. Narayanaswamy Aged about 38 years, **6. Smt. Sumithra T.N.** D/o T.C. Narayanaswamy Aged about 35 years, **7. Smt. Rashmi T.N.** D/o T.C. Narayanaswamy Aged about 30 years. **8. Sri. Manjunath T.N.** S/o T.C. Narayanaswamy Aged about 29 years, All are residing at Timahalli Village, Nandi Hobli, Chickballapur Taluk & District.

-V/S-

**Respondent : The Registrar Births and Deaths The Tahsildar, Chickballapur.**

**Draft paper publication**

The petitioners has filed this petition for grant of death certificate of the petitioner No.1 father in law and petitioner No.2 & 3's grandfather by name **Ramaiah** W/o Late Doddachannappa, died **on: 03.10.1980** Timahalli Village, Nandi hobli, Chickballapur Taluk & District. non availability certificates in respect of the death of Ramaiah W/o Late Doddachannappa.

If any persons hayobjections regarding the issue of death certificate, they can appear before the Hon'ble Co Person or duly instructed by his advocate **on 27/03/2026** at 11 O'clock. If they foto appear, the Hon'ble Court has proceed and decide the matter according to Is Givende hand and seal of the court, this 3rd Day of March 2026.

**By Order of the Court**
**Chief Ministerial Officer,**
**Civil Judge & JMFC Chickballapur.**
Advocate for petitioner : **Sri. K.V. Balaji,**
Advocate, Chickballapur 562101.

**IN THE COURT OF THE 2ND ADDITIONAL CIVIL JUDGE & J.M.F.C. AT CHICKBALLAPUR.**
**Crl. Misc. NO. 623/2025.**

**Petitioners : 1. Smt. Munilakshmamma** W/o Late T.R. Channappa Aged about 90 years, **2. Smt. T.C. Rathnamma** D/o Late T.R. Channappa Aged about 63 years, **3. Sri. T.C. Narayanaswamy** S/o Late T. R. Channappa Aged about 61 years, **4. Smt. Nagaveni T.N.** D/o T.C. Narayanaswamy Aged about 39 years, **5. Smt. Radhika N** D/o T. C. Narayanaswamy Aged about 38 years, **6. Smt. Sumithra T.N.** D/o T.C. Narayanaswamy Aged about 35 years, **7. Smt. Rashmi T.N.** D/o T.C. Narayanaswamy Aged about 30 years. **8. Sri. Manjunath T.N.** S/o T.C. Narayanaswamy Aged about 29 years, All are residing at Timahalli Village, Nandi Hobli, Chickballapur Taluk & District.

-V/S-

**Respondent : The Registrar Births and Deaths The Tahsildar, Chickballapur.**

**Draft paper publication**

[illegible]

**By Order of the Court**
**Chief Ministerial Officer,**
**Civil Judge & JMFC Chickballapur.**
Advocate for petitioner : **Sri. K.V. Balaji,**
Advocate, Chickballapur 562101.

**IN THE COURT OF THE 2ND ADDITIONAL CIVIL JUDGE & J.M.F.C. AT CHICKBALLAPUR.**
**Crl. Misc. NO. 624/2025.**

**Petitioners : 1. Smt. Munilakshmamma** W/o Late T.R. Channappa Aged about 90 years, **2. Smt. T.C. Rathnamma** D/o Late T.R. Channappa Aged about 63 years, **3. Sri. T.C. Narayanaswamy** S/o Late T. R. Channappa Aged about 61 years, **4. Smt. Nagaveni T.N.** D/o T.C. Narayanaswamy Aged about 39 years, **5. Smt. Radhika N** D/o T. C. Narayanaswamy [illegible]

**Respondent : The Registrar Births and Deaths The Tahsildar, Chickballapur.**

**Draft paper publication**

[illegible]

**By Order of the Court**
**Chief Ministerial Officer,**
**Civil Judge & JMFC Chickballapur.**
Advocate for petitioner : **Sri. K.V. Balaji,**
Advocate, Chickballapur 562101.

**IN THE COURT OF THE 2ND ADDITIONAL CIVIL JUDGE & J.M.F.C. AT CHICKBALLAPUR.**
**Crl. Misc. NO. 622/2025.**

[illegible]

**By Order of the Court**
**Chief Ministerial Officer,**
**Civil Judge & JMFC Chickballapur.**
Advocate for petitioner : **Sri. K.V. Balaji,**
Advocate, Chickballapur 562101.

**ಜಿಲ್ಲಾ ಪಂಚಾಯತ ಉತ್ತರ ಕನ್ನಡ.**
**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ**
Email: dhoukannada@gmail.com Phone: 08382-226339. Fax: 08382-222452

ಸಂ:ಜಿಆಕಅ/ಜಿಯೋಕಾಸಾ/ಡಿಎಂಎಫ್/ಪಿಪಿ-59(1)/2025-26 ದಿನಾಂಕ : 12-03-2026

**ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ**
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ : 2025-26 ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಗಳಾದ ಆಯ್ದ ತಾಲ್ಲೂಕು ಆಸ್ಪತ್ರೆಗಳಿಗೆ ಅವಶ್ಯಕವಿರುವ ಕಪಾಟುಗಳನ್ನುಳ್ಳ ಡೀಪ್ ಫ್ರೀಜರ್ ಸಲಕರಣೆಯನ್ನು ಪೂರೈಸಲು ಇ-ಟೆಂಡರ್ ಕುರಿತು

**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಗಳಾದ ಆಯ್ದ ತಾಲ್ಲೂಕು ಆಸ್ಪತ್ರೆಗಳಿಗೆ 2025-26ನೇ ಸಾಲಿಗೆ ಅವಶ್ಯಕವಿರುವ ಕಪಾಟುಗಳನ್ನುಳ್ಳ ಡೀಪ್ ಫ್ರೀಜರ್ ಸಲಕರಣೆಗಳನ್ನು ಪೂರೈಸಲು ಈ ಕೆಳಕಾಣಿಸಿದಂತೆ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಈ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಮರು ಇ-ಟೆಂಡರ್ ಆಹ್ವಾನಿಸಲಾಗಿದೆ ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್ ಸೈಟ್ **www.kppp.karnataka.gov.in** ನಲ್ಲಿ ನೋಡಬಹುದಾಗಿದೆ.

ಇ- ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್

| ಕ್ರ.ಸಂ | ವಿವರಗಳು | ದಿನಾಂಕ |
|---|---|---|
| 1 | ಇ.ಎಂ.ಡಿ ಮೊತ್ತ 2.5 % | ರೂ .60,000/- |
| 2 | ಇ- ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಫಾರಂ ಡೌನಲೋಡ್ ಆರಂಭ ದಿನಾಂಕ | ದಿನಾಂಕ: 12-03-2026, ಬೆಳ್ಳಿಗ್ಗೆ 10.00 ಘಂಟೆಯಿಂದ |
| 3 | ಟೆಂಡರ್‌ನಲ್ಲಿ ಆಕ್ಷೇಪಣೆಗಳಿದ್ದಲ್ಲಿ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | ದಿನಾಂಕ16-03-2026ಸಾಯಂಕಾಲ 05-30 ಘಂಟೆಯವರೆಗೆ |
| 4 | ಇ- ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ | ದಿನಾಂಕ: 20-03-2026 ರ 5-30 ಘಂಟೆಯವರೆಗೆ |
| 5 | ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ: 23-03-2026 ಬೆಳ್ಳಿಗ್ಗೆ 10-30 ಘಂಟೆ |
| 6 | ಟೆಂಡರ ಅಂದಾಜು ಮೊತ್ತ | ರೂ .24,00,000/- ಮಾತ್ರ |

ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು,
ಉ .ಕ ಕಾರವಾರ.

# ಪುರುಷನ ಯಶಸ್ಸಿನ ಹಿಂದೆ ಮಹಿಳೆಯರ ಪಾತ್ರ ಅಪಾರ

• **ಬೆಂಗಳೂರು:** ಅಮ್ಮನ ಪರಿಶ್ರಮ ಹಾಗೂ ಅಕ್ಕನ ತ್ಯಾಗದ ಫಲವಾಗಿ ನಾನು ಇಂದು ನಿಮ್ಮ ಮುಂದೆ ನಿಂತಿದ್ದೇನೆ. ನನ್ನ ಯಶಸ್ಸಿನ ಹಿಂದೆಯೂ ಮಹಿಳೆಯರ ಪಾತ್ರವಿದೆ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಡಾ.ರಾಮ್ ಪ್ರಸಾತ್ ಮನೋಹರ್ ಹೇಳಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮಹಿಳಾ ನೌಕರರ ದೂರು ನಿವಾರಣಾ ಸಮಿತಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಕಷ್ಟದ ದಿನಗಳಲ್ಲಿ ನನ್ನ ತಾಯಿ ಆಸ್ಪತ್ರೆ ಸೇರಿದ್ದರು. ಒಂದು ಮಗು ಉಳಿಯಬಹುದು. ಇಲ್ಲ ನೀವು ಉಳಿಯಬಹುದು ಎಂದು ಆಯ್ಕೆ ನೀಡಿದಾಗ, ನನ್ನ ತಾಯಿ ಮಗು ಉಳಿಸಿ ನನ್ನ ಪ್ರಾಣ ಹೋದರೂ ತೊಂದರೆ ಇಲ್ಲ ಎಂದು ಪ್ರಾಣ ತ್ಯಾಗಕ್ಕೆ ಸಿದ್ಧರಾಗಿದ್ದರೆಂದರು.

ನಮ್ಮ ಅಕ್ಕ ಪದವಿ ಮುಗಿಸಿ ಸ್ನಾತಕೋತ್ತರ ಪದವಿ ಮಾಡುವ ಆಸೆಯಲ್ಲಿದ್ದಳು. ಆದರೆ, ಆರ್ಥಿಕ ಪರಿಸ್ಥಿತಿ ಕಂಡು ತನ್ನ ವ್ಯಾಸಂಗವನ್ನು ಮೊಟಕು ಮಾಡಿ, ನಾನು ಓದುವುದಕ್ಕೆ ಅವಕಾಶ ಮಾಡಿಕೊಟ್ಟಳು. ತಾಯಿಯ ಪಟ್ಟ ಪರಿಶ್ರಮ ಮತ್ತು ಅಕ್ಕನ ತ್ಯಾಗದ ಪರಿಣಾಮ ನಾನಿಂದು ನಿಮ್ಮ ಮುಂದೆ ಐಎಎಸ್ ಅಧಿಕಾರಿಯಾಗಿ ನಿಂತಿದ್ದೇನೆ. ಇದು ಹೆಣ್ಣಿನಲ್ಲಿರುವ ತ್ಯಾಗ ಮನೋಭಾವದ ಶಕ್ತಿ ಎಂದು ಬಣ್ಣಿಸಿದರು. ಪ್ರತಿ ಹೆಣ್ಣು ಮಕ್ಕಳಲ್ಲಿ ಒಂದಲ್ಲ ಒಂದು ಕನಸುಗಳಿರುತ್ತವೆ. ಆದರೆ ಕುಟುಂಬದ ಒತ್ತಡದಿಂದ ನನಸು ಮಾಡಿಕೊಳ್ಳುವವರೇ ತೀರಾ ಕಮ್ಮಿ. ನನ್ನ ಪತ್ನಿಗೆ ಸಹ ಐಎಎಸ್ ಆಗುವ ಕನಸಿತ್ತು ಎಂಬುದು ನನಗೆ ತಡವಾಗಿ ತಿಳಿಯಿತು. ತಕ್ಷಣ ಅವರಿಗೆ ಐಎಎಸ್ ತಯಾರಿಗೆ ಸಿದ್ಧಪಡಿಸಿದೆಂದು ತಿಳಿಸಿದರು.

ಗರ್ಭಿಣಿಯಾಗಿದ್ದೂ ತರಬೇತಿ ಆರಂಭಿಸಿ ಉತ್ತೀರ್ಣರಾದ ಪರಿಣಾಮ ಇಂದು ಐಎಎಸ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಿಮ್ಮ ಕನಸುಗಳನ್ನು ಕುಟುಂಬದ ಸಮಸ್ಯೆಗಳಿಗೆ ಬಲಿಕೊಡಬೇಡಿ. ಛಲದಿಂದ ಕನಸುಗಳನ್ನು ನನಸು ಮಾಡಿಕೊಳ್ಳಲು ಮುಂದಾಗಿ ಎಂದು ಸಲಹೆ ನೀಡಿದರು.

# ತಾಂತ್ರಿಕ ಶಿಕ್ಷಣದಲ್ಲಿ ಮುಂಚೂಣಿ

• **ತಿಪಟೂರು:** ನಗರದ ಕಲ್ಪತರು ತಾಂತ್ರಿಕ ಮಹಾವಿದ್ಯಾಲಯವು ತಾಂತ್ರಿಕ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಕ್ಷೇತ್ರದಲ್ಲಿ ಮತ್ತೊಮ್ಮೆ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದೆ. ಪ್ರತಿಷ್ಠಿತ ಸಿಸ್ಕೋ ನೆಟ್‌ವರ್ಕಿಂಗ್ ಅಕಾಡೆಮಿ 'ಸ್ಕಿಲ್-ಎ-ಥಾನ್ 2026' ಅಭಿಯಾನದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಕಾಲೇಜು ರಾಷ್ಟ್ರಮಟ್ಟದ 'ಚಾಂಪಿಯನ್' ಪ್ರಶಸ್ತಿಗೆ ಪಾತ್ರವಾಗಿದೆ.

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ 'ಭಾರತ ನಾಯಕ ಶೃಂಗಸಭೆ ? ಇಂಡಿಯಾ ಲೀಡರ್‌ಶಿಪ್ ಸಮಿಟ್ 2026' ಕಾರ್ಯಕ್ರಮದಲ್ಲಿ ಈ ಗೌರವ ಪ್ರದಾನಿಸಲಾಯಿತು.

ಸಮಾರಂಭದಲ್ಲಿ ಸಿಸ್ಕೋ ಸಂಸ್ಥೆಯ ಜಾಗತಿಕ ಮತ್ತು ಪ್ರಾದೇಶಿಕ ಹಿರಿಯ ಅಧಿಕಾರಿಗಳಾದ ಪಾಲ್ ಮೋರಾಕ್ (ವೈಸ್ ಪ್ರೆಸಿಡೆಂಟ್, ಲರ್ನ್ ವಿತ್ ಸಿಸ್ಕೋ), ಮಾರ್ಗಲ್ಲಾ ಓಟಿಯಾ (ರೀಜನಲ್ ಮ್ಯಾನೇಜರ್? ಎಪಿಜೆಸಿ, ಸಿಸ್ಕೋ ನೆಟ್‌ವರ್ಕಿಂಗ್ ಅಕಾಡೆಮಿ) ಮತ್ತು ಕಾರ್ತಿಕ್ ಬಾಲಚಂದ್ರನ್ (ಮ್ಯಾನೇಜಿಂಗ್ ಡೈರೆಕ್ಟರ್, ಎಪಿಜೆಸಿ, ಡಿಜಿಟಲ್ ಇಂಪ್ಯಾಕ್ಟ್ ಆಫೀಸ್) ಅವರು ಕಾಲೇಜಿನ ಸಾಧನೆಯನ್ನು ಶ್ಲಾಘಿಸಿ ಪ್ರಶಸ್ತಿ ಪ್ರದಾನ ಮಾಡಿದರು. ಈ ವೇಳೆ ಸಿಸ್ಕೋ ಇಂಡಿಯಾ ಮತ್ತು ಸಾರ್ಕ್ ನೆಟ್ ಅಕಾಡ್ ಮುಖ್ಯಸ್ಥರಾದ ಇಂದರ್ ಸಿಂಗ್ ಸಹ ಉಪಸ್ಥಿತರಿದ್ದರು.

[illegible]
ಓ.ಎಸ್. ಸಂಖ್ಯೆ : 82/2026
[illegible]

**IN THE COURT OF THE VII ADDL. DISTRICT JUDGE AND M.A.C.T. AT TUMKUR**

**M.V.C.No. 1082/2025**

**CLAIMANTS: Manoj V.A @ Manojkumar -V/s- RESPONDENTS: Pradeep.H.R. and others**

**NOTICE TO RESPONDENT NO.2 IN THE ABOVE CASE**

**RESPONDENT No.2: Mr. NANDEESHA. G.**, R/o No. 116, Ullala Main road Billialu, Magadi Main road, Byadarahalli, Bengaluru-560 091. (Policy Holder of the vehicle Bajaj Pulsar 220 DTS-Fi Motorbike bearing Reg. No.KA-02-KX-5210)

WHEREAS, the above Claimant have instituted the above claim petition against the Respondent No.2 and others for compensation due to by Sustained injuries by him in a motor vehicle accident which occurred within the limits of Rural Police Station, Tumkur, involving the Bajaj Pulsar 220 DTS-Fi Motor bike bearing Reg. No. KA 02 KX 5210 on 18.04.2025.

Take Notice that you have been made Respondent No.2 in the above claim petition and the same is posted for your appearance on **08/06/2026** at **11.00 AM.** before the Hon'ble VII Addl. District Judge and M.A.C.T. at Tumkur, therefore, you are hereby informed to appear on the said date, failing which the case shall be heard and determined in your absence.

Given under my hand and seal of the Court on this 12/03/2026

By order of the Court, Chief Administrative Officer, District & Sessions Court, Tumkuru

Advocate for Claimant:
**Sri. C.S. KUMARASWAMY**
C.S.K.Arcade, Near Kote Anjaneyaswamy Temple, 1st Cross, Pandurangarangara, Tumakuru City

[illegible]

**IN THE COURT OF ADDITIONAL CIVIL JUDGE AND JMFC AT HOSAKOTE**

**C.Misc. No. 94/2026**

**PETITIONER:** 1) Sri Lakesh, S/o. Late Munivenkatappa, aged about 42 years. 2) Smt. Vallamma, D/o. Late Munivenkatappa, aged about 33 years. 3) Sri Nagaraja, S/o. Late Munivenkatappa, aged about 35 years. 4) Sri Ambarish, S/o. Late Munivenkatappa, aged about 37 years. 5) Sri Muniraju, S/o. Late Munivenkatappa, aged about 37 years. All are R/at. Banahalli Village, Nandagudi Hobli, Hoskote Taluk, Bangalore Rural Dist.

-V/s- **RESPONDENT : The Registrar of Birth and Death**, by its Tahasildar Hoskote, Hoskote Taluk, Bangalore Rural district.

**DRAFT PAPER PUBLICATION**

The petitioner is filed this petition for grant of death certificate of one **Munivenkatappa S/o Late Munishamappa** was **died on 22-04-2002**, in the residence of petitioners at Banahalli Village, Nandagudi Hobli, Hoskote Taluk, Bangalore Rural District.

1. Whom so ever if any person who are related or interest or dispute date of death of **Munivenkatappa S/o Late Munishamappa** may hereby directed to appear in the above said court in person or through pleader duly instructed and to able to answer all material question raising in the petition on the day of **17.04.2026 at 11.30 AM** in said court.

2. Take notice that in default of your appearance on the date before mentioned in the petition, it will be heard and determine ex-parte.

Given under my hand and seal of the court on this 25.02.2026.

**By Order of the Court, Sheristedar, Civil Judge & JMFC, Hoskote**

Advocate for Petitioners: **Anand Associates, Ananda .M & Ravi .N**, Advocates
No. 5th A Cross, Behind Court, III Road, W.S. Extension at Hoskote.

**IN THE COURT OF THE ADDITIONAL CIVIL JUDGE AND JMFC AT KORATAGERE**

**O.S.30/2011**

**PLAINTIFF;** Chikkaramaiah - V/s - **DEFENDANTS:** Rudramma and others

**DRAFT PAPER PUBLICATION**

NOTICE TO: Defendant No. 7- Manjamma @ Manjula, D/o late Ramaiah, aged about 28 years. Defendant No. 11 - Ramakka D/o late Kampalaiah, aged about 34 years. Defendant No. 7 and 8 are residing at Doddapalanahalli village, Kolala Hobli, Koratagere Taluk, Tumakuru District.

Whereas the plaintiff had filed the above suit against the defendants for relief of partition and for such other reliefs, with respect to suit properties. Summons and notice was issued and the same was not served on the defendants No.7 and defendants No. 11, they are intentionally avoiding to receive the same. Hence you are hereby summoning to appear before the Hon'ble Court in person or by a pleader on 25/03/2026 At 11.00 a.m. to answer the same, failing which the suit will be disposed of exparte.

Given under my hand and seal of the Court dated on this day of 12th of March, 2026.

By order of the Court,
Sd/- **Admn. Sheristedar,**
Civil Judge and JMFC Court, Koratagere
Sd/- **RAMESH. B.S.** B.A (Law) L.L.B.
Advocate. T.A.P.C.M.S. Building Gumchi Square, Tumakuru.

**IN THE COURT OF THE PRL. SENIOR CIVIL JUDGE AT MAGADI**

**R. A.No.67/2018**

**APPELLANTS: Sri.Muniraju -Vs- RESPONDENTS: Sri. C.Hanumaiah** and others

**NOTICE TO THE RESPONDENTS. No.2 (f)**

**2(f). Smt. Nirmala**, D/o late. Kempeeraiah, aged about 46 years, R/at No. 175, 4th Stage, 4th Block, 17th Cross, 4th B Main Road, Basaveshwara Nagara, Bengaluru.

Where the above named Appellants has filed the suit for the relief of Permanent Injunction and other relief against you and others Respondents over the suit schedule property and in spite of all kinds of steps taken against you for service of notice, you are evade to receive the same and returned as un-served.

Now the above matter has been posted on **18/04/2026 at 11:00 AM** to take notice and to appear before the Hon'ble Prl. Senior Division court at Magadi on the said dated and time either personally or through counsel and defend the case. If you fail to appear before the court on said date, the case will be decided ex-parte.

**SCHEDULE**

1. The land bearing Sy No.16/2, measuring to an extent of 0-21 guntas situated at Honnaganahatti village, Tavarekere hobli, Bengaluru South Taluk, bounded as follows **East by:** land of Rudrahanumaiah, **West by:** land of Boodimane Erappa's, **North by:** Another Land of Plaintiffs, **South by:** Pipeline road.

2. The land bearing Sy.No.16/6, measuring to an extent of 1 acre 20 guntas situated at Honnaganahatti Taluk, village, Tavarekere hobli, Bengaluru South bounded as follows: **East by:** Voni, **West by:** land of Dundamma's, **North by:** Land of Narayanappa, **South by:** Bengaluru-Magadi Main road

Issued as per the orders of the Hon'ble court on 09/03/2026 with seal of this Hon'ble court.

By order of the Court, Sheristedar, Senior Civil Judge, Magadi

**Sri. Chetan. M**, Advocate
Magadi Main road, Magadi town, Bengaluru South district - 562120.

**IN THE COURT OF THE HON'BLE 3rd ADDITIONAL DISTRICT & SESSIONS JUDGE AT K.G.F.**

**P & S.C. No. 5 /2026.**

**PETITIONER: Sri Eashwar Rao R**, Aged 46 years, S/o. Late Ramoji Rao, R/at; Dodda Ponnandahalli village & post Budikote Hobli, Bangarpet Taluk. Aadhar No. 284406227780 M. No. 7975551872

**RESPONDENTS: 1) Sri Venkoba Rao**, Aged 60 years, S/o. Late Ramoji Rao, **2) Sri Vital Rao**, Aged 55 years, S/o. Late Ramoji Rao, Both are respondents are R/at; Dodda Ponnandahalli village & post Budikote Hobli, Bangarpet Taluk.

**PUBLIC NOTICE.**

Whereas, the petitioner has instituted the above case for issue of probate in his favour in respect of the schedule property. Who so ever having any claim over the relief prayed in the petition may appear before the **Hon'ble Hon'ble 3rd Additional District & Sessions Judge At K.G.F.** on 25/4/2026 at 11-00 AM and to implead themselves as parties in the above petition. Failing which the case will be disposed off as per law;

**SCHEDULE**

All the piece and parcel of the land measuring 13 1/2 guntas in Sy.No.42/P4, New 42, situated at Kondhodi Manche village, Budikote Hobli, Bangarpet Taluk, and the same is bounded on the;- East : Land of Aldhoji Rao,West : Road, North : Land of vital Rao, South : Kadhar Rao.

Given under my hand and the seal of this 12.03.2026.

**By Order of the court**
**Sheristedar, IInd ADDL. DIST. & SESSIONS COURY KOLAR (SIT AT KGF)**
**AMARESH & ASSOCIATES,**
Advocate for Petitioners,
Bangarpet-563114

**IN THE COURT OF THE PRL SENIOR CIVIL JUDGE AND JMFC AT ANEKAL**

**O.S. No. 865/2023**

**BETWEEN: SMT SHOBHA .S ... PLAINTIFF AND: SRI. NAGARAJ .D & OTHERS ... DEFENDANTS**

**DEFENDANTS: PD19) SRI. N.H.R. Prasad Reddy**, S/o N.H.P Shiva Reddy, aged about 52 years, R/at C-17, Kudremukh Colony, Koramangala 2nd Block, Bengaluru-560 034.

**SUIT SUMMONS/NOTICE TO DEFENDANTS UNDER ORDER 5 RULE 20 OF C.P.C.**

All that piece and parcel of the immoveable property comprised in Sy. No. 2005 measuring 14 guntas situated at Kengeri Village, Bangalore South Taluk, converted for non-agricultural purpose by conversion order bearing number ALN.SR.(S):236 1994-95 dated 20.07.1995 and ALN.(S):SR(K.T) 7/2004-05 dated 17.08.2004 and is bounded on the:-
**East by :** Land belonging to Chinnappayyanna,
**West by :** Madivalara Magadappa's land,
**North by :** Magadappa's land, and,
**South by :** Railwayline.

**SCHEDULE C PROPERTY**

All that piece and parcel of the immoveable property comprised of agricultural lands in Sy. No. 2007 measuring 13 guntas, situated at Kengeri Village, Bangalore South Taluk and bounded on the:-
**East by :** Government lake,
**West by :** Munisamaiah's land,
**North by :** Kaverappa's land, Arundathi Nagar Sun City, Nandan Garden Road, Kengeri Upanagara and
**South by :** Railway Road.

GIVEN UNDER MY HAND AND THE SEAL OF THIS COURT ON THIS 04TH DAY OF March 2026.

By Order of the Court
Sd/- Senior Sheristedar
City Civil Court, Bangalore

IN THE COURT OF THE HON'BLE PRL. CIVIL JUDGE AND JMFC AT KOLAR

P & SC No.01/2026

**BETWEEN ; 1. Smt.SHASHIKALA.M** W/o Late Nanjundappa.Y Aged about 60 years, **2. Sri. Deepak Darshan.N** S/o Late Nanjundappa.Y Aged about 29 years, Both are R/o #289, Ambedkar Nagara, KOLAR TOWN-563 101 ...Petitioners

AND ;

NIL...Respondent

**NOTICE TO THE INTERESTED PERSON UNDER ORDER 5 RULE 20 OF CPC BY WAY OF PAPER PUBLICATION**

Whereas the petitioners in the above case had filed the above petition against the respondent for issue of Succession Certificate in respect of petition schedule amount on the file of this Hon'ble Court. It is hereby informed through this Paper Publication, that anybody got any interest in the above matter may appear before this Hon'ble Court in person or duly instructed by his advocate on 27/4/2026 at 11:00 AM if he/she failed to appear before this Hon'ble Court on such date failing which the matter will be heard and determined ex parte.

**SCHEDULE**

**1.** Annual maintenance for the year 2022-23 of LC No:145 Rain Water Drain ACH:0.80 and Road at Ch:0.00 to 0.72 Km in Kolar Antharagange Road in Kolar Taluk, completed work bill amount of **Rs.2,84,698/-** (BR No.597 Dt: 25/09/2023). **2.** Security Deposit (FDR) No: 182504 dated: 31/01/2023 amount of **Rs.7,283.00. 3.** Security Deposit (FDR) No: 331659 dated: 01/01/2022 amount of Rs.17,454.00.

**Total amount of Rs.3,09,433/-**

Given under my hand and Seal of the Court on 12/03/2026.

By Order of the Court
Sheristedar, Prl.,Civil Judge & JMFC Court, Kolar

Advocate for Petitioner
**I. NAGARAJA,** Advocate, Kolar.

ಕರ್ನಾಟಕ ಸರ್ಕಾರ

# ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಸಂಖ್ಯೆ : ಕೆಎಂಸಿಆರ್‌ಐ/ಟೆಂಡರ್/2025-26/769 ದಿನಾಂಕ : 12-03-2026

## ಇ-ಟೆಂಡರ್ ಪ್ರಕಟಣೆ

[illegible]

| ಕ್ರ. ಸಂ. | ಕಾಮಗಾರಿ ಹೆಸರು | ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ. | ಟೆಂಡರ್ ಫಾರಂ ಬೆಲೆ ರೂ. | ಮುಂಗಡ ಠೇವಣಿ ಹಣ ರೂ. | ಅವಧಿ (ಮಳೆಗಾಲ ಸಹಿತ) | ಅರ್ಹ ಗುತ್ತಿಗೆದಾರರ ದರ್ಜೆ | ವರ್ಗ (Category) |
|---|---|---|---|---|---|---|---|
| | ಕೆಡಬ್ಲ್ಯು-3 ಪ್ರಕಾರ ದ್ವಿಲಕೋಟೆ ಪದ್ಧತಿ | | | | | | |
| 1 | [illegible] | 1,27,10,000-00 | ಇ-ಪೋರ್ಟಲ್ ಪ್ರಕಾರ | 1,27,100-00 | 06 ತಿಂಗಳು | 3ನೇ ದರ್ಜೆ ಹಾಗೂ ಮೇಲ್ಪಟ್ಟ ದರ್ಜೆ | ಸಾಮಾನ್ಯ |

[illegible] https://www.kppp.karnataka.gov.in [illegible]

ಸಹಿ/- (ನಿರ್ದೇಶಕರು),
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ ನಿವೇಶನ ಖಾತೆ ನಂ. 31-511-371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110

ಸಂ. ಬಿಐಎಎಪಿಎ/ಟಿಪಿ/ಭೂಉಬ/190/2025-26/3437 ದಿನಾಂಕ : 12.03.2026

## ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ [illegible] 15 ದಿನಗಳೊಳಗಾಗಿ [illegible]

| ಕ್ರ. ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ-ಗು | ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1. | [illegible] | ದೇವನಹಳ್ಳಿ | ಕುಂದಾಣ | [illegible] | 69/1 | 3-20 | ವ್ಯವಸಾಯ | ವಸತಿ |

ಸೂಚನೆ :- [illegible]

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ., ದೇವನಹಳ್ಳಿ

ವಾ.ಸಾ.ಸಂ.ಇ/ಜಾಹ್ನ/ಬಿಐಎ ಸಾಯಿ/621/2025-26

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080-22255210

ಸಂಖ್ಯೆ: ಕಾಇ/ಕವಿ.1/ಎಇ-3 & 4/2025-26/63 ದಿನಾಂಕ: 11.03.2026

## ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

[illegible] ಒಟ್ಟು 06 ಕಾಮಗಾರಿಗಳಿಗೆ [illegible] (http://kppp.karnataka.gov.in) [illegible] ಕನಿಷ್ಠ ರೂ.13.69 ಲಕ್ಷಗಳು, ಗರಿಷ್ಠ ರೂ.282.12 ಲಕ್ಷಗಳು. ಇಎಂಡಿ: ಕನಿಷ್ಠ ರೂ.34,300/-, ಗರಿಷ್ಠ ರೂ.4,23,200/-. [illegible] 2 ರಿಂದ 9 ತಿಂಗಳು. [illegible] ಕ್ರ.ಸಂ.1 ರಿಂದ 5ಕ್ಕೆ 18.03.2026, ಸಂಜೆ 5.20 ಗಂಟೆಯೊಳಗೆ ಮತ್ತು ಕ್ರ.ಸಂ.6ಕ್ಕೆ 20.03.2026, ಬೆಳಗ್ಗೆ 11.30 ಗಂಟೆಯೊಳಗೆ. [illegible] https://kppp.karnataka.gov.in ಮೂಲಕ ಪಡೆಯಬಹುದು.

ಸಹಿ/-ಕಾರ್ಯಪಾಲಕ ಅಭಿಯಂತರರು.

# ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

[illegible] ದೂರವಾಣಿ: 080-26539297 : e-mail : kwbeebng@gmail.com

## ಟೆಂಡರ್ ಅಧಿಸೂಚನೆ (Physical Submission)

[illegible] /2304/2025-26 ದಿನಾಂಕ: 11.03.2026

[illegible]

ಟೆಂಡರ್‌ಗಿಟ್ಟ ಮೊತ್ತ : ರೂ. 4,90,000/- (ಜಿ.ಎಸ್.ಟಿ.ಹೊರತುಪಡಿಸಿ), ಇ.ಎಂ.ಡಿ ಮೊತ್ತ : ರೂ.12,500/-

ಟೆಂಡರ್ ವಿವರ: 1) [illegible] 13.03.2026 ರಿಂದ 27.03.2026ರ ಸಂಜೆ 5:00 ಗಂಟೆಯವರೆಗೆ. 2) [illegible] 27.03.2026ರ ಸಂಜೆ 5:30ರವರೆಗೆ. 3) [illegible] 30.03.2026ರ ಬೆಳಿಗ್ಗೆ 11:00 ಗಂಟೆಯ ನಂತರ. [illegible] 080-26539297 [illegible]

ಸಹಿ/- ಕಾರ್ಯಪಾಲಕ ಅಭಿಯಂತರರು

# ಕೃಷಿ ಮಾರಾಟ ಇಲಾಖೆ
## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಾಳಿಕೋಟೆ

[illegible]/497/2025-26 ದಿನಾಂಕ:07.03.2026

## ಇ-ಟೆಂಡರ್ ಪ್ರಕಟಣೆ

ಕಾಮಗಾರಿಯ ಹೆಸರು: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಾಳಿಕೋಟೆ ವತಿಯಿಂದ 2025-26 ನೇ ಸಾಲಿನ RIDF-31 ಯೋಜನೆಯಡಿಯಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಿಸುವ ಕಾಮಗಾರಿ.

ಟೆಂಡರಗಿಟ್ಟ ಮೊತ್ತ ರೂ. 4,15,53,781/- (GST ಪ್ರತ್ಯೇಕ)
ಇಎಂಡಿ ಮೊತ್ತ ರೂ. 6,24,000/-

ಮೇಲ್ಕಂಡಂತೆ 2025-26 ನೇ ಸಾಲಿನ RIDF-31 ಯೋಜನೆಯಡಿಯಲ್ಲಿ ಅಭಿವೃದ್ಧಿ ಕಾಮಗಾರಿಯನ್ನು (E-Portal) ಮೂಲಕ ಟೆಂಡರ ಹೊರಡಿಸಲಾಗಿದ್ದು, ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:15.04.2026 ರ ಸಾಯಂಕಾಲ 5.30 ಗಂಟೆಗೆ ನಿಗದಿಪಡಿಸಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಹಾಗೂ https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ, ಕೃಉಮಾಸ, ತಾಳಿಕೋಟೆ
ಸಹಿ/- ಆಡಳಿತಾಧಿಕಾರಿಗಳು, ಕೃಉಮಾಸ, ತಾಳಿಕೋಟೆ

ಕರ್ನಾಟಕ ಸರ್ಕಾರ

# ಕಾರ್ಯಪಾಲಕ ಅಭಿಯಂತರರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.

[illegible] 2025-26 ದಿನಾಂಕ: 11.03.2026

## ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ: 57/2025-26

[illegible] 5054 [illegible] 03 [illegible] https://kppp.karnataka.gov.in, [illegible] 18.03.2026ರ ಸಂಜೆ 4.30ರವರೆಗೆ [illegible]

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಮಂಡ್ಯ

ಕರ್ನಾಟಕ ಸರ್ಕಾರ

# ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಯಾದಗಿರಿ.

[illegible]/2025-26/2177 ದಿನಾಂಕ:12.03.2026

## ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) (ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿ ಹೆಸರು ಮತ್ತು ಇಂಡೆಂಟ್ ಸಂಖ್ಯೆ: (1) [illegible] RDPR/2025-26/RD/WORK_INDENT24973 Other (2) [illegible] RDPR/2025-26/RD/WORK_INDENT25421 Other (3) [illegible] RDPR/2025-6/OW/WORK_INDENT25422 Other (4) [illegible] RDPR/2025-26/RD/WORK_INDENT24843 Other (5) [illegible] RDPR/2025-26/OW/WORK_INDENT25423 Other 2) [illegible] 5054 [illegible] 3) [illegible] 2.60 [illegible] ರೂ. 50.00 ಲಕ್ಷ 4) [illegible] 5) [illegible] 13.03.2026 ರಿಂದ 23.03.2026 ಸಾಯಂಕಾಲ 4:00 ಗಂಟೆವರೆಗೆ 6) [illegible] 7) [illegible] 23.03.2026 ಸಾಯಂಕಾಲ 4:00 ಗಂಟೆವರೆಗೆ 8) [illegible] 25.03.2026 ಬೆಳ್ಳಗೆ 11:00 ನಂತರ 9) [illegible] 10) [illegible] https://kppp.karnataka.gov.in

ಸೂಚನೆ :- [illegible] https://kppp.karnataka.gov.in/ [illegible]

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರ/589/ಕೆ.ಎಸ್.ಎಂ.ಸಿ.&ಎ/2025-26

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[illegible] ಹುಬ್ಬಳ್ಳಿ-580023. Tel : 0836-2223526
E-mail: seepmc.hescom@gmail.com
eepmc1.hescom@gmail.com Website: www.hescom.co.in

CIN: U31401KA2002SGC030437

No: HESCOM/SEE(PMC)/EE-P1/AEE-1 & 2/2025-26/CYS-12249 Date: 12-03-2026

## ಟೆಂಡರ್ ಪ್ರಕಟಣೆ

[illegible]

| ಕ್ರ. ಸಂ. | Particulars | Bid indent No |
|---|---|---|
| 1 | [illegible] (NWKRTC), [illegible] 5000 [illegible] 33 [illegible] | HESCOM/2025-26/ EL/WORK_INDENT976 |
| 2 | [illegible] (NWKRTC) [illegible] 5000 [illegible] | HESCOM/2025-26/ EL/WORK_INDENT989 |
| 3 | [illegible] (KKRTC) [illegible] 3000 [illegible] | HESCOM/2025-26/ EL/WORK_INDENT990 |

[illegible] www.kppp.karnataka.gov.in ರಲ್ಲಿ ದಿನಾಂಕ 12.03.2026, [illegible] 5.30 [illegible]

ಸಹಿ/-
ಅಧೀಕ್ಷಕ ಅಭಿಯಂತರರು(ವಿ) (ಪಿಎಂಸಿ), ಹೆಸ್ಕಾಂ, ಹುಬ್ಬಳ್ಳಿ

# ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.2, ಹೂವಿನಹಡಗಲಿ, ವಿಜಯನಗರ ಜಿಲ್ಲೆ.

Ph. No. 08399-200001 email:eeslid2hdl@gmail.com

## ಅಲ್ಪಾವಧಿಟೆಂಡರ್ ಪ್ರಕಟಣೆ(call-2) (ONLYTHROUGH "e-Procurement" SYSTEM)

[illegible] ಸಂಖ್ಯೆ:1890/2025-26ದಿನಾಂಕ: 09.03.2026

[illegible] "Repairs to Canals of Right Side of Singataluru Lift Irrigation Scheme for the Year 2025-26" [illegible] (KNNL/2025-26/OW/WORK_INDENT4082/call-2) [illegible] 423.46 [illegible] 6.35 [illegible]

[illegible] 10.03.2026 [illegible] "https:// kppp.karnataka.gov.in", [illegible] 20.03.2026 [illegible] 23.03.2026 [illegible] Pre-bid [illegible] 13.03.2026 [illegible] e-procurement Helpdesk Phone No's:+91-80-46010000, +91-80-68948777 [illegible]

ಸಹಿ/- ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿಯೋಜನೆ, ನಂ. 2 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಹೂವಿನಹಡಗಲಿ, ವಿಜಯನಗರಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/[illegible]/587

# ಮಕ್ಕಳ ಸ್ಥೂಲಕಾಯ ತಡೆಗೆ ಒಪ್ಪಂದ

**ಬೆಂಗಳೂರು:** ಭಾರತದಲ್ಲಿ ಹೆಚ್ಚುತ್ತಿರುವ ಮಕ್ಕಳ ಸ್ಥೂಲಕಾಯದ ಸಮಸ್ಯೆಯನ್ನು ನಿಯಂತ್ರಿಸಲು ಮತ್ತು ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಅರ್ಥಿಕ ನೆರವು ನೀಡುವ ಉದ್ದೇಶದೊಂದಿಗೆ ಡಬ್ಲ್ಯುಎಚ್‌ಒ ಫೌಂಡೇಶನ್ ಮತ್ತು ನೋವೋ ನಾರ್ಡಿಸ್ಕ್ ಸಂಸ್ಥೆಗಳು ಪರಸ್ಪರ ಒಪ್ಪಂದ ಮಾಡಿಕೊಂಡಿವೆ.

ಈ ಸಹಯೋಗವು ಶಾಲಾ ಆಧಾರಿತ ಆರೋಗ್ಯ ಕಾರ್ಯಕ್ರಮಗಳ ಮೂಲಕ ಸ್ಥೂಲಕಾಯತೆ ತಡೆಗಟ್ಟುವ ಗುರಿಯನ್ನು ಹೊಂದಿದ್ದು, ಆಯುಷ್ಮಾನ್ ಭಾರತ್ ಶಾಲಾ ಆರೋಗ್ಯ ಮತ್ತು ಸ್ವಾಸ್ಥ್ಯ ಕಾರ್ಯಕ್ರಮ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯ ಆರೋಗ್ಯ ಉತ್ತೇಜಕ ಶಾಲೆಗಳ ಚೌಕಟ್ಟಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲಿದೆ. ಈ ಸಹಭಾಗಿತ್ವವು ಆರೋಗ್ಯಕರ ಜೀವನಶೈಲಿ, ದೈಹಿಕ ಚಟುವಟಿಕೆಗಳಿಗೆ ಪ್ರೋತ್ಸಾಹ, ಆರಂಭಿಕ ಹಂತದಲ್ಲೇ ಅಪಾಯ ಗುರುತಿಸುವಿಕೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಜ್ಜುಗೊಳಿಸುವಿಕೆಯ ಮೇಲೆ ಗಮನ ಕೇಂದ್ರೀಕರಿಸಲಿದೆ. ಭಾರತದಲ್ಲಿ ಸ್ಥೂಲಕಾಯತೆ ಸಮಸ್ಯೆ ಮತ್ತು ತುರ್ತು ಪರಿಸ್ಥಿತಿಯನ್ನು ಮನಗಂಡು, ಸುಸ್ಥಿರ ತಡೆಗಟ್ಟುವಿಕೆ ಕ್ರಮಗಳನ್ನು ಜಾರಿಗೆ ತರಲು ಈ ಸಂಸ್ಥೆಗಳು ಭಾರತಕ್ಕೆ ಆದ್ಯತೆ ನೀಡಬೇಕೆಂದು ಪರಿಗಣಿಸಿದೆ. ಅಲ್ಲದೆ ಜಿಲ್ಲೆಗಳಲ್ಲಿನ ಶಾಲಾ ಪರಿಸರವನ್ನು ಆರೋಗ್ಯಕರವಾಗಿಸುವುದು, ಆರೋಗ್ಯ ತಪಾಸಣೆ, ಜೀವನಶೈಲಿ ಶಿಕ್ಷಣ ಮತ್ತು ಮಕ್ಕಳಲ್ಲಿ ಹಾಗೂ ಹದಿಹರೆಯದವರಲ್ಲಿ ಆರೋಗ್ಯದ ಅಪಾಯಗಳನ್ನು ಮೊದಲೇ ಗುರುತಿಸಲು ಮಾನವ ಆರೋಗ್ಯ ಬೆಂಬಲವನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.



# ಸ್ತನ ಕ್ಯಾನ್ಸರ್ ಅರಿವು ಅವಶ್ಯ



**ಬೆಂಗಳೂರು:** ಮಹಿಳೆಯರು ಪ್ರಸ್ತುತ ಕಾಲಘಟ್ಟದಲ್ಲಿ ಉತ್ತಮವಾದ ಆರೋಗ್ಯ ಕಾಪಾಡಿಕೊಳ್ಳುವ ದೃಷ್ಟಿಯಿಂದ ಸ್ತನ ಕ್ಯಾನ್ಸರ್ ಅರಿವು ಮೂಡಿಸಿಕೊಳ್ಳುವುದು ಅತ್ಯಗತ್ಯ ಎಂದು ಕ್ಯಾನ್ಸರ್ ತಜ್ಞೆ ಡಾ.ವಿಜಯಲಕ್ಷ್ಮಿ ದೇಶಮಾನೆ ಅಭಿಪ್ರಾಯಪಟ್ಟರು.

ಸಾಯಿ ವಿದ್ಯಾ ತಾಂತ್ರಿಕ ಮಹಾವಿದ್ಯಾಲಯ ಮತ್ತು ಸಾಯಿ ವಿದ್ಯಾ ಪ್ರಥಮ ದರ್ಜೆ ಕಾಲೇಜು ಜಂಟಿಯಾಗಿ ಆಚರಿಸಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಕಾರ್ಯಕ್ರಮದಲ್ಲಿ ಮಾತನಾಡಿ, ಕ್ಯಾನ್ಸರ್ ಎಂದ ಮಾತ್ರಕ್ಕೆ ಹೆದರುವ ಅಗತ್ಯವಿಲ್ಲ, ಇದೊಂದು ಗುಣಪಡಿಸಬಹುದಾದ ಕಾಯಿಲೆಯಾಗಿದೆ. ಆದರಿಂದ ಸರಿಯಾದ ಸಮಯದಲ್ಲಿ ಪತ್ತೆ ಹಚ್ಚಿ, ಚಿಕಿತ್ಸೆ ನೀಡಿದರೆ ಖಂಡಿತ ಗುಣವಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಸಾಯಿ ವಿದ್ಯಾ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಮಂಜುನಾಥ್ ಟಿ.ಎನ್., ಸಾಯಿ ವಿದ್ಯಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜೋಗಿನ್ ಡಿ.ಸಾರಾ ಮಹಿಳಾ ಘಟಕದ ಅಧ್ಯಕ್ಷೆ ಡಾ.ವೃಂದಾ ಶೆಟ್ಟಿ, ಸಂಚಾಲಕಿ ಡಾ. ವಾಣಿ ಬಿ.ಪಿ. ಇತರರು ಉಪಸ್ಥಿತರಿದ್ದರು.

**ವಾಕಥಾನ್**



ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ನಾರಿ ಪವರ್ ಟೀಂ ಆಯೋಜಿಸಿದ್ದ ವುಮೆನ್-ಆಥಾನ್ 4ನೇ ಆವೃತ್ತಿ ಯಲ್ಲಿ 1,500 ಮಹಿಳೆಯರು ತಮ್ಮ ಆರೈಕೆ ಬಗ್ಗೆ ಕಾಳಜಿ ವಹಿಸಿ ಎಂಬ ಸಂದೇಶದೊಂದಿಗೆ ವಾಕಥಾನ್ ನಡೆಸಿದರು.

## ಕಿರುಸುದ್ದಿ

### ಕಾಮಗಾರಿ: ರೈಲು ಸಂಚಾರದಲ್ಲಿ ಬದಲಾವಣೆ


**ಬೆಂಗಳೂರು:** ಮಲ್ಲಸಂದ್ರ ಮತ್ತು ಗುಬ್ಬಿ ನಿಲ್ದಾಣಗಳ ನಡುವೆ ಇರುವ ಲೆವೆಲ್ ಕ್ರಾಸಿಂಗ್ ಕಾಮಗಾರಿಯ ಹಿನ್ನೆಲೆಯಲ್ಲಿ, ಕೆಲ ರೈಲುಗಳ ಸೇವೆಯಲ್ಲಿ ಬದಲಾವಣೆ ಮಾಡಲಾಗಿದೆ. ರೈಲು ಸಂಖ್ಯೆ 16239/16240 ಚಿಕ್ಕಮಗಳೂರು–ಯಶವಂತಪುರ–ಚಿಕ್ಕಮಗಳೂರು ದೈನಂದಿನ ಎಕ್ಸ್‌ಪ್ರೆಸ್ ಮತ್ತು ರೈಲು ಸಂಖ್ಯೆ 12614 ಕೆಎಸ್‌ಆರ್ ಬೆಂಗಳೂರು–ಮೈಸೂರು ಒಡೆಯರ್ ದೈನಂದಿನ ಎಕ್ಸ್‌ಪ್ರೆಸ್ ರೈಲುಗಳನ್ನು ಏ.8 ಮತ್ತು 15 ರಂದು ರದ್ದುಗೊಳಿಸಲಾಗಿದೆ. ರೈಲು ಸಂಖ್ಯೆ 66567 ಕೆಎಸ್‌ಆರ್ ಬೆಂಗಳೂರು–ತುಮಕೂರು ಮತ್ತು ರೈಲು ಸಂಖ್ಯೆ 66572 ತುಮಕೂರು-ಕೆಎಸ್‌ಆರ್ ಬೆಂಗಳೂರು ರೈಲುಗಳನ್ನು ಏ.8 ರಂದು ರದ್ದುಗೊಳಿಸಲಾಗಿದೆ. ಏ.8, 11, 12 ಮತ್ತು 15 ರಂದು ರೈಲು ಸಂಖ್ಯೆ 20652 ತಾಳಗುಪ್ಪ-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಅರಸೀಕೆರೆ ಮತ್ತು ಬೆಂಗಳೂರು ನಡುವೆ ರದ್ದಾಗಲಿದೆ. ಈ ರೈಲು ಅರಸೀಕೆರೆಯಲ್ಲಿ ತನ್ನ ಪ್ರಯಾಣ ಮುಕ್ತಾಯಗೊಳಿಸಲಿದೆ. ಏ.8, 11, 12 ಮತ್ತು 15 ರಂದು ರೈಲು ಸಂಖ್ಯೆ 12725 ಕೆಎಸ್‌ಆರ್ ಬೆಂಗಳೂರು–ಧಾರವಾಡ ಸಿದ್ದಗಂಗಾ ಎಕ್ಸ್‌ಪ್ರೆಸ್ ಬೆಂಗಳೂರು ಮತ್ತು ಅರಸೀಕೆರೆ ನಡುವೆ ರದ್ದಾಗಲಿದೆ. ಇದು ಬೆಂಗಳೂರಿನ ಬದಲಿಗೆ ಅರಸೀಕೆರೆಯಿಂದ ತನ್ನ ನಿಗದಿತ ಸಮಯಕ್ಕೆ ಹೊರಡಲಿದೆ. ಏ.8 ಮತ್ತು 15 ರಂದು ರೈಲು ಸಂಖ್ಯೆ 12726 ಧಾರವಾಡ–ಕೆಎಸ್‌ಆರ್ ಬೆಂಗಳೂರು ಸಿದ್ದಗಂಗಾ ಎಕ್ಸ್‌ಪ್ರೆಸ್ ಅರಸೀಕೆರೆ ಮತ್ತು ಬೆಂಗಳೂರು ನಡುವೆ ರದ್ದಾಗಲಿದ್ದು, ಅರಸೀಕೆರೆಯಲ್ಲಿ ಪ್ರಯಾಣ ಮುಕ್ತಾಯಗೊಳಿಸಲಿದೆ.

### ರೌಡಿಶೀಟರ್ ಮಹೇಶ್ ಕೊಲೆ ಪ್ರಕರಣ: ಜಾಮೀನು ನಿರಾಕರಣೆ

**ಬೆಂಗಳೂರು:** ರೌಡಿ ಶೀಟರ್ ಮಹೇಶ್ ಕೊಲೆ ಪ್ರಕರಣ ಸಂಬಂಧ ಜೆ.ನಾಗರಾಜು ಅಲಿಯಾಸ್ ವಿಲ್ಸನ್ ಗಾರ್ಡನ್ ನಾಗ ಸೇರಿದಂತೆ ಆರು ಆರೋಪಿಗಳಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ. ಪ್ರಕರಣ ಸಂಬಂಧ ಜಾಮೀನು ಕೋರಿ ಒಂದನೇ ಆರೋಪಿ ಜೆ.ನಾಗರಾಜು ಅಲಿಯಾಸ್ ವಿಲ್ಸನ್ ಗಾರ್ಡನ್ ನಾಗ, ಎರಡನೇ ಆರೋಪಿ ಮೋಹನ ಅಲಿಯಾಸ್ ಡಬಲ್ ಮೀಟರ್ ಮೋಹನ್, ಒಂಭತ್ತನೇ ಆರೋಪಿ ಎ.ನವೀನ್ ಕುಮಾರ್, 11ನೇ ಆರೋಪಿ ಗೋಕುಲ್, ಆರೋಪಿ 14ನೇ ಆರೋಪಿ ಬಿ.ಸುರೇಶ್ ಬಾಬು ಮತ್ತು 16ನೇ ಆರೋಪಿ ದಿನೇಶ್ ಅಲಿಯಾಸ್ ಡಿಂಯೋ ದಿನಿ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾ. ಎಸ್.ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ಪೀಠ ವಜಾಗೊಳಿಸಿದೆ. ಅರ್ಜಿದಾರ ಆರೋಪಿಗಳ ಪೂರ್ವಾಪರ ಮತ್ತು ಪ್ರಕರಣದಲ್ಲಿನ ಆರೋಪಗಳ ಗಂಭೀರತೆ ಪರಿಶೀಲಿಸಿದಾಗ ಪ್ರಕರಣದ ಸಾಕ್ಷಿಗಳನ್ನು ಬೆದರಿಸುವ ಸಾಮರ್ಥ್ಯ ಆರೋಪಿಗಳಿಗೆ ಇದೆ. ಪ್ರಕರಣದಲ್ಲಿ ಎಂಟು ಮಂದಿ ಪ್ರತ್ಯಕ್ಷದರ್ಶಿಗಳಿದ್ದಾರೆ. ಅವರನ್ನು ವಿಚಾರಣಾಧೀನ ನ್ಯಾಯಾಲಯ ವಿಚಾರಣೆ ನಡೆಸುವುದು ಬಾಕಿ ಇದೆ. ಆರೋಪಿಗಳ ವಿರುದ್ಧದ ಎಲ್ಲಾ ಆರೋಪಗಳು ಮತ್ತು ಪ್ರಕರಣದ ಗಂಭೀರತೆ, ಸಾಕ್ಷ್ಯಗಳ ಸ್ವರೂಪ ಮತ್ತು ಆರೋಪಿಗಳ ಪೂರ್ವಾಪರ ಪರಿಗಣಿಸಿದಾಗ ಈ ಹಂತದಲ್ಲಿ ಅರ್ಜಿದಾರರ ಮನವಿ ಪುರಸ್ಕರಿಸಲಾಗದು ಎಂದು ಪೀಠ ಆದೇಶದಲ್ಲಿ ತಿಳಿಸಿದೆ. ವಿಚಾರಣಾಧೀನ ನ್ಯಾಯಾಲಯ ಸೂಕ್ತ ಸಮಯಕ್ಕೆ ಮುಖ್ಯ ವಿಚಾರಣೆ ಆರಂಭಿಸದಿದ್ದರೆ ಆಗ ಜಾಮೀನು ಕೋರಿ ಅರ್ಜಿದಾರರು ವಿಚಾರಣಾಧೀನ ನ್ಯಾಯಾಲಯದ ಮುಂದೆಯೇ ಅರ್ಜಿ ಸಲ್ಲಿಸುವ ಮುಕ್ತ ಅವಕಾಶ ಹೊಂದಿರುತ್ತಾರೆ ಎಂದು ಪೀಠ ಇದೇ ವೇಳೆ ಸ್ಪಷ್ಟಪಡಿಸಿದೆ.

### ಟಿಪ್ಪರ್ ಡಿಕ್ಕಿ: ವೈದ್ಯ ವಿದ್ಯಾರ್ಥಿನಿ ಸಾವು

**ಬೆಂಗಳೂರು:** ಮೈಸೂರು ರಸ್ತೆಯ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮುಂಭಾಗ ಬುಧವಾರ ಸಂಜೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರನ್ನು ಕೃತಿಕಾ (21) ಎಂದು ಗುರುತಿಸಲಾಗಿದೆ. ಇವರು ರಾಜರಾಜೇಶ್ವರಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ ಎಂದು ತಿಳಿದುಬಂದಿದೆ. ಸಂಜೆ ಕಾಲೇಜು ಮುಗಿಸಿಕೊಂಡು ಕೃತಿಕಾ ಹಾಗೂ ಅವರ ಸ್ನೇಹಿತೆ ಹಂಸ ಎಂಬುವರು ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಈ ವೇಳೆ ಆರ್.ಆರ್. ಆಸ್ಪತ್ರೆಯ ಎಕ್ಸಿಟ್ ಗೇಟ್ ಬಳಿ ದ್ವಿಚಕ್ರ ವಾಹನ ಹಾಗೂ ಬೆಂಗಳೂರಿನಿಂದ ಮೈಸೂರು ಕಡೆಗೆ ಚಲಿಸುತ್ತಿದ್ದ ಟಿಪ್ಪರ್ ಲಾರಿ ನಡುವೆ ಅಪಘಾತ ಸಂಭವಿಸಿದೆ. ಲಾರಿಗೆ ಡಿಕ್ಕಿ ಹೊಡೆದ ರಭಸಕ್ಕೆ ಇಬ್ಬರೂ ರಸ್ತೆಗೆ ಬಿದ್ದಿದ್ದು, ಕೃತಿಕಾ ಅವರ



ಮೇಲೆ ಟಿಪ್ಪರ್ ಹರಿದ ಪರಿಣಾಮ ಅವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಹಂಸ ಅವರಿಗೆ ಗಂಭೀರ ಗಾಯಗಳಾಗಿದ್ದು, ತಕ್ಷಣವೇ ಅವರನ್ನು ಸಮೀಪದ ಆರ್.ಆರ್. ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಪ್ರಸ್ತುತ ಅವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಮೂಲಗಳು ತಿಳಿಸಿವೆ. ವಿಷಯ ತಿಳಿಯುತ್ತಿದ್ದಂತೆ ಪಶ್ಚಿಮ ವಿಭಾಗದ ಸಂಚಾರ ಡಿಸಿಪಿ ಅನೂಪ್ ಶೆಟ್ಟಿ ಹಾಗೂ ಕೆಂಗೇರಿ ಸಂಚಾರ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕೈಗಾರಿಕೆ, ಹೋಟೆಲ್‌ಗಳಿಗೆ ನಿರಂತರ ಪೂರೈಕೆ | ಭಾರತೀಯ ಅನಿಲ ಪ್ರಾಧಿಕಾರ ನಿಯಮಿತ ಭರವಸೆ

# ಪಿಎನ್‌ಜಿ ಪೂರೈಕೆಯಲ್ಲಿ ಕೊರತೆ ಇಲ್ಲ

**ಬೆಂಗಳೂರು:** ಬೆಂಗಳೂರಿನಲ್ಲಿ ಪೈಪ್ಡ್ ನೈಸರ್ಗಿಕ ಅನಿಲ (ಪಿಎನ್‌ಜಿ) ಪೂರೈಕೆಯ ಕೊರತೆಯಿಲ್ಲ ಮತ್ತು ಪಿಎನ್‌ಜಿ ನೆಟ್‌ವರ್ಕ್ ಸಂಪರ್ಕ ಹೊಂದಿದ ಹೋಟೆಲ್‌ಗಳು ಮತ್ತು ಕೈಗಾರಿಕೆಗಳು ತಮ್ಮ ಕಾರ್ಯಾಚರಣೆಗಳಿಗೆ ಯಾವುದೇ ಅಡಚಣೆಯಿಲ್ಲದೆ ನಿರಂತರ ಪೂರೈಕೆಯನ್ನು ಪಡೆಯುವುದನ್ನು ಮುಂದುವರಿಸುತ್ತವೆ ಎಂದು ಭಾರತೀಯ ಅನಿಲ ಪ್ರಾಧಿಕಾರ ಲಿಮಿಟೆಡ್(ಗೇಲ್)ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಸಂಜಯ್ ಕುಮಾರ್ ಸಿಂಗ್ ತಿಳಿಸಿದರು.

ಬೆಂಗಳೂರು ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿ (ಬಿಸಿಐಸಿ)ಆಯೋಜಿಸಿದ್ದ ನೈಸರ್ಗಿಕ ಅನಿಲ ಪೂರೈಕೆಯ ದೃಷ್ಟಿಕೋನ ಮತ್ತು ಕೈಗಾರಿಕಾ ಸಿದ್ಧತೆ ಕುರಿತು ಸಂವಾದಾತ್ಮಕ ಅಧಿವೇಶನದಲ್ಲಿ ವಿವಿಧ ಕೈಗಾರಿಕೆಗಳ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿ, ಬೆಂಗಳೂರಿನಲ್ಲಿ ಪೈಪ್ಡ್ ನೈಸರ್ಗಿಕ ಅನಿಲ ಪೂರೈಕೆ ಸ್ಥಿರವಾಗಿದೆ ಮತ್ತು ಸಂಪೂರ್ಣವಾಗಿ ನಿಯಂತ್ರಣದಲ್ಲಿದೆ ಎಂದು ತಿಳಿಸಿದರು.

ಪಿಎನ್‌ಜಿ ನೆಟ್‌ವರ್ಕ್ ಸಂಪರ್ಕ ಹೊಂದಿದ ಕೈಗಾರಿಕೆಗಳು, ಹೋಟೆಲ್‌ಗಳು ಮತ್ತು ವಾಣಿಜ್ಯ ಸಂಸ್ಥೆಗಳು ಚಿಂತಿಸಬೇಕಾಗಿಲ್ಲ, ಏಕೆಂದರೆ ಪೂರೈಕೆಯಲ್ಲಿ ಯಾವುದೇ ಅಡಚಣೆ ಇಲ್ಲ ಮತ್ತು ವ್ಯಾಪಾರ ಕಾರ್ಯಾಚರಣೆಗಳು ಅಡೆತಡೆಯಿಲ್ಲದೆ ಮುಂದುವರಿಯುತ್ತವೆ. ವಾಣಿಜ್ಯ ಎಲ್‌ಪಿಜಿಯಲ್ಲಿರುವ ಮತ್ತು ಪೂರೈಕೆಯ ಬಗ್ಗೆ ಕಾಳಜಿ ಹೊಂದಿರುವ ಹೋಟೆಲ್‌ಗಳು ಕೇವಲ ಎರಡು ತಿಂಗಳೊಳಗೆ ಲಭ್ಯತೆಗೆ ಒಳಪಟ್ಟು ಪಿಎನ್‌ಜಿ ಮಾರ್ಗಕ್ಕೆ ಬದಲಾಯಿಸಬಹುದು ಎಂದು




**ಸಹಾಯವಾಣಿ ಸಂಪರ್ಕಿಸಿ**

ಜಿಲ್ಲೆಯಲ್ಲಿ ಗೃಹಬಳಕೆ ಅಡುಗೆ ಅನಿಲವು ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದು, ಅನಿಲದ ಕೊರತೆ ಇರುವುದಿಲ್ಲ. ಆದ್ದರಿಂದ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಹಾಗೂ ಗೃಹಬಳಕೆ ಅಡುಗೆ ಅನಿಲಕ್ಕೆ ಸಂಬಂಧಿಸಿದಂತೆ ಯಾವುದೇ ಕುಂದುಕೊರತೆಗಳು ಇದ್ದಲ್ಲಿ ಸಹಾಯವಾಣಿ ಸಂಖ್ಯೆ 9611404384 ಮೂಲಕ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವದಂತಿಗಳಿಗೆ ಕಿವಿಗೊಡಬೇಡಿ: ನಗರ ಡಿಸಿ ಸ್ಪಷ್ಟನೆ

**ಬೆಂಗಳೂರು:** ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದೆಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಜಿ. ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

> ಗೇಲ್‌ನಲ್ಲಿ ನಾವು ನಮ್ಮ ಪೈಪ್‌ಲೈನ್ ಜಾಲವನ್ನು ಸ್ಥಿರವಾಗಿ ವಿಸ್ತರಿಸುತ್ತಿದ್ದೇವೆ ಮತ್ತು ಬೆಂಗಳೂರಿನಾದ್ಯಂತ ಹೊಸ ಪೈಪ್‌ಲೈನ್ ಅನಿಲ ಸಂಪರ್ಕಗಳನ್ನು ಒದಗಿಸಲು ಸಿದ್ಧರಿದ್ದೇವೆ. ಇದರಿಂದಾಗಿ ಹೆಚ್ಚಿನ ಗ್ರಾಹಕರು ಪಿಎನ್‌ಜಿಗೆ ಬದಲಾಯಿಸಿಕೊಳ್ಳಬಹುದು. ಇದು ಪರಿಣಾಮಕಾರಿ ಮಾತ್ರವಲ್ಲದೆ ಸ್ವಚ್ಛ ಮತ್ತು ಹೆಚ್ಚು ಸುಸ್ಥಿರ ಇಂಧನ ಪರಿಹಾರವಾಗಿದೆ.
>
> ■ **ಸಂಜಯ್ ಕುಮಾರ್ ಸಿಂಗ್,** ಗೇಲ್ ಸಿಜಿಎಂ

ಮಾಹಿತಿ ನೀಡಿದರು. ಬಿಸಿಐಸಿ ಹಿರಿಯ ಉಪಾಧ್ಯಕ್ಷ ಕೆ.ರವಿ ಮಾತನಾಡಿ, ಬೆಂಗಳೂರಿನಲ್ಲಿ ಎಲ್‌ಪಿಜಿ ಮತ್ತು ಪಿಎನ್‌ಜಿ ಲಭ್ಯತೆಯ ಬಗ್ಗೆ ಇರುವ ಕಳವಳಗಳನ್ನು ಪರಿಹರಿಸಲು ಮತ್ತು ಉದ್ಯಮ ದೊಂದಿಗೆ ನೇರವಾಗಿ ತೊಡಗಿಸಿಕೊಂಡಿದ್ದಕ್ಕಾಗಿ ಗೇಲ್ ಅನ್ನು ಶ್ಲಾಘಿಸುತ್ತೇವೆ. ನಗರದಲ್ಲಿ ಕೈಗಾರಿಕೆಗಳು, ಹೋಟೆಲ್ ಮತ್ತು ವಾಣಿಜ್ಯ ಸಂಸ್ಥೆಗಳ ಸುಗಮ ಕಾರ್ಯನಿರ್ವಹಣೆಗೆ ವಿಶ್ವಾಸಾರ್ಹ ಮತ್ತು ಅಡೆತಡೆಯಿಲ್ಲದ ಇಂಧನ ಪೂರೈಕೆ ನಿರ್ಣಾಯಕವಾಗಿದೆ. ಪಿಎನ್‌ಜಿ ಪೂರೈಕೆ ಸ್ಥಿರವಾಗಿದೆ ಮತ್ತು ಯಾವುದೇ ಅಡೆತಡೆಯಿಲ್ಲದೆ ಮುಂದುವರಿಯುತ್ತದೆ ಎಂದು ಈ ಸಂವಾದ ಉದ್ಯಮಕ್ಕೆ ಭರವಸೆ ನೀಡಿದೆ ಎಂದು ತಿಳಿಸಿದರು.

# ದ್ವಿಚಕ್ರವಾಹನ ಕಳವು: ಓರ್ವನ ಬಂಧನ

**ಬೆಂಗಳೂರು:** ದ್ವಿಚಕ್ರ ವಾಹನವನ್ನು ಕದಿಯುತ್ತಿದ್ದ ಓರ್ವ ಆರೋಪಿಯನ್ನು ಮಹದೇವಪುರ ಠಾಣಾ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತನಿಂದ ಸುಮಾರು 11.80 ಲಕ್ಷ ರೂ. ಮೌಲ್ಯದ ಒಟ್ಟು 17 ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಅಕ್ಷಯನಗರದ ಪಿ.ಜಿ.ಯೊಂದರ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನವಾಗಿತ್ತು. ಈ ಬಗ್ಗೆ ವಾಹನ ಮಾಲೀಕರು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದ್ದರು. ತನಿಖೆಯನ್ನು ಚುರುಕುಗೊಳಿಸಿ, ಫೆ.23 ರಂದು ಪುಷ್ಪಾಂಜಲಿ ಥಿಯೇಟರ್ ಬಳಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ವ್ಯಕ್ತಿಯನ್ನು ವಿಚಾರಣೆ ನಡೆಸಿದ ವೇಳೆ ಆತ ವಾಹನ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿದ್ದಾನೆ. ಆರೋಪಿಯನ್ನು ಹೆಚ್ಚಿನ ವಿಚಾರಣೆ ನಡೆಸಿದಾಗ, ನಗರದ ವಿವಿಧೆಡೆ ಆತ ನಡೆಸಿದ್ದ ಕಳ್ಳತನದ ಜಾಲ ಬಯಲಾಗಿದೆ.

**ತಮಿಳುನಾಡಿನಲ್ಲಿ ವಾಹನಗಳ ಮಾರಾಟ**

ವಿಚಾರಣೆ ವೇಳೆ ಆರೋಪಿಯು ಬೆಂಗಳೂರಿನ ವಿವಿಧೆಡೆ ಕಳವು ಮಾಡಿದ್ದ 12 ವಾಹನವನ್ನು ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಮಾರಾಟ ಮಾಡಿರುವುದಾಗಿ ತಿಳಿಸಿದ್ದಾನೆ. ಅಲ್ಲದೆ, ಉಳಿದ 4 ವಾಹನಗಳನ್ನು ಕಾಮಧೇನು ಲೇಔಟ್ ಬಳಿ ಬಚ್ಚಿಟ್ಟಿರುವುದಾಗಿ ಮಾಹಿತಿ ನೀಡಿದ್ದಾನೆ. ಈ ಮಾಹಿತಿಯ ಆಧಾರದ ಮೇಲೆ ಪೊಲೀಸರು ಕಾರ್ಯಾಚರಣೆ ನಡೆಸಿ ಕೃಷ್ಣಗಿರಿ ಮತ್ತು ನಗರದ ವಿವಿಧೆಡೆಯಿಂದ ಒಟ್ಟು 17 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಕಾರ್ಯಾಚರಣೆ ಮೂಲಕ ಮಹದೇವಪುರ, ಕಾಡುಗೋಡಿ, ಆವಲಹಳ್ಳಿ, ಬೆಳ್ಳಂದೂರು, ಮಾರತ್ತಹಳ್ಳಿ, ಬೊಮ್ಮನಹಳ್ಳಿ ಮತ್ತು ಎಚ್ಎಸ್ಆರ್ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಾಖಲಾಗಿದ್ದ ಒಟ್ಟು 9 ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ. ಉಳಿದ 8 ವಾಹನಗಳ ವಾರಸುದಾರರ ಪತ್ತೆ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಮಾದಕವಸ್ತು: ಜೈಲು ವಾರ್ಡನ್ ಸೆರೆ

**ಬೆಂಗಳೂರು:** ಪರಪ್ಪನ ಅಗ್ರಹಾರ ಜೈಲಿನ ಭದ್ರತಾ ಹಿತದೃಷ್ಟಿಯಿಂದ ನೇಮಕಗೊಂಡಿದ್ದ ವಾರ್ಡನ್ ಒಬ್ಬರೇ ಕೈದಿಗಳಿಗೆ ಮಾದಕ ವಸ್ತುವನ್ನು ಸರಬರಾಜು ಮಾಡುತ್ತಿದ್ದ ಆರೋಪದ ಮೇಲೆ ಪೊಲೀಸರ ಬಂಧಿಸಿದ್ದಾರೆ.

ಪ್ರಕಾಶ್ ಗಾವಡೆ ಬಂಧಿತ ವಾರ್ಡನ್. ಈತ ಹೊರಗಿನಿಂದ ಜೈಲಿನೊಳಗೆ ಪ್ರವೇಶಿಸುವಾಗ ಅತ್ಯಂತ ಚಾಣಾಕ್ಷತನದಿಂದ ಗಾಂಜಾ ಪ್ಯಾಕೆಟ್‌ಗಳನ್ನು ಅಡಗಿಸಿಟ್ಟು ಜೈಲಿನ ಒಳಗೆ ತರುತ್ತಿದ್ದರು. ಜೈಲಿನ ಒಳಗಿರುವ ವಿಚಾರಣಾಧೀನ ಕೈದಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದ ಬಂಧಿತ ಆರೋಪಿ, ಅವರಿಂದ ಹಣ ಪಡೆದು ನಿಷೇಧಿತ ವಸ್ತುಗಳನ್ನು ಒದಗಿಸುತ್ತಿದ್ದ ಎನ್ನಲಾಗಿದೆ. ಕಳೆದ ಕೆಲವು ದಿನಗಳಿಂದ ಜೈಲಿನ ಆವರಣದಲ್ಲಿ ನಡೆಯುತ್ತಿದ್ದ ಅನುಮಾನಾಸ್ಪದ ಚಟುವಟಿಕೆಗಳ ಮೇಲೆ ಕಣ್ಣಿಟ್ಟಿದ್ದ ಹಿರಿಯ ಅಧಿಕಾರಿಗಳು, ದಿಢೀರ್ ತಪಾಸಣೆ ನಡೆಸಿದಾಗ ಈ ಜಾಲ ಬಯಲಾಗಿದೆ.

ಸದ್ಯ ಆರೋಪಿತ ವಾರ್ಡನ್‌ನನ್ನು ಸೇವೆಯಿಂದ ಅಮಾನತುಗೊಳಿಸಲಾಗಿದ್ದು, ಆತನ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಈ ಅಕ್ರಮ ಜಾಲದಲ್ಲಿ ಜೈಲಿನ ಇತರೆ ಸಿಬ್ಬಂದಿ ಅಥವಾ ಹೊರಗಿನ ಡ್ರಗ್ ಪೆಡ್ಲರ್‌ಗಳ ಕೈವಾಡವಿದೆಯೇ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಪೊಲೀಸರಿಂದ 801 ಅಂಗಡಿ ಪರಿಶೀಲನೆ

**ಬೆಂಗಳೂರು:** ನಗರದ ಪೂರ್ವ ವಿಭಾಗದ ಪೊಲೀಸರು ಧೂಮಪಾನ ರಹಿತ ದಿನದ ಅಂಗವಾಗಿ ವಿಶೇಷ ಕಾರ್ಯಾಚರಣೆ ನಡೆಸಿದ್ದು, ಒಟ್ಟು 801 ಅಂಗಡಿಗಳನ್ನು ಪರಿಶೀಲನೆ ನಡೆಸಿದ್ದಾರೆ.

ಶಾಲಾ–ಕಾಲೇಜುಗಳ ಸುತ್ತಮುತ್ತಲಿನ ಪರಿಸರವನ್ನು ತಂಬಾಕು ಮುಕ್ತವಾಗಿಸುವ ಉದ್ದೇಶದಿಂದ ಪೂರ್ವ ವಿಭಾಗದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಒಟ್ಟು 68 ತಂಡಗಳನ್ನು ರಚಿಸಲಾಗಿತ್ತು. ಈ ತಂಡಗಳು ಪೆಟ್ಟಿ ಅಂಗಡಿಗಳು, ಬೇಕರಿಗಳು, ಕಾಂಡಿಮೆಂಟ್ಸ್ ಸ್ಟೋರ್‌ಗಳು ಹಾಗೂ ಹೋಟೆಲ್‌ಗಳ ಮೇಲೆ ಅನಿರೀಕ್ಷಿತವಾಗಿ ದಾಳಿ ನಡೆಸಿ ಪರಿಶೀಲನೆ ನಡೆಸಿವೆ.

ಈ ವ್ಯಾಪಕ ಕಾರ್ಯಾಚರಣೆಯ ಸಂದರ್ಭದಲ್ಲಿ ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆ ಉಲ್ಲಂಘನೆಗಾಗಿ 324 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಇದರ ಜತೆಗೆ ಇತರೆ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ 334 ಲಘು ಪ್ರಕರಣಗಳನ್ನು ಸಹ ಪೊಲೀಸರು ದಾಖಲಿಸಿದ್ದಾರೆ.

**ಪೊಲೀಸರಿಂದ ಧೂಮಪಾನ ರಹಿತ ದಿನಾಚರಣೆ**

ಕೇವಲ ಕಾನೂನು ಕ್ರಮಕ್ಕೆ ಸೀಮಿತವಾಗದೆ, ಸಾರ್ವಜನಿಕರಲ್ಲಿ ಧೂಮಪಾನ ಹಾಗೂ ತಂಬಾಕು ಉತ್ಪನ್ನಗಳ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಈ ಮೂಲಕ ಜಾಗೃತಿ ಮೂಡಿಸಲಾಗಿದೆ. ಸಾರ್ವಜನಿಕರು ಕಾನೂನು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಪೊಲೀಸ್ ಇಲಾಖೆ ಮನವಿ ಮಾಡಿದ್ದು, ಸಾರ್ವಜನಿಕ ಆರೋಗ್ಯ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಇಂತಹ ಕಾರ್ಯಾಚರಣೆಗಳು ಮುಂದಿನ ದಿನಗಳಲ್ಲಿಯೂ ನಿರಂತರವಾಗಿ ಮುಂದುವರಿಯಲಿವೆ ಎಂದು ಪೊಲೀಸರು ತಿಳಿಸಿದ್ದಾರೆ.

# ಮನೆ ಕೆಲಸದವಳಿಂದ ಚಿನ್ನ ಕಳವು

**ಬೆಂಗಳೂರು:** ವೃದ್ಧ ದಂಪತಿ ನಂಬಿಕೆಯನ್ನು ದುರುಪಯೋಗ ಪಡಿಸಿಕೊಂಡು ಸುಮಾರು 25 ವರ್ಷದಿಂದ ಮನೆಗೆಲಸ ಮಾಡಿಕೊಂಡಿದ್ದ ಮಹಿಳೆಯೊಬ್ಬರು ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ನಗದನ್ನು ಕಳವು ಮಾಡಿರುವ ಘಟನೆ ಪುಲಕೇಶಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಧನಲಕ್ಷ್ಮಿ (60) ಬಂಧಿತ ಮಹಿಳೆ. ಆರೋಪಿತೆಯಿಂದ 16 ಲಕ್ಷ ರೂ. ಮೌಲ್ಯದ 54 ಗ್ರಾಂ ಚಿನ್ನಾಭರಣ ಹಾಗೂ 8 ಲಕ್ಷ ನಗದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಫ್ರೇಜರ್ ಟೌನ್‌ನ ಪ್ರಾಮಿನೆಂಟ್ ರಸ್ತೆಯಲ್ಲಿ ವಾಸವಿರುವ ವ್ಯಕ್ತಿಯೊಬ್ಬರು ಮನೆಯಲ್ಲಿ ಚಿನ್ನಾಭರಣ ಕಳವು ನಡೆದಿರುವ ಬಗ್ಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಮಾ.5 ರಂದು ಕೆಲಸದಾಕೆಯನ್ನು ವಿಚಾರಣೆಗೆ ಒಳಪಡಿಸಿದಾಗ ಆಕೆ ತನ್ನ ತಪ್ಪೊಪ್ಪಿಕೊಂಡಿದ್ದಾಳೆ. ಆರೋಪಿತೆ ನೀಡಿದ ಮಾಹಿತಿ ಮೇರೆಗೆ ಆಕೆಯ ಮನೆಯಲ್ಲಿದ್ದ ಚಿನ್ನಾಭರಣ ಮತ್ತು 8 ಲಕ್ಷ ನಗದನ್ನು ವಶಕ್ಕೆ ಪಡೆಯಲಾಗಿದೆ. ಸದ್ಯ ಆರೋಪಿತೆಗೆ ಬಿಎನ್‌ಎಸ್‌ಎಸ್ ಕಲಂ 35(3) ಅಡಿಯಲ್ಲಿ ನೋಟಿಸ್ ನೀಡಿ ಬಿಡುಗಡೆ ಮಾಡಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**» 25 ವರ್ಷದಿಂದ ಒಂದೇ ಮನೆಯಲ್ಲಿ ಕೆಲಸ, ಕೆಲಸದಾಕೆ ನಂಬಿದ ವೃದ್ಧರು.**

ಸ್ಟೀಫನ್ ರಸ್ತೆಯ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿರುವ ವೃದ್ಧ ದಂಪತಿ ಮನೆಯಲ್ಲಿ ಸುಮಾರು 25 ವರ್ಷಗಳಿಂದ ಆರೋಪಿತೆ ಕೆಲಸ ಮಾಡುತ್ತಿದ್ದರು. ವೃದ್ಧ ದಂಪತಿಗಳು ಪ್ರತಿ ತಿಂಗಳು ಬ್ಯಾಂಕಿನಿಂದ ಹಣ ವಿತ್‌ಡ್ರಾ ಮಾಡುವಾಗ ಈಕೆಯನ್ನು ಜತೆಯಲ್ಲಿ ಕರೆದೊಯ್ಯುತ್ತಿದ್ದರು. ಇದನ್ನು ಗಮನಿಸಿದ ಆರೋಪಿತೆಯು ಅನೇಕ ದಿನಗಳಿಂದ ದಂಪತಿಗಳ ಗಮನಕ್ಕೆ ಬಾರದಂತೆ ಸ್ವಲ್ಪ ಸ್ವಲ್ಪವಾಗಿಯೇ ಸುಮಾರು 14 ಲಕ್ಷ ನಗದು ಮತ್ತು 54 ಗ್ರಾಂ ತೂಕದ ಎರಡು ಚಿನ್ನದ ಸರಗಳನ್ನು ಕಳವು ಮಾಡಿರುವುದು ತನಿಖೆ ವೇಳೆ ಬೆಳಕಿಗೆ ಬಂದಿದೆ.

ಬಮುಲ್‌ನಿಂದ ಲೀಟರ್ ಹಾಲಿಗೆ 1 ರೂ. ಪ್ರೋತ್ಸಾಹ ಧನ

# ಹಾಲು ಉತ್ಪಾದಕರಿಗೆ ಯುಗಾದಿ ಉಡುಗೊರೆ

**ಬೆಂಗಳೂರು:** ಬಮುಲ್ ವ್ಯಾಪ್ತಿಯಲ್ಲಿನ ಹಾಲು ಉತ್ಪಾದಕರಿಗೆ ಯುಗಾದಿ ಉಡುಗೊರೆಯಾಗಿ ಪ್ರತಿ ಲೀಟರ್ ಹಾಲಿಗೆ 1 ರೂ. ಪ್ರೋತ್ಸಾಹ ಧನ ನೀಡಲಾಗುವುದು ಎಂದು ಬೆಂಗಳೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ (ಬಮುಲ್) ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2025–ಏಪ್ರಿಲ್ 1ರಿಂದ 2026–ಮಾರ್ಚ್ 31ರವರೆಗೆ 59,39,78,492 ಲೀಟರ್ ಹಾಲು ಉತ್ಪಾದನೆಯಾಗಲಿದೆ. ಈ ಅವಧಿಯಲ್ಲಿ ಹಾಲು ಉತ್ಪಾದಿಸಿದ ಎಲ್ಲಾ ರೈತರಿಗೆ ಒಟ್ಟು 59.39 ಕೋಟಿ ರೂ. ಹಣ ಪಾವತಿಸುತ್ತೇವೆ ಎಂದು ತಿಳಿಸಿದರು.

ಬೆಂಗಳೂರು ಹಾಲು ಒಕ್ಕೂಟದಲ್ಲಿ ಪ್ರತಿ ದಿನಕ್ಕೆ 18 ಕೋಟಿ ಲೀಟರ್ ಹಾಲು ಸಂಗ್ರಹವಾಗುತ್ತಿತ್ತು. ಇದೀಗ ಬೇಸಿಗೆ ಆಗಿದ್ದರಿಂದ ಇದು 16 ಲಕ್ಷ ಲೀಟರ್‌ಗೆ ಇಳಿಕೆಯಾಗಿದೆ. ಇನ್ನೊಂದು 2 ತಿಂಗಳು ಕಳೆದು ಮಳೆಗಾಲ ಬಂದರೆ ಕನಿಷ್ಠ 24 ಲಕ್ಷ ಲೀಟರ್ ಹಾಲು ಸಂಗ್ರಹಿಸುವ ಗುರಿ ಹೊಂದಿದ್ದೇವೆ ಎಂದು ತಿಳಿಸಿದರು. 2024–25ನೇ ಸಾಲಿನಲ್ಲಿ, ಒಕ್ಕೂಟದಲ್ಲಿ ಸುಮಾರು 2906 ಕೋಟಿ ರೂ. ವಹಿವಾಟು ಆಗಿತ್ತು. ಪ್ರಸಕ್ತ 2025–26ನೇ ಸಾಲಿನಲ್ಲಿ 3,400 ಕೋಟಿ ರೂ. ವಹಿವಾಟು ಆಗುವ ನಿರೀಕ್ಷೆಯಿದ್ದು, ಈ ಮೂಲಕ ಒಕ್ಕೂಟವು ಸುಮಾರು 500 ಕೋಟಿ ರೂ. ಹೆಚ್ಚುವರಿ ವಹಿವಾಟು ಸಾಧಿಸುವ ಗುರಿ ಹೊಂದಿದ್ದೇವೆ ಎಂದು ಮಾಹಿತಿ ನೀಡಿದರು.

**ಸಿಬ್ಬಂದಿಗೂ ಉಡುಗೊರೆ**

ಬಮುಲ್ ಒಕ್ಕೂಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1800 ಗುತ್ತಿಗೆ ಸಿಬ್ಬಂದಿಗೆ ವಾರ್ಷಿಕವಾಗಿ ತಲಾ 5 ಸಾವಿರ ರೂ. ಉಡುಗೊರೆ ನೀಡುವುದಕ್ಕೆ ಒಟ್ಟು 90 ಲಕ್ಷ ರೂ.ಗಳು ಮತ್ತು ಒಕ್ಕೂಟದಲ್ಲಿ 2,294 ಸದಸ್ಯ ಸಂಘಗಳಿದ್ದು, ಪ್ರತಿ ಸಂಘಕ್ಕೆ ತಲಾ 15 ಸಾವಿರ ರೂ.ಗಳಂತೆ ಒಟ್ಟು 3.44 ಕೋಟಿ ರೂ. ನೀಡಲಿದ್ದೇವೆ. ಜುಲೈ 24ರಿಂದ ಬಾಕಿಯಿರುವ 3 ಕಂತುಗಳ ತುಟ್ಟಿಭತ್ಯೆ ಮೂಲ ವೇತನದ ಶೇ.5.75ರಷ್ಟು ಆಗುವ ಮೊತ್ತ 4.68 ಕೋಟಿ ರೂ.ಗಳನ್ನು ಪಾವತಿಸಲಿದ್ದೇವೆ ಎಂದು ತಿಳಿಸಿದರು. ಹೊಸ ಆಡಳಿತ ಮಂಡಳಿ ಸ್ಥಾಪನೆಯಾದ ಮೇಲೂ 14.5 ಕೋಟಿ ರೂ. ನಷ್ಟದಲ್ಲಿದ್ದರೂ ಸಹ ಹಾಲು ಉತ್ಪಾದಕರಿಗೆ ಮಳೆಗಾಲದಲ್ಲಿ 2 ರೂ. ಕಡಿಮೆ ಮಾಡುವುದು ಮತ್ತು ಬೇಸಿಗೆಯಲ್ಲಿ ಹೆಚ್ಚಿಸುವುದನ್ನು ನಾವು ಮಾಡುತ್ತಿಲ್ಲ, ರೈತರಿಗೆ ಶಕ್ತಿ ತುಂಬುವುದೇ ನಮ್ಮ ಗುರಿಯಾಗಿದೆ ಎಂದು ತಿಳಿಸಿದರು.



> 1965ರಲ್ಲಿ ಸ್ಥಾಪನೆಯಾದ ಬೆಂಗಳೂರು ಹಾಲು ಒಕ್ಕೂಟವು ಅಂದಿನಿಂದ ಇಂದಿನವರೆಗೂ ತನ್ನದೇ ಆದ ಇತಿಹಾಸ ಮತ್ತು ವಿಶ್ವಾಸ ಕಾಪಾಡಿಕೊಂಡು ಬಂದಿದೆ. ಆದರೆ ಇತ್ತೀಚೆಗೆ ನಂದಿನಿ ಬ್ರ್ಯಾಂಡ್‌ಗೆ ಖಾಸಗಿ ಕಂಪನಿಗಳ ಪೈಪೋಟಿ ಹೆಚ್ಚಾಗಿದೆ. ಈ ಪೈಪೋಟಿ ನಡುವೆಯೂ ಗ್ರಾಹಕರಿಗೆ ಗುಣಮಟ್ಟದ ಸೇವೆ ನೀಡುತ್ತಿದೆ.
>
> ■ **ಡಿ.ಕೆ. ಸುರೇಶ್,** ಬೆಂಗಳೂರು ಹಾಲು ಒಕ್ಕೂಟದ ಅಧ್ಯಕ್ಷ

# ಬಿಜೆಪಿಗೆ ಆಯ್ಕೆ

**ಕೆಂಗೇರಿ:** ಬಿಜೆಪಿ ಬೆಂಗಳೂರು ಉತ್ತರ ಜಿಲ್ಲೆ ಯಶವಂತಪುರ ವಿಧಾನಸಭಾ ಕ್ಷೇತ್ರದ ನಗರ ಮಂಡಲ ಅಧ್ಯಕ್ಷರಾಗಿ ಜಯರಾಮ್ ಗೌಡ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಬೆಂಗಳೂರು ಬಿಜೆಪಿ ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್ ಆದೇಶ ಹೊರಡಿಸಿದ್ದಾರೆ



ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ನಗರ ಮಂಡಲ ಅಧ್ಯಕ್ಷರಾಗಿ ನನ್ನನ್ನು ಆಯ್ಕೆ ಮಾಡಿದ ಸಂಸದೆ ಶೋಭಾ ಕರಂದ್ಲಾಜೆ, ರಾಜ್ಯಾಧ್ಯಕ್ಷ ವಿಜಯೇಂದ್ರ, ಬೆಂಗಳೂರು ಬಿಜೆಪಿ ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ಬೆಂಗಳೂರು ಉತ್ತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಾನು ರಂಗಸ್ವಾಮಿ ಹಾಗೂ ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರಿಗೆ ಜಯರಾಮ್ ಗೌಡ ಧನ್ಯವಾದ ತಿಳಿಸಿದ್ದಾರೆ.

## ಇಂದು ನಗರದಲ್ಲಿ...

- ಸಮೂಹ ಕಾರ್ಯಾಗಾರ ಕುರಿತು ವಿಚಾರ ಸಂಕಿರಣ.
- ಸ್ಥಳ: ಯುವ ಪಥ, ಜಯನಗರ
- ಬೆಳಗ್ಗೆ 10

- ಪ್ರಯಾಣ ಮತ್ತು ಮಧ್ಯಪಾನೋದ್ಯಮ ಪ್ರದರ್ಶನ.
- ಸ್ಥಳ: ಅರಮನೆ ಮೈದಾನ, ತ್ರಿಪುರ ವಾಸಿನಿ
- ಬೆಳಗ್ಗೆ 11

- ಕನ್ನಡ ಸಾಹಿತ್ಯ ಮತ್ತು ಬೇಸಾಯದ ಬದುಕು ಶಿಬಿರ.
- ಸ್ಥಳ: ಮುದ್ದಶ್ರೀ ದಿಬ್ಬ, ರಾಮನಗರ, ಬೆಂ. ದಕ್ಷಿಣ ಜಿಲ್ಲೆ
- ಬೆಳಗ್ಗೆ 11:30

- ತುಳಸಿ ರಾಮಾಯಣ ಸುಂದರಕಾಂಡ ಉಪನ್ಯಾಸ.
- ಸ್ಥಳ: ರಾಗಿಗುಡ್ಡ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ
- ಸಂಜೆ 6.30

ಭಾರತೀಯ ಕ್ರಿಕೆಟ್‌ಗೆ ನೀಡಿದ ಅಪಾರ ಕೊಡುಗೆಗಾಗಿ ದ್ರಾವಿಡ್‌ಗೆ ಜೀವಮಾನದ ಪ್ರಶಸ್ತಿ

# ಜೀವಮಾನದ ಗೋಡೆಗೆ ಬಿಸಿಸಿಐ ಗರಿ



ಮುಂಬೈ: ಭಾರತೀಯ ಕ್ರಿಕೆಟ್ ತಂಡದ ಮಾಜಿ ನಾಯಕ, ಕ್ರಿಕೆಟ್ ಗೋಡೆ (ವಾಲ್) ಮತ್ತು ಟಿ20 ವಿಶ್ವಕಪ್ ಗೆದ್ದಿದ್ದ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಿ.ಕೆ. ನಾಯ್ಡು ಜೀವಮಾನದ ಸಾಧನೆ ಪ್ರಶಸ್ತಿಯನ್ನು ಘೋಷಿಸಿದ್ದು, ಮಾ.15ರಂದು ನಡೆಯುವ ವಾರ್ಷಿಕ ...

### 36 ಟೆಸ್ಟ್ ಶತಕ

ಬೆಂಗಳೂರು ಮೂಲದ ಈ ಬ್ಯಾಟ್ಸ್‌ಮನ್ ಲಾರ್ಡ್ಸ್‌ನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ತಮ್ಮ ಮೊದಲ ಪಂದ್ಯದಲ್ಲೇ 95 ರನ್ ಗಳಿಸಿ ಶತಕವನ್ನು ಕೇವಲ 5 ರನ್‌ಗಳಿಂದ ತಪ್ಪಿಸಿಕೊಂಡಿದ್ದರು. ಅವರ ಮುಂದಿನ 16 ವರ್ಷಗಳಲ್ಲಿ 164 ಟೆಸ್ಟ್ ಪಂದ್ಯಗಳಲ್ಲಿ 36 ಶತಕಗಳನ್ನು ಬಾರಿಸಿ 52.31ರ ಅದ್ಭುತ ಸರಾಸರಿಯಲ್ಲಿ ಒಟ್ಟು 13,288 ರನ್ ಕಲೆಹಾಕಿದ್ದರು.

### ಏಕದಿನದಲ್ಲೂ 10,000 ರನ್

ಏಕದಿನ ಕ್ರಿಕೆಟ್‌ನಲ್ಲಿ 53 ವರ್ಷದ ದ್ರಾವಿಡ್ ಅವರು 344 ಪಂದ್ಯಗಳಲ್ಲಿ 10,889 ರನ್ ಗಳಿಸಿದ್ದು, ಅದರಲ್ಲಿ 12 ಶತಕಗಳು ಮತ್ತು 83 ಅರ್ಧಶತಕಗಳು ಸೇರಿವೆ. ಟೆಸ್ಟ್ ಮತ್ತು ಏಕದಿನ ಎರಡರಲ್ಲೂ 10,000ಕ್ಕಿಂತ ಹೆಚ್ಚು ರನ್ ಗಳಿಸಿದ ಕೆಲವೇ ಆಟಗಾರರಲ್ಲಿ ದ್ರಾವಿಡ್ ಒಬ್ಬರು. ಏಕದಿನಗಳಲ್ಲಿ ಭಾರತ ಪರ ಎರಡನೇ ಅತಿ ವೇಗದ ಅರ್ಧಶತಕ ದಾಖಲೆಯನ್ನೂ ಅವರು ಹಂಚಿಕೊಂಡಿದ್ದಾರೆ.

### ನಿವೃತ್ತಿಗೆ ಮುನ್ನ ಏಕೈಕ ಟಿ20!

2011ರಲ್ಲಿ ಮ್ಯಾಂಚೆಸ್ಟರ್‌ನಲ್ಲಿ ನಡೆದ ಪಂದ್ಯದಲ್ಲಿ ಭಾರತ ಪರ ಏಕೈಕ ಟಿ20 ಅಂತಾರಾಷ್ಟ್ರೀಯ ಪಂದ್ಯವನ್ನು ಆಡಿದ ಅವರು ಸತತ ಮೂರು ಸಿಕ್ಸರ್ ...

### ಗಂಭೀರ್ ಕೃತಜ್ಞತೆ

ಇತ್ತೀಚೆಗೆ ಅವರ ಉತ್ತರಾಧಿಕಾರಿ ಗೌತಮ್ ಗಂಭೀರ್, ಭಾರತ ಸಾಧಿಸಿದ ಐತಿಹಾಸಿಕ ಮೂರನೇ ಟಿ20 ವಿಶ್ವಕಪ್ ಗೆಲುವನ್ನು ದ್ರಾವಿಡ್ ಮತ್ತು ಲಕ್ಷ್ಮಣ್‌ಗೆ ಅರ್ಪಿಸಿದ್ದು, ಅವರಿಬ್ಬರ ಅಪಾರ ಕೊಡುಗೆಗೆ ಕೃತಜ್ಞತೆ ಸಲ್ಲಿಸಿದ್ದರು. ಮೊದಲು ಈ ಟ್ರೋಫಿಯನ್ನು ರಾಹುಲ್ ಭಾಯ್ ಅವರಿಗೆ ಸಮರ್ಪಿಸಬೇಕು ಎಂದು ಭಾವಿಸುತ್ತೇನೆ. ಭಾರತೀಯ ಕ್ರಿಕೆಟ್ ಉತ್ತಮ ಸ್ಥಿತಿಯಲ್ಲಿ ಇರಲು ಅವರು ಕಾರಣ, ಅವರಿಗೆ ಕೃತಜ್ಞನಾಗಿರುವೆ ಎಂದು ಗಂಭೀರ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು.



ವರ್ಷದ ಆಟ. ಕ್ರಿಕೆಟಿಗ ಗಿಲ್

### ಲಕ್ಷ್ಮಣ್ ಜತೆಗೂಡಿ ಶ್ರೇಷ್ಠ ಟೆಸ್ಟ್ ಇನ್ನಿಂಗ್ಸ್



### ಕೋಚಿಂಗ್ ವೃತ್ತಿಜೀವನ

ಚೊಚ್ಚಲ ಎಟಿಪಿ ಮಾಸ್ಟರ್ಸ್ 1000 ಸೆಮಿಫೈನಲ್ ಪ್ರವೇಶ

# ಇಂಡಿಯನ್ ವೆಲ್ಸ್ ಸೆಮಿಗೇರಿದ ಭಾಂಬ್ರಿ



### ಅಲ್ಕರಾಜ್, ಇಗಾ ಕ್ವಾರ್ಟರ್ ಪ್ರವೇಶ



### ಜೊಕೊವಿಚ್ ಮಣಿಸಿ ಸೆಮಿಗೇರಿದ ಡ್ರೇಪರ್!

### ಕಿರುಸುದ್ದಿ

### ಇಸಿ ದಿನಾಂಕ ಘೋಷಣೆ ಬಳಿಕ ಐಪಿಎಲ್ ಪೂರ್ಣ ವೇಳಾಪಟ್ಟಿ

### ಕೊಟ್ಟಿಗೆದ ರನ್ ಹಸಿವು

### ಫೀಫಾ ವಿಶ್ವಕಪ್‌ಗೆ ಇರಾನ್ ಬಹಿಷ್ಕಾರ

ಏಷ್ಯನ್ ಗೇಮ್ಸ್, ವಿದೇಶ ಸ್ಪರ್ಧೆಗಳಿಗಾಗಿ ಧನ ಬೆಂಬಲ

# ಟೆನಿಸಿಗರಿಗೆ ಹಣಕಾಸು ನೆರವಿಗೆ ಎಂಒಸಿ ಅಸ್ತು



## ಸತತ ಪ್ರಶಸ್ತಿ ಗೆಲ್ಲುವ ಒತ್ತಡ ಪಾಟಿದಾರ್‌ಗಿದೆ




ಪಾಕಿಸ್ತಾನಿ ಆಟಗಾರನ ಖರೀದಿಸಿ

## ಕಾವ್ಯಾ ಮಾರನ್ ಉದ್ಧಟತನ



### ಪದಬಂಧ



5922

5921 ಉತ್ತರ

ಕೆಸಿಡಿ ಮೈದಾನದಲ್ಲಿ ಕುಸ್ತಿ ಹಬ್ಬ | ತೂಕದ ಆಧಾರದಡಿ ಸ್ಪರ್ಧೆಗಳು ಅಣಿ

# ಧಾರವಾಡದಲ್ಲಿ ಜಂಗಿ ಕುಸ್ತಿಗೆ ಅಖಾಡ ಸಿದ್ಧ



### ದಿಗ್ಗಜ ಪೈಲ್ವಾನರು

### ವಿಶೇಷ ಸೂಚನೆಗಳು

ರಾಷ್ಟ್ರಧ್ವಜವನ್ನು ಅವಮಾನಿಸಿದ ಆರೋಪ

## ಪಾಂಡ್ಯ ವಿರುದ್ಧ ದೂರು ದಾಖಲು!



# ಸಿನಿ ದಿಗಂತ

ಜ್ಯೋತಿಷ್ಯದ ಮೂಲಕ ಪ್ರೀತಿಯನ್ನು ಹುಡುಕುವಂಥ ನಾಯಕನ ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಟಿ.ಎಸ್. ಅಕ್ಕಮಹಾದೇವಿ ಅವರು ಕಥೆಯನ್ನು ಬರೆದಿದ್ದಾರೆ. ಎಸ್. ಪ್ರದೀಪ್ ವರ್ಮ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಐದು ಹಾಡುಗಳಿರುವ ಈ ಚಿತ್ರಕ್ಕೆ ಪ್ರದೀಪ್ ವರ್ಮ ಅವರೇ ಸಂಗೀತ ಸಂಯೋಜನೆಯನ್ನೂ ಸಹ ಮಾಡಿದ್ದಾರೆ. ಇದು ಎಸ್. ಪ್ರದೀಪ್ ವರ್ಮ ಅವರ ನಿರ್ದೇಶನದ ಮೂರನೇ ಚಿತ್ರ. ಈ ಚಿತ್ರಕ್ಕೆ ಸಂಗೀತ ನಿರ್ದೇಶಕ ಹಾಗೂ ನಿರ್ದೇಶಕನಾಗಿಯೂ ಗುರುತಿಸಿಕೊಂಡಿರುವ ಎಸ್. ಪ್ರದೀಪ್ ವರ್ಮ ಅವರು ಆಕ್ಷನ್ ಕಟ್ ಹೇಳಿದ್ದಾರೆ.

## ಪ್ರೇಮಿ

## ಜ್ಯೋತಿಷ್ಯದ ಮೂಲಕ ಪ್ರೀತಿಯ ಹುಡುಕಾಟ





ಕನ್ನಡದಲ್ಲಿ ಪ್ರೇಮ ಕಥಾನಕ ಒಳಗೊಂಡ ಸಾಕಷ್ಟು ಚಲನಚಿತ್ರಗಳು ನಿರ್ಮಾಣವಾಗಿ ತೆರೆಗೆ ಬಂದಿವೆ. ಆದರೆ, ಅದೆಲ್ಲಕ್ಕಿಂತ ವಿಭಿನ್ನ ಪ್ರೇಮಕಥಾಹಂದರ ಹೊಂದಿರುವ ಮತ್ತೊಂದು ಚಿತ್ರ ನಿರ್ಮಾಣವಾಗಿದ್ದು, ತೆರೆಗೆ ಬರಲು ಸಿದ್ಧವಾಗಿದೆ. ಶ್ರೀಗುರು ಶ್ರೀಗುರು ಕಲಬಸವೇಶ್ವರ ಪ್ರೊಡಕ್ಷನ್ ಲಾಂಛನದಲ್ಲಿ ಬಿ.ಸಿದ್ದಲಿಂಗಯ್ಯ ಅವರು ನಿರ್ಮಿಸಿರುವ ಆ ಚಿತ್ರದ ಹೆಸರು ಪ್ರೇಮಿ. ಜ್ಯೋತಿಷ್ಯದ ಮೂಲಕ ಪ್ರೀತಿಯನ್ನು ಹುಡುಕುವಂಥ ನಾಯಕನ ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಟಿ.ಎಸ್. ಅಕ್ಕಮಹಾದೇವಿ ಅವರು ಕಥೆಯನ್ನು ಬರೆದಿದ್ದಾರೆ. ಎಸ್. ಪ್ರದೀಪ್ ವರ್ಮ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಐದು ಹಾಡುಗಳಿರುವ ಈ ಚಿತ್ರಕ್ಕೆ ಪ್ರದೀಪ್ ವರ್ಮ ಅವರೇ ಸಂಗೀತ ಸಂಯೋಜನೆಯನ್ನೂ ಸಹ ಮಾಡಿದ್ದಾರೆ. ಇದು ಎಸ್. ಪ್ರದೀಪ್ ವರ್ಮ ಅವರ ನಿರ್ದೇಶನದ ಮೂರನೇ ಚಿತ್ರ. ಈ ಚಿತ್ರಕ್ಕೆ ಸಂಗೀತ ನಿರ್ದೇಶಕ ಹಾಗೂ ನಿರ್ದೇಶಕನಾಗಿಯೂ ಗುರುತಿಸಿಕೊಂಡಿರುವ ಎಸ್. ಪ್ರದೀಪ್ ವರ್ಮ ಅವರು ಆಕ್ಷನ್ ಕಟ್ ಹೇಳಿದ್ದಾರೆ. ಮಾರ್ಚ್ 17ರಂದು ಈ ಚಿತ್ರದ ಟ್ರೈಲರ್ ಬಿಡುಗಡೆಯಾಗಲಿದೆ.

ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿರುವ ಈ ಚಿತ್ರದ ಮನಸ್ಸು ಏನೋ ಕಾಡಿದೆ ಎಂಬ ಡ್ಯುಯೆಟ್ ಸಾಂಗ್ ಅಲ್ಲದೆ ಬಾರೋ ಎಕ್ಕೆ ಹೊಡೆಯೋಣ ಎಂಬ ಎಣ್ಣೆ ಹಾಡುಗಳು ಸಂಗೀತ ಪ್ರಿಯರ ಮನಸ್ಸನ್ನು ಗೆದ್ದಿವೆ. ನಿರ್ದೇಶಕ ಎಸ್. ಪ್ರದೀಪ್ ವರ್ಮ ಅವರೇ ಈ ಹಾಡಿನ ಸಾಹಿತ್ಯ ಬರೆದು ಸಂಗೀತ ಸಂಯೋಜಿಸಿದ್ದಾರೆ. ಅಲ್ಲದೆ ಅವರೇ ಹಾಡಿಗೆ ದನಿಯಾಗಿದ್ದಾರೆ ಕೂಡ. ಈ ಹಾಡಿನಲ್ಲಿ ಅದ್ವಿಕ್, ಕಿರಣ್ ರಾಜ್, ಹರ್ಷಿತಾ ಕಲ್ಲಿಂಗಲ್, ಎಸ್. ಎಮ್. ವಿಮಲ್‌ರಾಜ್, ಹರೀಶ್ ಉತ್ಕರ್ಷಗಾತ್ರಿ ಅವರುಗಳು ಅಭಿನಯಿಸಿದ್ದಾರೆ.

ಪ್ರೇಮಿ ಚಿತ್ರಕ್ಕೆ ದಾವಣಗೆರೆ, ದೇವರಬೆಳಕೆರೆ, ಗೋಕರ್ಣ, ಕನಕಪುರ, ಚಿಕ್ಕಮಗಳೂರು ಹಾಗೂ ಬೆಂಗಳೂರಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ವಿಭಿನ್ನ ಕಥಾಹಂದರ ಹೊಂದಿರುವ ಪ್ರೇಮಿ ಚಿತ್ರಕ್ಕೆ ಟಿ.ಎಸ್. ಅಕ್ಕಮಹಾದೇವಿ ಅವರು ಕಥೆಯನ್ನು ಬರೆದಿದ್ದಾರೆ. ಎಸ್. ಪ್ರದೀಪ್ ವರ್ಮ ಅವರು ನಿರ್ದೇಶನ ಮಾಡಿದ್ದಾರೆ. ಐದು ಹಾಡುಗಳಿರುವ ಈ ಚಿತ್ರಕ್ಕೆ ಪ್ರದೀಪ್ ವರ್ಮ ಅವರೇ ಸಂಗೀತ ಸಂಯೋಜನೆಯನ್ನೂ ಸಹ ಮಾಡಿದ್ದಾರೆ. ಸಹ ನಿರ್ದೇಶನ ಮಾಡಿರುವ ಎಸ್. ವಿಮಲ್ ರಾಜ್ ಅವರ ಸಂಭಾಷಣೆ, ಕಿರಣ್‌ರಾಜ್, ಶಂಕರ್ ಅಂಬಿ ಹಾಗೂ ಪೂರ್ಣಚಂದ್ರ ಎಂ. ದೇವಾಂಗ ಅವರ ಸಹಾಯಕ ನಿರ್ದೇಶನ, ಗೌತಮ್ ಮಟ್ಟಿ ಅವರ ಛಾಯಾಗ್ರಹಣ, ಸಂಜೀವ್ ರೆಡ್ಡಿ ಅವರ ಸಂಕಲನ ಹಾಗೂ ರಾಮ್‌ದೇವ್ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಪ್ರೇಮಿ ಚಿತ್ರದಲ್ಲಿ ಯುವನಟ ಅದ್ವಿಕ್ ನಾಯಕನಾಗಿ ನಟಿಸಿದ್ದು, ನಟಿ ಸಾತ್ವಿಕ ಅವರು ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಬೋಧಕ, ಎಸ್ ಪ್ರದೀಪ್ ವರ್ಮ, ಹರೀಶ್ ಉತ್ಕರ್ಷಗಾತ್ರಿ, ಶಂಕರ್ ಅಂಬಿ, ಹೆಚ್. ಜಿ. ವೀರೇಶ್, ದ್ವಿಜ ಕೆ. ಗೌಡ, ಸಂದೇಶ್, ಸಂಗಮೇಶ್ ದೇವರಬೆಳಕೆರೆ, ಕಲ್ಕಿ, ಮಾಸ್ಟರ್ ಹರ್ಷಲ್, ಮಾಸ್ಟರ್ ಸಂಸ್ಕೃತಿ ಶಿವಧರಮಠ, ಸಮರ್ಥ್ ರಾಘವೇಂದ್ರ, ಸುರೇಶ್‌ಬಾಬು, ಸಂದೇಶ ಮುಂತಾದವರು ಪ್ರೇಮಿ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ತೆನಾಲಿ ಡಿಎಎಲ್‌ಎಲ್‌ಬಿ. ಚಿತ್ರದ ಟೈಟಲ್ಲೇ ಹೇಳುವ ಹಾಗೆ ನಟ ಕೋಮಲ್‌ಕುಮಾರ್ ಈ ಚಿತ್ರದಲ್ಲಿ ಒಬ್ಬ ಲಾಯರ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸಾಮಾನ್ಯವಾಗಿ ಲಾಯರ್ ಓದಿದವರಿಗೆ ಬಿಎಎಲ್‌ಎಲ್‌ಬಿ ಎನ್ನುತ್ತಾರೆ, ಆದರೆ ಈ ಚಿತ್ರದ ನಾಯಕನ ಹೆಸರಿನ ಮುಂದೆ ಡಿಎಎಲ್‌ಎಲ್‌ಬಿ ಅಂತಿದೆ, ಆದಕ್ಕೇ ಅರ್ಥ ಏನೆಂಬುದನ್ನು ನಿರ್ದೇಶಕ ಸಿದ್ದುವ್ ಅವರೇ ಹೇಳಬೇಕು.

# ಕೋಮಲ್‌ಕುಮಾರ್ ಈಗ ತೆನಾಲಿ ಡಿಎಎಲ್‌ಎಲ್‌ಬಿ



ಕನ್ನಡ ಚಿತ್ರರಂಗದಲ್ಲಿ ಪ್ರತಿಭಾವಂತ ನಟ, ನಿರ್ಮಾಪಕರೂ ಆದ ಕೋಮಲ್‌ಕುಮಾರ್ ಈಗಾಗಲೇ ಕಥೆ, ಚಿತ್ರಕಥೆ, ನಿರ್ದೇಶನ ಪುಟ್ಟಣ್ಣ, ಯಲಾ ಕುನ್ನಿ, ನಮೋ ಭೂತಾತ್ಮ, ಹೀಗೆ ವಿಭಿನ್ನ ಶೈಲಿಯ ಚಿತ್ರಗಳನ್ನೇ ಮಾಡಿಕೊಂಡು ಬಂದವರು, ಇದೀಗ ಅವರು ಮತ್ತೊಂದು ಹೊಸ ಚಿತ್ರದ ಮೂಲಕ, ಹೊಸದಾದ ಗೆಟಪ್‌ನಲ್ಲಿ ಅಭಿಮಾನಿಗಳ ಮುಂದೆ ಬರಲು ಸಜ್ಜಾಗಿದ್ದಾರೆ. ಆ ಚಿತ್ರದ ಹೆಸರು ತೆನಾಲಿ ಡಿಎಎಲ್‌ಎಲ್‌ಬಿ.

ತೆನಾಲಿ ಡಿಎಎಲ್‌ಎಲ್‌ಬಿ. ಚಿತ್ರದ ಟೈಟಲ್ಲೇ ಹೇಳುವ ಹಾಗೆ ನಟ ಕೋಮಲ್‌ಕುಮಾರ್ ಈ ಚಿತ್ರದಲ್ಲಿ ಒಬ್ಬ ಲಾಯರ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸಾಮಾನ್ಯವಾಗಿ ಲಾಯರ್ ಓದಿದವರಿಗೆ ಬಿಎಎಲ್ ಎಲ್‌ಬಿ ಎನ್ನುತ್ತಾರೆ, ಆದರೆ ಈ ಚಿತ್ರದ ನಾಯಕನ ಹೆಸರಿನ ಮುಂದೆ ಡಿಎಎಲ್‌ಎಲ್‌ಬಿ ಅಂತಿದೆ, ಆದಕ್ಕೇ ಅರ್ಥ ಏನೆಂಬುದನ್ನು ನಿರ್ದೇಶಕ ಸಿದ್ದುವ್ ಅವರೇ ಹೇಳಬೇಕು. ಈ ಚಿತ್ರದ ಪೋಸ್ಟರ್‌ನಲ್ಲಿಯೂ ಸಹ ಕೋಮಲ್‌ಕುಮಾರ್ ಅವರು ಕರಿಕೋಟನ್ನು ಹಾಕಿಕೊಂಡು ಒಬ್ಬ ಲಾಯರ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ತೆನಾಲಿ ಡಿ ಎ ಎಲ್ ಎಲ್ ಬಿ ಚಿತ್ರವನ್ನು ಸಿದ್ದುವ್ ಸಿದ್ದು ಅವರೇ ನಿರ್ದೇಶನ ಮಾಡುತ್ತಿದ್ದಾರೆ. ಈ ಹಿಂದೆ ವಿಜಯ ರಾಘವೇಂದ್ರ ಅವರ ಭಿನಯದ ಮರೀಚಿ ಎಂಬ ಚಿತ್ರವನ್ನ ಸಿದ್ದುವ್ ಅವರು ನಿರ್ದೇಶನ ಮಾಡಿದ್ದರು, ಆ ಚಿತ್ರವು ಉತ್ತಮ ಪ್ರತಿಕ್ರಿಯೆ ಸಹ ಪಡೆದುಕೊಂಡಿತ್ತು. ಮರೀಚಿ ಚಿತ್ರದ ನಂತರ ಸಿದ್ದುವ್ (ಸಿದ್ದು) ಅವರು ಕೋಮಲ್‌ಕುಮಾರ್ ಅವರಿಗಾಗಿಯೇ ವಿಭಿನ್ನವಾದ ಹಾಗೂ ಈಗಿನ ಕಾಲಘಟ್ಟಕ್ಕೆ ಸರಿಹೊಂದುವಂಥ ಕಥೆಯನ್ನು ಬರೆದಿದ್ದಾರೆ. ಇದೇ ಮೊದಲ ಬಾರಿಗೆ ಒಬ್ಬ ಲಾಯರ್ ಆಗಿ ಕಾಣಿಸಿಕೊಳ್ಳುತ್ತಿರೋ ಕೋಮಲ್‌ಕುಮಾರ್ ಅವರು ತಮ್ಮ ನಿಜ ಜೀವನದಲ್ಲಿಯೂ ಎಲ್‌ಎಲ್‌ಬಿ ಓದಿಕೊಂಡಿದ್ದಾರೆ. ಆದರೆ ಆಗಿದ್ದು ಮಾತ್ರ ಆ್ಯಕ್ಟರ್. ಅನೇಕ ವರ್ಷಗಳ ಬಳಿಕ ಅವರೀಗ ತೆರೆಯ ಮೇಲೂ ಸಹ ಒಬ್ಬ ಲಾಯರ್ ಆಗಿ ನ್ಯಾಯಾಲಯದಲ್ಲಿ ತಮ್ಮ ವಾದವನ್ನು ಮಂಡಿಸಲಿದ್ದಾರೆ.

ತೆನಾಲಿ ಡಿಎಎಲ್‌ಎಲ್‌ಬಿ ಚಿತ್ರವನ್ನ ಸಿದ್ದುವ್(ಸಿದ್ದು) ಅವರು ನಿರ್ದೇಶನ ಮಾಡುತ್ತಿದ್ದು, ಕಥೆ, ಚಿತ್ರಕಥೆಯನ್ನು ಅವರೇ ಬರೆದಿದ್ದಾರೆ. ಈ ಚಿತ್ರಕ್ಕೆ ಸಿದ್ದುವ್(ಸಿದ್ದು), ಸಂತೋಷ್ ಮಾಯಪ್ಪ, ಪ್ರದೀಪ್‌ಕುಮಾರ್ ಮಹಾಲಿಂಗಯ್ಯ ಹಾಗೂ ರೇಣುಕಾಪ್ರಸಾದ್ ಅವರುಗಳು ಸೇರಿ ಬಂಡವಾಳ ಹೂಡುತ್ತಿದ್ದಾರೆ. ದೀಪು ಪಿಆರ್. ಅವರ ಸಂಭಾಷಣೆ, ಬಕ್ಷಿತ್ ಮುರಳೀಧರನ್ ಅವರು ಈ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡುತ್ತಿದ್ದು, ಉದಯ್ ಲೀಲಾ ಅವರು ಕ್ಯಾಮೆರಾ ಹಿಡಿದಿದ್ದಾರೆ.




**ಹರಿವರಾಸನಂ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಮಗ್ಗಿ ಪುಸ್ತಕ ಚಿತ್ರವು ಈಗಾಗಲೇ ರಾಜ್ಯಾದ್ಯಂತ 30 ದಿನಗಳನ್ನು ದಾಟಿ 50ನೇ ದಿನದತ್ತ ಸಾಗಿದೆ. ವಿಶೇಷವಾಗಿ ಈ ಚಿತ್ರವನ್ನು ಮಕ್ಕಳ ಜತೆಗೆ ಮಹಿಳಾ ಪ್ರೇಕ್ಷಕರೂ ಸಹ ಹೆಚ್ಚಾಗಿ ಬಂದು ವೀಕ್ಷಿಸುತ್ತಿದ್ದಾರೆ. ಹತ್ತಕ್ಕೂ ಹೆಚ್ಚು ಸೆಂಟರ್‌ಗಳಲ್ಲಿ 25 ದಿನಗಳನ್ನು ಪೂರೈಸಿರುವ ಮಗ್ಗಿ ಪುಸ್ತಕ ಚಿತ್ರವು ತನ್ನ ಕಲೆಕ್ಷನ್‌ನ್ನು ದಿನದಿಂದ ದಿನಕ್ಕೆ ಹೆಚ್ಚು ಮಾಡಿಕೊಳ್ಳುತ್ತಿದೆ. ಈಗಾಗಲೇ ರಾಜ್ಯಾದ್ಯಂತ ಸಹಸ್ರಾರು ಸಂಖ್ಯೆಲ್ಲಿ ಶಾಲಾ ವಿದ್ಯಾರ್ಥಿಗಳು ಮಗ್ಗಿ ಪುಸ್ತಕ ಚಿತ್ರವನ್ನು ವೀಕ್ಷಿಸಿ ಮೆಚ್ಚಿಕೊಂಡಿದ್ದಾರೆ.**



ಹರಿವರಾಸನಂ ಅವರ ನಿರ್ದೇಶನದ ಮಗ್ಗಿಪುಸ್ತಕ ಚಿತ್ರವು ಕಳೆದ ತಿಂಗಳು ರಿಲೀಸಾಗಿದ್ದ ರಾಜ್ಯಾದ್ಯಂತ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಕನ್ನಡದ ಪ್ರತಿಭಾವಂತ ನಿರ್ದೇಶಕ ಹರಿವರಾಸನಂ ಅವರು ತಮ್ಮ ಮೊದಲ ಚಿತ್ರದಲ್ಲೇ ಉತ್ತಮ ಕಂಟೆಂಟ್ ಮೂಲಕ ಚಿತ್ರ ಪ್ರೇಕ್ಷಕರನ್ನು ಭರಪೂರ್ ರಂಜಿಸಿದ್ದಾರೆ. ಅವರ ನಿರ್ದೇಶನದ ಪ್ರಥಮ ಚಿತ್ರ ಮಗ್ಗಿ ಪುಸ್ತಕ ಈಗಾಗಲೇ 30 ದಿನಗಳನ್ನು ದಾಟಿ 50ನೇ ದಿನದತ್ತ ಸಾಗಿದೆ. ವಿಶೇಷವಾಗಿ ಈ ಚಿತ್ರವನ್ನು ಮಕ್ಕಳ ಜತೆಗೆ ಮಹಿಳಾ ಪ್ರೇಕ್ಷಕರೂ ಸಹ ಹೆಚ್ಚಾಗಿ ಬಂದು ವೀಕ್ಷಿಸುತ್ತಿದ್ದಾರೆ. ಹತ್ತಕ್ಕೂ ಹೆಚ್ಚು ಸೆಂಟರ್‌ಗಳಲ್ಲಿ 25 ದಿನಗಳನ್ನು ಪೂರೈಸಿರುವ ಮಗ್ಗಿ ಪುಸ್ತಕ ಚಿತ್ರವು ತನ್ನ ಕಲೆಕ್ಷನ್‌ನ್ನು ದಿನದಿಂದ ದಿನಕ್ಕೆ ಹೆಚ್ಚು ಮಾಡಿಕೊಳ್ಳುತ್ತಿದೆ. ಈಗಾಗಲೇ ರಾಜ್ಯಾದ್ಯಂತ ಸಹಸ್ರಾರು ಸಂಖ್ಯೆಯಲ್ಲಿ ಶಾಲಾ ವಿದ್ಯಾರ್ಥಿಗಳು ಮಗ್ಗಿ ಪುಸ್ತಕ ಚಿತ್ರವನ್ನು ವೀಕ್ಷಿಸಿ ಮೆಚ್ಚಿಕೊಂಡಿದ್ದಾರೆ. ಈ ಚಿತ್ರವೀಗ ಉತ್ತರ ಕರ್ನಾಟಕದಲ್ಲೂ ಸಹ ಚಿತ್ರ ಪ್ರೇಕ್ಷಕರನ್ನು ಆಕರ್ಷಿಸುತ್ತ ಸಾಗಿದೆ.

ಚಿನ್ನಸ್ವಾಮಿ ಫಿಲಂಸ್ ಬ್ಯಾನರ್ ಅಡಿ ಎಚಿರಾಜ್ ಸ್ನೇಹಿತರ ಜತೆಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಜತೆಗೆ ನಿರ್ದೇಶಕರೂ ಕೈಜೋಡಿಸಿದ್ದಾರೆ. ಮಗ್ಗಿ ಪುಸ್ತಕ ಬದುಕಿನ ಲೆಕ್ಕಾಚಾರ, ನಮ್ಮ ಜೀವನವೇ ಒಂದು ಮಗ್ಗಿಪುಸ್ತಕ ಇದ್ದಂತೆ, ಇದರಲ್ಲಿ ಒಳ್ಳೆಯದನ್ನು ಕೂಡಬೇಕು, ಕೆಟ್ಟದ್ದನ್ನು ಕಳೆಯಬೇಕು, ಜ್ಞಾನವನ್ನು ಗುಣಿಸಬೇಕು, ಅಜ್ಞಾನವನ್ನು ಭಾಗಿಸಬೇಕು. ಅವನು ಎಂಬ ಕಾದಂಬರಿಯನ್ನು ಆಧರಿಸಿ ಮಾಡಿದ ಈ ಚಿತ್ರವು ನಾಲ್ಕು ಆಯಾಮಗಳಲ್ಲಿ ನಡೆಯುವ ಹೈಪರ್ ಲಿಂಕ್ ಸ್ಟೋರಿಯಾಗಿದ್ದು, ಜೀವನದ ಲೆಕ್ಕಾಚಾರವನ್ನು ಈ ಚಿತ್ರದಲ್ಲಿ ಹೇಳಲಾಗಿದೆ.



ಬೆಂಗಳೂರು, ಮೈಸೂರು, ಮಂಗಳೂರು, ನಂಜನಗೂಡು, ಶ್ರೀರಂಗಪಟ್ಟಣ, ಹೆಚ್.ಡಿ. ಕೋಟೆ ಸುತ್ತಮುತ್ತಲ ಪ್ರದೇಶಗಳಲ್ಲಿ ಸುಮಾರು 80ಕ್ಕೂ ಹೆಚ್ಚು ದಿನಗಳ ಕಾಲ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ, ಮಗ್ಗಿಪುಸ್ತಕ ಚಿತ್ರದಲ್ಲಿ ಒಟ್ಟು 7 ಹಾಡುಗಳಿದ್ದು, ಎಸ್.ಎಸ್. ನಾಣಿಪ್ಪ ಅವರ ಸಂಗೀತ ಸಂಯೋಜನೆಯಿದೆ. ಡಾ. ವಿಷ್ಣುವರ್ಧನ್ ಅಭಿನಯದ ಅಪ್ಪಾಜಿ, ಜಮೀನ್ದಾರ್ರು ಚಿತ್ರಗಳಿಗೆ ಸಂಗೀತ ನೀಡಿದ್ದ ಎಂ.ಎಂ. ಕೀರವಾಣಿ ಅವರು ಬಹಳ ದಿನಗಳ ನಂತರ ಈ ಚಿತ್ರದ ಹಾಡೊಂದಕ್ಕೆ ದನಿಯಾಗಿರುವುದು ವಿಶೇಷ. ಉಳಿದಂತೆ ಕನ್ನಡ ಗಾಯಕರಾದ ರಾಜೇಶ್ ಕೃಷ್ಣನ್, ವಿಜಯ ಪ್ರಕಾಶ್, ಕಂಬದ ರಂಗಯ್ಯ, ನವೀನ್ ಸಜ್ಜು, ಇಂದು ನಾಗರಾಜ್, ಗುರುರಾಜ್ ಹೊಸಕೋಟೆ, ಸೈಂಧವಿ, ವೈಕಂ ವಿಜಯಲಕ್ಷ್ಮಿ ಹಾಗೂ ರವೀಂದ್ರ ಸೊರಗಾವಿ ಸೇರಿದಂತೆ 17 ಜನ ಈ ಚಿತ್ರದಲ್ಲಿ ಹಾಡಿರುವುದು ಮತ್ತೊಂದು ವಿಶೇಷ.

ಈ ಹಿಂದೆ ರಮೇಶ್ ಅರವಿಂದ್ ಅಭಿನಯದ ಪುಷ್ಪಕ ವಿಮಾನ, ಪ್ರಜ್ವಲ್ ಅಭಿನಯದ ಇನ್ಸ್‌ಪೆಕ್ಟರ್ ವಿಕ್ರಮ್, ಮಾನ್ಸೂನ್ ರಾಗದಂತಹ ವಿಭಿನ್ನ ಕಥಾಹಂದರ ಇರುವ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ವಿಖ್ಯಾತ್ ಎ. ಆರ್. ಅವರು ಈ ಚಿತ್ರದ ಮೂಲಕ ಡೈರೆಕ್ಟರ್ ಕುರ್ಚಿಯನ್ನು ಅಲಂಕರಿಸಿದ್ದಾರೆ. ಐರಾ ಫಿಲಂಸ್ ಮತ್ತು ದಿ ರಾಯಲ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಸತ್ಯ ರಾಯಲ ಅವರು ಯುವರ್ ಸಿನ್ಸಿಯರ್‌ಲಿ ರಾಮ್ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ.

# ಸದ್ಯದಲ್ಲೇ ತೆರೆಗೆ ಯುವರ್ ಸಿನ್ಸಿಯರ್ ಲೀ ರಾಮ್



ಈಗಾಗಲೇ ಸಾಕಷ್ಟು ಕುತೂಹಲಗಳನ್ನು ಹುಟ್ಟು ಹಾಕಿರುವ ಯುವರ್ ಸಿನ್ಸಿಯರ್‌ಲಿ ರಾಮ್ ಚಿತ್ರದಲ್ಲಿ ಭಾವನಾತ್ಮಕ ಅಂಶಗಳ ಜತೆಗೆ ಮನರಂಜನೆಯೂ ಇರಲಿದ್ದು, ಹಲವು ಜಾನರ್‌ಗಳನ್ನು ಈ ಚಿತ್ರ ಒಳಗೊಂಡಿದೆ. ಕನ್ನಡ ಚಿತ್ರರಂಗದ ಇಬ್ಬರು ಸ್ಟಾರ್ ನಟರು ಒಟ್ಟಿಗೆ ಕಾಣಿಸಿಕೊಳ್ಳುತ್ತಿರುವ ಬಹುನಿರೀಕ್ಷಿತ ಚಿತ್ರ ಇದಾಗಿದೆ. ಸುರದ್ರೂಪಿ ನಟ ನಿರೂಪಕ ರಮೇಶ್ ಅರವಿಂದ್ ಹಾಗೂ ಕೃಷ್ಣಂ ಪ್ರಣಯ ಸಖಿ ಖ್ಯಾತಿಯ ಗೋಲ್ಡನ್ ಸ್ಟಾರ್ ಗಣೇಶ್ ಇವರಿಬ್ಬರ ಸಂಗಮದಲ್ಲಿ, ಹೊರ ಬರುತ್ತಿರುವ ಈ ನೂತನ ಚಿತ್ರದ ಬಗ್ಗೆ ಎಲ್ಲರಿಗೂ ಸಾಕಷ್ಟು ನಿರೀಕ್ಷೆಗಳಿವೆ. ಈಗಾಗಲೇ ಯುವರ್ ಸಿನ್ಸಿಯರ್‌ಲಿ ರಾಮ್ ಚಿತ್ರದ ಶೂಟಿಂಗ್ ಮುಕ್ತಾಯಗೊಂಡಿದ್ದು, ಚಿತ್ರವನ್ನು ಸದ್ಯದಲ್ಲೇ ಬಿಡುಗಡೆ ಮಾಡಲು ಚಿತ್ರತಂಡ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ.

ಯುವರ್ ಸಿನ್ಸಿಯರ್‌ಲಿ ರಾಮ್ ಒಂದು ಕಾಮಿಡಿ ಜಾನರ್ ಚಿತ್ರವಾಗಿದ್ದು, ಪ್ರೇಕ್ಷಕರಿಗೆ ಭರಪೂರ್ ಕಾಮಿಡಿ ಚಿತ್ರವನ್ನು ಉಣಬಡಿಸಲು ಚಿತ್ರತಂಡವು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ, ಚಿತ್ರದ ಕುರಿತಾಗಿ ನಿರ್ದೇಶಕ ವಿಖ್ಯಾತ್ ಮಾತನಾಡುತ್ತ ಇದೊಂದು ವಿಶೇಷವಾದ ಕಥೆ ಎನ್ನುವ ನಿರ್ದೇಶಕ ವಿಖ್ಯಾತ್, ರಮೇಶ್ ಅರವಿಂದ್ ಹಾಗೂ ಗಣೇಶ್ ಅವರಿಗೆಂದೇ ಬರೆದ ಕಥೆಯಿದು. ನಾನು ಒಬ್ಬ ನಿರ್ದೇಶಕನಾಗಬೇಕೆಂದೇ ಚಿತ್ರರಂಗಕ್ಕೆ ಬಂದವನು. ಆದರೆ, ಚಿತ್ರನಿರ್ಮಾಣ ಮಾಡುವ ಹಾಗಾಯಿತು. ಇದೇ ಮೊದಲಬಾರಿಗೆ ಚಿತ್ರ ನಿರ್ದೇಶನ ಮಾಡಿದ್ದೇನೆ. ಈ ಚಿತ್ರದ ಮೂಲಕ ಡೆಬ್ಯೂ ಮಾಡುತ್ತಿದ್ದೇನೆ ಎಂದವರು ಹೇಳಿದ್ದಾರೆ.



ಈ ಹಿಂದೆ ನಾಯಕ ನಟ ಗೋಲ್ಡನ್ ಸ್ಟಾರ್ ಗಣೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ಬಿಡುಗಡೆ ಮಾಡಲಾಗಿದ್ದ ವಿಶೇಷ ಪೋಸ್ಟರ್ ಇಡೀ ಗಾಂಧಿನಗರವನ್ನೇ ಸೆಳೆದಿತ್ತು. ಆ ಪೋಸ್ಟರ್ ಅಷ್ಟು ವಿಶೇಷವಾಗಿದ್ದೇ ಇದಕ್ಕೆ ಕಾರಣ. ಇದರಲ್ಲಿ ನಟ ಗಣೇಶ್ ಅವರು ಈ ಹಿಂದೆಂದೂ ಕಾಣದಂಥ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದರು. ಭಜರಂಗಿ ಅವತಾರದಲ್ಲಿ ಮಳೆ ಮಧ್ಯ ಗಣೇಶ್ ಅವರು ದರ್ಶನ ಕೊಟ್ಟಿದ್ದ ಹಿಮಾಲಯದ ಬ್ಯಾಕ್‌ಡ್ರಾಪ್‌ನಲ್ಲಿ ಮೂಡಿ ಬಂದಿದ್ದ ಈ ಪೋಸ್ಟರ್‌ನಲ್ಲಿ ಶ್ರೀರಾಮ ಒಂದು ಸೈಕಲ್ ಮೇಲೆ ಕುಳಿತಿದ್ದು, ಭಜರಂಗಿಯ ಭುಜದಲ್ಲಿ ಪೋಸ್ಟ್‌ಮ್ಯಾನ್ ಬ್ಯಾಗ್ ಕಾಣಿಸುತ್ತಿದೆ. ರಿಲೀಸಾಗಿರುವ ಈ ಪೋಸ್ಟರ್ ನಾನಾ ಕುತೂಹಲಗಳನ್ನು ಹುಟ್ಟುಹಾಕುವ ಜೊತೆಗೆ ಚಿತ್ರದ ಮೇಲಿನ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿತ್ತು.

ಈ ಹಿಂದೆ ರಮೇಶ್ ಅರವಿಂದ್ ಅಭಿನಯದ ಪುಷ್ಪಕ ವಿಮಾನ, ಪ್ರಜ್ವಲ್ ಅಭಿನಯದ ಇನ್ಸ್‌ಪೆಕ್ಟರ್ ವಿಕ್ರಮ್, ಮಾನ್ಸೂನ್ ರಾಗದಂತಹ ವಿಭಿನ್ನ ಕಥಾಹಂದರ ಇರುವ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ವಿಖ್ಯಾತ್ ಎ.ಆರ್. ಅವರು ಈ ಚಿತ್ರದ ಮೂಲಕ ಡೈರೆಕ್ಟರ್ ಕುರ್ಚಿಯನ್ನು ಅಲಂಕರಿಸಿದ್ದಾರೆ. ಐರಾ ಫಿಲಂಸ್ ಮತ್ತು ದಿ ರಾಯಲ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಸತ್ಯ ರಾಯಲ ಅವರು ಯುವರ್ ಸಿನ್ಸಿಯರ್‌ಲಿ ರಾಮ್ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಈ ಚಿತ್ರಕ್ಕೆ ನವೀನ್‌ಕುಮಾರ್ ಅವರ ಛಾಯಾಗ್ರಹಣ, ಹರೀಶ್ ಕೊಮ್ಮೆ ಅವರ ಸಂಕಲನ, ಜೆ.ಅನೂಪ್ ಸೀಳಿನ್ ಅವರ ಸಂಗೀತ ಸಂಯೋಜನೆ, ಗುಣ ಅವರ ಕಲಾನಿರ್ದೇಶನ ಈ ಚಿತ್ರಕ್ಕಿದೆ. ಸದ್ಯದಲ್ಲೇ ಯುವರ್ ಸಿನ್ಸಿಯರ್‌ಲಿ ರಾಮ್ ಚಿತ್ರವು ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.

# ಕೆ.ಜೆ.ಕುಮಾರ್ ಅಗಲಿಕೆ ನೋವನ್ನುಂಟುಮಾಡಿದೆ ರಜನಿಕಾಂತ್ ಕಂಬನಿ

ಕನ್ನಡ ಚಲನಚಿತ್ರ ಪತ್ರಿಕೋದ್ಯಮದ ಭೀಷ್ಮ ಎಂದೇ ಕರೆಯಲ್ಪಡುವ, ಐದು ದಶಕಗಳ ಕಾಲ ಸಿನಿಮಾ ಪತ್ರಕರ್ತರಾಗಿ ಸೇವೆ ಸಲ್ಲಿಸಿದ್ದ ಕೆ.ಜೆ.ಕುಮಾರ್ ಅವರ ನಿಧನಕ್ಕೆ ಚಿತ್ರರಂಗ, ರಾಜಕೀಯ ಹಾಗೂ ಪತ್ರಿಕೋದ್ಯಮದ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.



ವಿಶೇಷವೆಂದರೆ, ಭಾರತೀಯ ಚಿತ್ರರಂಗದ ಮೇರುನಟ, ಸೂಪರ್ ಸ್ಟಾರ್ ರಜನಿಕಾಂತ್ ಅವರು ತಮ್ಮ ಆತ್ಮೀಯ ಗೆಳೆಯನ ಅಗಲಿಕೆಗೆ ಕನ್ನಡದಲ್ಲಿಯೇ ಟ್ವೀಟ್ ಮಾಡುವ ಮೂಲಕ ಭಾವಪೂರ್ಣ ಕಂಬನಿ ಮಿಡಿದಿದ್ದಾರೆ. ನಟ ರಜನಿಕಾಂತ್ ಅವರು ತಮ್ಮ ಸಿನಿಮಾ ಪಯಣದ ಆರಂಭದ ದಿನಗಳಿಂದಲೂ ಕೆ.ಜೆ.ಕುಮಾರ್ ಅವರೊಂದಿಗೆ ಅವಿನಾಭಾವ ಒಡನಾಟ ಹೊಂದಿದ್ದರು. ರಜನಿಕಾಂತ್ ಅವರ ಚಿತ್ರರಂಗದ ಆರಂಭದ ದಿನಗಳಲ್ಲಿ ಕುಮಾರ್ ಅವರು ನೀಡಿದ ಪ್ರೋತ್ಸಾಹ ಮತ್ತು ಬೆಂಬಲವನ್ನು ರಜನಿಕಾಂತ್ ಇಂದಿಗೂ ಮರೆತಿಲ್ಲ, ಕುಮಾರ್ ಅವರ ಅಗಲಿಕೆಯ ಸುದ್ದಿ ತಿಳಿಯುತ್ತಿದ್ದಂತೆಯೇ ಭಾವುಕರಾದ ರಜನಿಕಾಂತ್, ಕನ್ನಡದಲ್ಲಿಯೇ ಟ್ವೀಟ್ ಮಾಡುವ ಮೂಲಕ ತಮ್ಮ ಸಂತಾಪ ಸೂಚಿಸಿದ್ದಾರೆ. ಅವರು ತಮ್ಮ ಎಕ್ಸ್ ಖಾತೆಯಲ್ಲಿ, ದಿವಂಗತ ಕೆ. ಜೆ.ಕುಮಾರ್ ಅವರು ನನ್ನ ಆತ್ಮೀಯ ಸ್ನೇಹಿತರು, ಆರಂಭ ಕಾಲದಿಂದಲೂ ನನ್ನ ನಟನೆಯನ್ನು ಮೆಚ್ಚಿ ಪ್ರೋತ್ಸಾಹಿಸಿದವರು. ಬಹಳ ಸರಳವಾಗಿ ಯಾವಾಗಲೂ ಹಸನ್ಮುಖಿಯಾಗಿ ಎಲ್ಲರ ಜೊತೆಯಲ್ಲಿದ್ದರು. ಅವರ ಅಗಲಿಕೆ ನನ್ನ ಮನಸ್ಸಿಗೆ ತುಂಬಾ ನೋವನ್ನು ಉಂಟುಮಾಡಿದೆ. ಅವರ ಕುಟುಂಬಸ್ಥರಿಗೆ ನನ್ನ ಸಂತಾಪಗಳು ಎಂದು ಬರೆದುಕೊಂಡಿದ್ದಾರೆ.



ಮೈಸೂರಿನಲ್ಲಿ ಪತ್ರಿಕಾರಂಗದ ಶಕ್ತಿಯಾಗಿದ್ದ ಕೆ.ಜೆ.ಕುಮಾರ್ ಅವರ ವ್ಯಕ್ತಿಬದುಕು ರೋಚಕವಾಗಿದೆ. 1969ರಲ್ಲಿ ಪತ್ರಿಕೋದ್ಯಮಕ್ಕೆ ಪಾದಾರ್ಪಣೆ ಮಾಡಿದ ಇವರು, ಸತತ 56 ವರ್ಷಗಳ ಕಾಲ ಪತ್ರಿಕಾ ರಂಗದಲ್ಲಿ ಸಕ್ರಿಯರಾಗಿ ಕೆಲಸ ಮಾಡಿದ್ದಾರೆ. ಕೆ.ಜೆ. ಕುಮಾರ್ ಅವರು ನಟ ರಜನಿಕಾಂತ್ ಅವರಿಗೆ ಮಾತ್ರವಲ್ಲ, ಕನ್ನಡ ಚಿತ್ರರಂಗದ ಅತಿರಥ, ಮಹಾರಥರಿಗೂ ಆಪ್ತರಾಗಿದ್ದರು. ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್, ಡಾ.ಅಂಬರೀಶ್ ಅವರಂತಹ ಮೇರುಕಲಾವಿದರೊಂದಿಗೆ ಇವರು ಉತ್ತಮ ಬಾಂಧವ್ಯ ಇಟ್ಟುಕೊಂಡಿದ್ದರು.

ಯಾವುದೇ ಅಹಂಕಾರ ಇಲ್ಲದೆ ಸದಾ ಚಿತ್ರರಂಗದ ಬಗ್ಗೆಯೇ ಯೋಚಿಸುತ್ತಿದ್ದ ಇವರದು ತುಂಬಾ ಸರಳ ವ್ಯಕ್ತಿತ್ವವಾಗಿತ್ತು. ಮೈಸೂರಿಗೆ ಬಂದ ಕಲಾವಿದರ‍್ಯಾರೂ ಕುಮಾರ್ ಅವರನ್ನು ಭೇಟಿಯಾಗದೆ ಹೋಗುತ್ತಿರಲಿಲ್ಲ, ಅವರ ಅಗಲಿಕೆಯಿಂದಾಗಿ ಹಳೆಯ ತಲೆಮಾರಿನ ಪತ್ರಿಕೋದ್ಯಮ ಮತ್ತು ಚಿತ್ರರಂಗದ ನಡುವಿನ ಒಂದು ಮಹತ್ವದ ಕೊಂಡಿ ಕಳಚಿದಂತಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post, Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26